
# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ ಸಂಚಿಕೆ ೩೭, ಡಿಸೆಂಬರ್ ೨೦೨೧



KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಈ ಸಂಚಿಕೆಯಲ್ಲಿ


ಸಂಪಾದಕೀಯ...೩

ಅಧ್ಯಕ್ಷರ ನುಡಿ... ೪

ಜ್ಞಾನ ಜ್ಯೋತಿ... ೬

ಯೋಗ ಸೂತ್ರ... ೭

ಈ ಹೊತ್ತಿನ ತತ್ವ...೧೦

ಕಥೆ...೧೨

ಬೃಂಕ್ಷ್ಯೆ ಸರಣಿ ... ೧೪

ಗಿರಿ ನಮನ.. ೧೭

ಕಥಾ ಚಿಂತನ ಮಾಲಿಕೆ - 6...೧೮

ವಿಜ್ಞಾನ - ತಂತ್ರಜ್ಞಾನ ... ೧೯

ಹೀಗೊಂದು ಕಥೆ... ೨೦

ಗುರುಭ್ಯೋ ನಮಃ...೨೧

ರಾಜ್ಯೋತ್ಸವ ವಿಶೇಷ .. ೨೩

ನುಡಿನಮನಗಳ "ಅಪ್ಪುಗೆ" ... ೩೧

ಭಾವ ಲಹರಿ ... ೩೪

ರುಚಿ-ಅಭಿರುಚಿ...೩೭

ಪುಟಾಣಿ ಪ್ರಪಂಚ... ೪೧

ಕ್ಯಾಮೆರಾ ಕಣ್ಣು... ೪೯


ಮುಖಪುಟ ಚಿತ್ರ: ನ್ಯೂ ಯಾರ್ಕ್ ನಗರದ ಕ್ರಿಸ್ಮಸ್ ಸಡಗರ - ಶ್ರೀವಿದ್ಯಾ ಪ್ರಶಾಂತ್

ಮೇಲಿನ ಪುಟಗಳಿಗೆ ನೇರವಾಗಿ ಹೋಗಲು, ಆಯಾ ಶೀರ್ಷಿಕೆಗಳನ್ನು ಕ್ಲಿಕ್ ಮಾಡಿ!

ಹಿಂದಿನ ಸಂಚಿಕೆಗಳು

ಫೆಬ್ರವರಿ 2021



ಏಪ್ರಿಲ್ - ೨೦೨೧




ಜೂನ್ - ೨೦೨೧



ಆಗಸ್ಟ್ - ೨೦೨೧



ಅಕ್ಟೋಬರ್ - ೨೦೨೧



ಪ್ರಿಯ ಓದುಗರೇ,

ಬೃಂದಾವನ ವಾಣಿಗೆ ಸ್ವಾಗತ!

**ಹೇ**ಮಂತನ ಆಗಮನದೊಂದಿಗೆ ಹಿಮಗಾಳಿ ಬೀಸುತ್ತಿರುವಂತೆಯೇ, ೨೦೨೧ ಚರಿತ್ರೆಯ ಪುಟಗಳಲ್ಲಿ ಸೇರಲು ತಯಾರಾಗಿ, ೨೦೨೨ ರ ಹೊಸವರ್ಷ ತನ್ನ ಬಾಗಿಲು ತೆರೆಯಲು ಸಿದ್ಧವಾಗಿರುವ ಈ ಸಂಧರ್ಭದಲ್ಲಿ ಈ ವರ್ಷದ ಕೊನೆಯ ***"ಬೃಂದಾವನ ವಾಣಿ"*** ಸಂಚಿಕೆಯನ್ನು ನಿಮ್ಮ ಮುಂದಿಡಲು ಹರ್ಷವೆನಿಸುತ್ತಿದೆ. ಮೊನ್ನೆ ಮೊನ್ನೆಯಷ್ಟೇ ಪ್ರಗತಿ ತಂಡದ ಮೊದಲ ಸಂಚಿಕೆಯನ್ನು ಪ್ರಕಟಿಸಿದ ನೆನಪು ಇನ್ನೂ ಹಸಿರಾಗಿರುವಾಗಲೇ, ವರ್ಷ ಕಳೆದಿದ್ದು ಗೊತ್ತಾಗಲೇ ಇಲ್ಲ.

ಹಲವು ಹತ್ತು ಸಮಸ್ಯೆಗಳು ಹಾಗೆಯೇ ಭರವಸೆಗಳೊಂದಿಗೆ ೨೦೨೧ ರ ವರ್ಷ ಪ್ರಾರಂಭವಾಯಿತು. ಕಳೆದ ವರ್ಷದಂತೆಯೇ (೨೦೨೦) ಈ ವರ್ಷವೂ ಸಹ ಎಲ್ಲರನ್ನೂ ಕಾಡಿದ್ದು "ಕರೋನಾ" ಎಂಬ ಭೂತವೇ! ತನ್ನ ಎರಡನೆಯ ಅಲೆ ಎಂಬ ಮರಣ ಮೃದಂಗದಿಂದ ವಿಶ್ವದೆಲ್ಲೆಡೆ ಹಲವರನ್ನು ಬಲಿ ಪಡೆದ ಈ ಭೂತವನ್ನು ಲಸಿಕೆಯ ರೂಪದಲ್ಲಿ ಕಟ್ಟಿ ಹಾಕಿ ನಿಯಂತ್ರಿಸಿದ್ದು ಮನುಕುಲದ ಅದ್ಭುತ ಸಾಧನೆಯೆಂದರೆ ತಪ್ಪಾಗಲಾರದು. ಲಸಿಕೆಯ ಕಿರಣಗಳ ವ್ಯಾಪ್ತಿ ಎಲ್ಲೆಡೆ ಹರಡುತ್ತಿದ್ದಂತೆಯೇ, ಕಳೆದ ವರ್ಷವಿಡೀ ಸ್ಥಾವರವಾಗಿದ್ದ ಬದುಕಿನ ದಿನಚರಿ ಸ್ವಲ್ಪ ಮಟ್ಟಿಗೆ ಚಲನಶೀಲತೆ ಪಡೆಯಿತು. ಶಾಲಾ ಕಾಲೇಜುಗಳು ಆರಂಭಗೊಂಡವು. ಒಲಂಪಿಕ್ಸ್. ಮ್ಯಾರಾಥಾನ್ ಸೇರಿದಂತೆ ಹಲವಾರು ಚಟುವಟಿಕೆಗಳು ಮತ್ತೆ ಚಿಗುರೊಡೆದವು. ಕರೋನ ಹೆಮ್ಮಾರಿಯನ್ನು ಹಿಮ್ಮೆಟ್ಟಿಸಲು ಲಸಿಕೆ ಅತ್ಯಂತ ಪರಿಣಾಮಕಾರಿ ಆಯುಧ ಎಂಬುದು ಈಗ ವಿದಿತವಾಗಿರುವ ವಿಷಯ.

ಬದುಕು ಸಹಜ ಸ್ಥಿತಿಯತ್ತ ಮರಳುವ ಭರವಸೆಯ ನಡುವೆ, ತನ್ನ ಹಲವಾರು ಹೆಮ್ಮೆಯ ಮಕ್ಕಳನ್ನು ಕಳೆದುಕೊಂಡು ಕನ್ನಡ ತಾಯಿ ನೊಂದಳು. ನಿಘಂಟು ತಜ್ಞ ಜಿ. ವೆಂಕಟಸುಬ್ಬಯ್ಯ, ಕವಿಗಳಾದ ಲಕ್ಷ್ಮೀನಾರಾಯಣ ಭಟ್ಟ, ಸಿದ್ದಲಿಂಗಯ್ಯ, ಜರಗನಹಳ್ಳಿ ಶಿವಶಂಕರ್ ಹಾಗು ಲೇಖಕಿ ರಾಜೇಶ್ವರಿ ತೇಜಸ್ವಿಯವರ ನಿಧನದಿಂದ ಕನ್ನಡ ಸಾರಸ್ವತ ಲೋಕ ಬಡವಾಯಿತು. ನಟ ಶಿವರಾಂ, ಮೇರು ನಟಿ ಜಯಂತಿ, ಕಲಾವಿದರಾದ ಅರವಿಂದ್, ಜಿ. ಕೆ. ಗೋವಿಂದರಾವ್, ಸಂಚಾರಿ ವಿಜಯ್, ಸತ್ಯಜಿತ್ ಮುಂತಾದವರು ಇಹಲೋಕ ತ್ಯಜಿಸಿದರು. ಪುನೀತ್ ರಾಜಕುಮಾರ್ ಅವರ ಅಕಾಲಿಕ ಮೃತ್ಯು ಕನ್ನಡಿಗರೆಲ್ಲರಿಗೂ ಆಘಾತವನ್ನುಂಟುಮಾಡಿತು. ತಮ್ಮ ಜೀವಿತಾವಧಿಯಲ್ಲಿ ಸದ್ದಿಲ್ಲದೇ ಮಾಡಿದ ಸಮಾಜಮುಖಿ ಕೆಲಸಗಳಿಂದಾಗಿ ಪುನೀತ್ ಹಲವರಿಗೆ ಪ್ರೇರಣೆಯಾಗಿ ಅಮರರಾಗಿದ್ದಾರೆ. ಪುನೀತ್ ಅವರನ್ನು ಪಡೆದ ಕನ್ನಡ ತಾಯಿ ನಿಜಕ್ಕೂ ಧನ್ಯಳು!!

ಜೀವನ ನಿಧಾನವಾಗಿ ಸಾಮಾನ್ಯ ಸ್ಥಿತಿಗೆ ಮರಳುತ್ತಿದೆ ಎನ್ನುವ ಭರವಸೆ ಬೆಳೆಯುತ್ತಿರುವಾಗಲೇ ಕರೋನ ಹೆಮ್ಮಾರಿ ಮತ್ತೆ ತನ್ನ ಕರಿನೆರಳನ್ನು ಚಾಚತೊಡಗಿದೆ. ಹೊಸ ಅವತಾರಗಳೊಂದಿಗೆ ಗ್ರೀಕ್ ವರ್ಣಮಾಲೆಯಲ್ಲಿನ ವಿವಿಧ ಅಕ್ಷರಗಳನ್ನು ನಮಗೆ ಪರಿಚಯಿಸುತ್ತಿದೆ. ಮಾಸ್ಕ್, ಸ್ಯಾನಿಟೈಜರ್, ಲಸಿಕೆ ನಮ್ಮ ಬದುಕಿನ ಅವಿಭಾಜ್ಯ ಅಂಗಗಳು ಎಂಬುದನ್ನು ಮತ್ತೆ ಮತ್ತೆ ಜ್ಞಾಪಿಸುತ್ತಿದೆ.

ಎಂದಿನಂತೆ ಹಲವು ಸ್ಥಿರ ಅಂಕಣಗಳೊಂದಿಗೆ ಈ ಸಂಚಿಕೆಯಲ್ಲಿಯೂ ವೈವಿಧ್ಯತೆ ತರಲು ಪ್ರಯತ್ನಿಸಿದ್ದೇವೆ. ಸಂಚಿಕೆ ನಿಮಗೆ ಇಷ್ಟವಾದರೆ ನಮ್ಮ ಪ್ರಯತ್ನ ಸಾರ್ಥಕ. ನಿಮ್ಮ ಸಲಹೆ, ಸೂಚನೆಗಳಿಗೆ ಸದಾ ಸ್ವಾಗತ.


ನಿತ್ಯದ ಬದುಕು ಮತ್ತೆ ಸ್ಥಾವರವಾಗದಿರಲಿ ಎಂಬ ಆಶಾಭಾವದಿಂದ ಹೊಸ ವರ್ಷವನ್ನು ಬರಮಾಡಿಕೊಳ್ಳೋಣ !!

*ನಿಮ್ಮ,*

***ಬೃಂದಾವನ ವಾಣಿ ಸಂಪಾದಕ ತಂಡ***

**ಸಂಪಾದಕ ಮಂಡಳಿ:**

**ಶ್ರೀವಿದ್ಯಾ ಪ್ರಶಾಂತ್, ಲಕ್ಷ್ಮಿ ಕೊಲಾಲ್, ಜ್ಯೋತಿ ಚಂದ್ರ, ಸತ್ಯ, ನರಸಿಂಹ ಮೂರ್ತಿ, ವಿದ್ಯಾ ಮೂರ್ತಿ, ಶೈಲಾ ಪಾಟಂಕರ್, ಪ್ರಶಾಂತ್ ಶ್ರೀನಿವಾಸ್**



# ಅಧ್ಯಕ್ಷರ ನುಡಿ



**ಆತ್ಮೀಯ ಸ್ನೇಹಿತರೇ,**

ಎಲ್ಲರಿಗೂ ನಮಸ್ಕಾರ! ಈಗಾಗಲೇ ನಾವು 2021ರ ಅಂತ್ಯಕ್ಕೆ ಕಾಲಿಡುತ್ತಿದ್ದು, ಹಿಂದಿರುಗಿ ನೋಡಿದಾಗ, ಪ್ರಗತಿ ತಂಡವು ತನ್ನ ಮೊದಲನೆಯ ವರ್ಷದಲ್ಲೇ ಸಾಕಷ್ಟು ಸಾಧನೆಯನ್ನು ಮಾಡಿ ಯಶಸ್ಸಿನ ದಾರಿಯಲ್ಲಿ ಸಾಗುತ್ತಿರುವುದನ್ನು ಕಂಡು, ತಂಡದ ಸದಸ್ಯರ ಬಗ್ಗೆ ಬಹಳ ಹೆಮ್ಮೆಯಾಗುತ್ತದೆ.

ನ್ಯೂ ಜೆರ್ಸಿಯಲ್ಲಿ ವಾಸಿಸುತ್ತಿರುವ ಪ್ರತಿ ಕನ್ನಡಿಗ ಕುಟುಂಬದವರನ್ನು ಸಂಪರ್ಕಿಸಿ, ಅವರಿಗೆ ಬೃಂದಾವನ ಕನ್ನಡ ಕೂಟದ ಅಸ್ತಿತ್ವದ ಬಗ್ಗೆ ಅರಿವು ಮೂಡಿಸುವುದು ತಂಡದ ಪ್ರಮುಖ ಉದ್ದೇಶಗಳಲ್ಲೊಂದಾಗಿತ್ತು. ರಾಜ್ಯದ ಎಲ್ಲ ಕನ್ನಡಿಗರೂ ಒಂದು ಸೂರಿನಡಿಯಲ್ಲಿ ಸೇರಿ, ಕನ್ನಡ ಭಾಷೆ, ಬಾಂಧವ್ಯವನ್ನು ಎಲ್ಲರೂ ಅನುಭವಿಸಬೇಕೆಂಬುದು ತಂಡದ ಇಚ್ಛೆಯಾಗಿತ್ತು. ತಂಡದಲ್ಲಿರುವ ನುರಿತ ತಂತ್ರಜ್ಞರ ಸಹಾಯದಿಂದ ಫೇಸ್‌ಬುಕ್, ವಾಟ್ಸಾಪ್, ಯೂಟ್ಯೂಬ್ ನಂತಹ ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಸದಸ್ಯತ್ವವನ್ನು ದ್ವಿಗುಣಗೊಳಿಸಿ, ಬೃಂದಾವನವು ಈಗ ದೊಡ್ಡ ಕುಟುಂಬವಾಗಿ ಬೆಳೆದಿದೆ ಎನ್ನಲು ಸಂತೋಷವೆನಿಸುತ್ತದೆ..

ಪ್ರಗತಿ ತಂಡದ ಮತ್ತೊಂದು ಮುಖ್ಯ ಗುರಿ ಎಂದರೆ ಸಮುದಾಯ ಸೇವೆ. ಪ್ರತಿ ಕಾರ್ಯಕ್ರಮದಲ್ಲೂ ಆರ್ಥಿಕ ಅವಶ್ಯಕತೆಯಿರುವ ಸಂಸ್ಥೆಯೊಂದನ್ನು ಗುರುತಿಸಿ, ಅದಕ್ಕೆ ಕೈಲಾದ ಸಹಾಯ ಮಾಡುವ ಗುರಿಯನ್ನು ತಂಡವು ಹೊಂದಿದೆ. ಈ ವರ್ಷದ ಬೃಂದಾವನ ವಿಹಾರದಲ್ಲಿ TASK (Trenton Area Soup Kitchen) ಸಂಸ್ಥೆಗಾಗಿ ನಿಧಿ ಸಂಗ್ರಹಿಸಿ, ಸ್ವತಃ ನಮ್ಮ ಪ್ರಗತಿ ತಂಡವೇ ಸಂಸ್ಥೆಗೆ ಭೇಟಿ ನೀಡಿ, ಅಲ್ಲಿ ನಿರಾಶ್ರಿತ ಕುಟುಂಬಗಳಿಗೆ ಉಚಿತ ಊಟವನ್ನು ನೇರವಾಗಿ ವಿತರಣೆಯನ್ನು ಮಾಡಿ, TASK ಸಂಸ್ಥೆಯ ಕೃತಜ್ಞತೆಗೆ ನಮ್ಮ ಬೃಂದಾವನದ ಕನ್ನಡಿಗರು ಪಾತ್ರರಾಗಿದ್ದಾರೆ. ಈ ಸದುದ್ದೇಶಕ್ಕೆ ಸಹಾಯ ನೀಡಿದ ಎಲ್ಲ ಸದಸ್ಯರಿಗೆ ನನ್ನ ಧನ್ಯವಾದಗಳು.

2021ರಲ್ಲಿ ಈ ದೇಶದಲ್ಲಿ ನಮ್ಮಲ್ಲಿ ಬಹುಪಾಲು ಮಂದಿ ಲಸಿಕೆಯನ್ನು ಪಡೆದೆವು. ಆದರೆ ನಮ್ಮ ಭಾರತ ದೇಶದಲ್ಲಿ ಅನಿರೀಕ್ಷಿತ ಡೆಲ್ಟಾ ವೇರಿಯಂಟ್ ಉಲ್ಬಣಗೊಂಡಾಗ, ಊಹೆಗೂ ನಿಲುಕದ ಸಂಖ್ಯೆಯಲ್ಲಿ ಅನೇಕ ಜೀವಗಳು ಬಲಿಯಾಗಿ ನಮ್ಮ ಮಾತೃಭೂಮಿ ಬಹಳವಾಗಿ ತತ್ತರಿಸಿತು. ಸಾವಿರಾರು ಮೈಲಿ ದೂರದಲ್ಲಿದ್ದು, ನಮ್ಮ ತಾಯ್ನಾಡಿನ ದುಃಸ್ಥಿತಿಗೆ ಮೂಕ ಸಾಕ್ಷಿಯಾಗಿದ್ದೇನೆ ಎನ್ನುವ ವಿಷಯ ನೋವುಂಟುಮಾಡುತ್ತದೆ.. "ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ" ಎನ್ನುವುದಕ್ಕೆ ಸಾಕ್ಷಿಯಾಗಿ ನಮ್ಮ ಪ್ರಗತಿ ತಂಡವು ತ್ವರಿತವಾಗಿ ಕಾರ್ಯಪ್ರವೃತ್ತವಾಗಿ 5 ದಿನಗಳಿಗಿಂತ ಕಡಿಮೆ ಅವಧಿಯಲ್ಲಿ, ಬೆಂಗಳೂರು ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿನ COVID ಪರಿಹಾರಕ್ಕಾಗಿ $10,000 ದೇಣಿಗೆ ಸಂಗ್ರಹಿಸಿತು. ಅತ್ಯಂತ ಕಡಿಮೆ ಸಮಯದಲ್ಲಿ ಇಷ್ಟು ದೊಡ್ಡ ಮೊತ್ತದ ಹಣವನ್ನು ಸಂಗ್ರಹಿಸಲು ಸಹಾಯ ಮಾಡಿದ ಕನ್ನಡಿಗರ ಔದಾರ್ಯಕ್ಕೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನಮ್ಮ ಸಾಹಿತ್ಯ ಬೃಂದಾವನ ತಂಡದ ಬಗ್ಗೆ ನನಗೆ ತುಂಬಾ ಹೆಮ್ಮೆಯಿದೆ. ತಂಡದ ಸದಸ್ಯರ ಭಾಷೆಯ ಮೇಲಿನ ಪ್ರೀತಿ, ಕನ್ನಡ ಭಾಷೆಯ ಆಳವಾದ ಜ್ಞಾನ, ಬೃಂದಾವನದ ಸದಸ್ಯರೆಲ್ಲರ ಗೌರವಕ್ಕೆ ಪಾತ್ರವಾಗಿದೆ. ಪ್ರತಿ 2 ತಿಂಗಳಿಗೊಮ್ಮೆ ಉತ್ತಮ ಗುಣಮಟ್ಟದ ಬೃಂದಾವನ ವಾಣಿಯ ಸಂಚಿಕೆಗಳನ್ನು ಹೊರತರುತ್ತಿರುವ ಸಂಪಾದಕೀಯ ತಂಡಕ್ಕೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನಮ್ಮ ಬೃಂದಾವನ ಕನ್ನಡ ಶಾಲೆ, ಎಲ್ಲಾ ಆಸಕ್ತ ವಿದ್ಯಾರ್ಥಿಗಳಿಗೆ ಉಚಿತ ಕನ್ನಡ ಶಿಕ್ಷಣವನ್ನು ನೀಡುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಈ ಪ್ರತಿಭಾವಂತ ಪುಟಾಣಿಗಳು ಕನ್ನಡದಲ್ಲಿ ಮಾತನಾಡುವ ಮತ್ತು ಕನ್ನಡ ಓದುವ ಕೌಶಲ್ಯವನ್ನು ನೋಡಿದಾಗ ವಿಸ್ಮಯವೆನಿಸುತ್ತದೆ. ಮಕ್ಕಳಿಗೆ ಕನ್ನಡದಲ್ಲಿ ಓದಿ, ಬರೆದು, ಮಾತನಾಡಲು ಕಲಿಯುವ ಉತ್ಸಾಹ ಕುಗ್ಗದಿರಲು ಲೆಕ್ಕವಿಲ್ಲದಷ್ಟು ಗಂಟೆಗಳ ವೈಯಕ್ತಿಕ ಸಮಯವನ್ನು ವಿನಿಯೋಗಿಸುತ್ತಿರುವ ಕನ್ನಡ ಶಾಲಾ ಶಿಕ್ಷಕರ ಸೇವೆ ನಿಜಕ್ಕೂ ಶ್ಲಾಘನೀಯ.

ಈ ವರ್ಷದ ಜನವರಿ 2021 ರಲ್ಲಿ ಹೊರಾಂಗಣ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಉತ್ಸುಕರಾಗಿದ್ದ ಅನೇಕ ಸದಸ್ಯರು, ಕೋವಿಡ್ ನ ಹಠಾತ್ ಏರಿಕೆಯಿಂದ ನಿರಾಶೆಗೊಂಡರು. ಆದರೆ ಪ್ರಗತಿ ತಂಡವು ಸಮುದಾಯದ ಹಿತದೃಷ್ಟಿಯಿಂದ ಹೊಸ ವರ್ಷದ ಆರಂಭವನ್ನು ಧನಾತ್ಮಕವಾಗಿ ಹಾರ್ಟ್‌ಫುಲ್‌ನೆಸ್ ಯೋಗ ಶಿಬಿರದೊಂದಿಗೆ ಆರಂಭಿಸಿತು. ಈ 8 ವಾರಗಳ ಶಿಬಿರದಲ್ಲಿ ಬರಿಯ ಕನ್ನಡಿಗರಷ್ಟೇ ಅಲ್ಲದೆ ಆಸಕ್ತಿಯುಳ್ಳ ಯಾರು ಬೇಕಾದರೂ ಭಾಗವಹಿಸುವ ಅವಕಾಶವನ್ನು ಕಲ್ಪಿಸಲಾಯಿತು. ಹಾರ್ಟ್‌ಫುಲ್‌ನೆಸ್ ಇನ್‌ಸ್ಟಿಟ್ಯೂಟ್‌ನ ಈ ಶಿಬಿರವು ಮುಂಬರುವ ಕಾರ್ಯಕ್ರಮಗಳ ಸರಣಿಗೆ ಭದ್ರ ಬುನಾದಿ ಹಾಕಿತು ಎಂದರೆ ತಪ್ಪಾಗಲಾರದು. ಇದೇ ಉತ್ಸಾಹದೊಂದಿಗೆ 2021 ರ ನಮ್ಮ ಮೊದಲ ಸಾಂಸ್ಕೃತಿಕ ಕಾರ್ಯಕ್ರಮವಾದ ಮಕರ ಸಂಕ್ರಾತಿ ಹಬ್ಬವನ್ನು ಆಚರಿಸಲಾಯಿತು.

ಇದರ ಬೆನ್ನಲ್ಲೇ 3 ದಿನಗಳ ಅದ್ದೂರಿ ವಸಂತೋತ್ಸವ ಆಚರಣೆಯೂ ನಡೆಯಿತು. ಸದಸ್ಯರ ಮನೆಗಳಿಗೆ A2Bಯ ಕೆಲವು ಶಾಖೆಗಳಿಂದ ಬಾಕ್ಸ್ ಮಾಡಿದ ಹಬ್ಬದೂಟದ ವಿತರಣೆ ಮಾಡುವುದು ಕಾರ್ಯಕ್ರಮದ ಪ್ರಮುಖ ಅಂಶವಾಗಿತ್ತು. ಈ ಹೊಸ ವ್ಯವಸ್ಥೆಯನ್ನು ಪ್ರೋತ್ಸಾಹಿಸಿ, ವಿತರಣೆ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಹಾಯ ಹಸ್ತವನ್ನು ನೀಡಿದ ನಮ್ಮ ಸದಸ್ಯರಿಗೆ ಇದೊಂದು ಸಂತಸದ ಅನುಭವವಾಗಿತ್ತು.

ಈಗಾಗಲೇ ಅಸ್ತಿತ್ವದಲ್ಲಿದ್ದ ವೆಬ್‌ಸೈಟ್ ಅನ್ನು ನವೀಕರಿಸಿ, ಸುಂದರವಾಗಿ ವಿನ್ಯಾಸಗೊಳಿಸಿ ಎಲ್ಲ ಸದಸ್ಯರು ಸುಲಭವಾಗಿ ಉಪಯೋಗಿಸಲು ಅನುಕೂಲವಾಗುವಂತೆ ಪುನರ್ನಿಮಿಸಲಾಯಿತು. ಈ ನವೀಕರಿಸಿದ ವೆಬ್‌ಸೈಟನ್ನು ಅಂತಾರಾಷ್ಟ್ರೀಯ ಮಹಿಳಾ ದಿನದಂದು ಬೃಂದಾವನದ ಮಾಜಿ ಅಧ್ಯಕ್ಷಿಣಿಯರ ಸಮ್ಮುಖದಲ್ಲಿ ಉದ್ಘಾಟಿಸಲಾಯಿತೆನ್ನುವುದು ಹೆಮ್ಮೆಯ ವಿಷಯ.

ಯುವ ಬೃಂದಾವನದ ಚೈತನ್ಯ ಮತ್ತು ಉತ್ಸಾಹವು ಯಾರನ್ನಾದರೂ ಬೆರಗುಗೊಳಿಸುವಂತಹುದು! ಈ ಯುವ ಪೀಳಿಗೆಯ ಸಾಮಾಜಿಕ ಜವಾಬ್ದಾರಿ ಮತ್ತು ಸಮುದಾಯಕ್ಕೆ ಮರಳಿ ನೀಡುವಂತಹ ಮೌಲ್ಯಗಳು ನಿಜಕ್ಕೂ ಹೆಮ್ಮೆಯ ವಿಷಯ.

ಬೃಂದಾವನ ವನವಿಹಾರದ ನಂತರ ಈ ವರ್ಷದ ಪದವೀಧರರನ್ನು ಸಮುದಾಯಕ್ಕೆ ಪರಿಚಯಿಸಲಾಯಿತು. ಯುವ ಬೃಂದಾವನ ಮಂಡಳಿಯು ನಮ್ಮ ಮಕ್ಕಳನ್ನು ಪ್ರೋತ್ಸಾಹಿಸಲು ನಾಸಾ (NASA) ಇಂಜಿನಿಯರ್‌ನಿಂದ ಹಿಡಿದು ವೈದ್ಯಕೀಯ ವೃತ್ತಿಪರರವರೆಗಿನ ಗೌರವಾನ್ವಿತ ಪ್ಯಾನೆಲಿಸ್ಟ್‌ಗಳನ್ನು ಆಹ್ವಾನಿಸಿತ್ತು.

ಈ ವರ್ಷದ ಗಣೇಶೋತ್ಸವವನ್ನು ನಮ್ಮ ಸಹೋದರಿ ಕೂಟಗಳಾದ ತ್ರಿವೇಣಿ ಮತ್ತು ನವೋದಯ ಕೂಟಗಳೊಂದಿಗೆ ಆಚರಿಸಿ ಬೃಂದಾವನ ಸಂಸ್ಥೆಯು ಒಂದು ಹೊಸ ದಾಖಲೆಯನ್ನೇ ಸೃಷ್ಟಿಸಿತು.

ಮೊಟ್ಟಮೊದಲ ಬೃಂದಾವನ 5K ಓಟ ಯಶಸ್ವಿಯಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಚಳಿಯ ಹವಾಮಾನ ಮತ್ತು ಕೆಲವು ಅನಿಶ್ಚಿತ ಪರಿಸ್ಥಿತಿಗಳಿದ್ದರೂ ನಮ್ಮ ಬೃಂದಾವನ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಬೆಂಬಲವನ್ನು ತೋರಿದುದಕ್ಕೆ ನಾನು ಎಲ್ಲರಿಗೂ ಋಣಿಯಾಗಿದ್ದೇನೆ.

ಹಲವು ಅನಿವಾರ್ಯ ಕಾರಣಗಳಿಂದಾಗಿ, ನಮ್ಮ ವಾರ್ಷಿಕೋತ್ಸವ ಮತ್ತು ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ರದ್ದುಗೊಳಿಸಬೇಕಾಯಿತು. ಮುಂಬರುವ 2022 ಆಶಾದಾಯಕವಾಗಿರುತ್ತದೆಂದು ನಂಬಿ, ಜನವರಿಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ನಿಮ್ಮೆಲ್ಲರನ್ನೂ ಸ್ವಾಗತಿಸಲು ನಾವು ಎದುರು ನೋಡುತ್ತಿದ್ದೇವೆ.

ಅಲ್ಲಿಯವರೆಗೆ, ಎಲ್ಲರೂ ಸುರಕ್ಷಿತವಾಗಿದ್ದು, ಕ್ರಿಸ್ಮಸ್ ಮತ್ತು ಹೊಸವರ್ಷವನ್ನು ಆನಂದದಿಂದ ಬರಮಾಡಿಕೊಳ್ಳುವಿರೆಂದು ಆಶಿಸುತ್ತೇನೆ.

ಧನ್ಯವಾದಗಳು

**ನಿಮ್ಮ,**
**ಪದ್ಮಿನಿ ಹೇಮಂತ್**
ಅಧ್ಯಕ್ಷರು,
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ



# ಭರವಸೆಯ ಬೆಳಕು



**ಶ್ರೀ ಯೋಗೀಂದ್ರ ಭಟ್ ಉಳಿ.** *ಶ್ರೀ ಕೃಷ್ಣವೃಂದಾವನ, ನ್ಯೂಜರ್ಸಿ.*

ಮನಸ್ಸು ಎಂಬುವುದೊಂದು ಅದ್ಭುತ! ಸಹಜವಾಗಿಯೇ ಅದು ಅಪಾರ ಮತ್ತು ವಿಶಾಲ, ಅಕಾಶದಂತೆ!

ಒಂದೊಮ್ಮೆ ಶುದ್ಧವಾದ ನೀಲ ಗಗನದಲ್ಲಿ ಅಚ್ಚ ಬಿಳಿಯ ಸ್ವಚ್ಛ ಮೋಡಗಳು ಯಥೇಚ್ಛವಾಗಿ ತಿರುಗಾಡುತ್ತಾ ಆಗಸದ ಅಗಾಧತೆಯನ್ನು ಎತ್ತಿ ತೋರಿಸಿದರೆ, ಮತ್ತೊಮ್ಮೆ ದಟ್ಟವಾಗಿ ಆವರಿಸಿದ ಕಪ್ಪು ಮೋಡಗಳು ಪ್ರಖರ ಬೆಳಕನ್ನೀವ ಸೂರ್ಯನನ್ನೇ ಮರೆಮಾಚಿಸಿಬಿಡುತ್ತವೆ! ಅಪಾರವಾದ ಆಕಾಶದ ವೈಶಾಲ್ಯಕ್ಕೂ ಮೆತ್ತಿಕೊಳ್ಳುವ ಕ್ಷಣಿಕವಾದ ಸಂಕುಚಿತತೆಯನ್ನು ಮೆರೆಸಿಬಿಡುತ್ತವೆ.

ನಮ್ಮ ಮನಸ್ಸಿಗೂ ಅದೇ ಆವೇಶ! ಸದ್ಭಾವನೆಗಳ ಪ್ರಭಾವಕ್ಕೊಳಗಾಗಿ ಒಮ್ಮೊಮ್ಮೆ ಉದಾರವಾಗಿ ತೆರೆದುಕೊಳ್ಳುವ ಮನಸ್ಸು ಭಯ, ಆತಂಕ, ದುಃಖ, ದುಮ್ಮಾನಗಳ ವಶವಾದಾಗ ತೀರಾ ಚಿಕ್ಕದಾಗಿ ಬಿಡುತ್ತದೆ. ಮುಂದೆ ಹೆಜ್ಜೆಯಿಡಲಾರದಷ್ಟು ಜಾಗವಿಲ್ಲವೆಂಬಂತೆ ಕುಸಿದು ಕುಗ್ಗಿ ಹೋಗುತ್ತದೆ. ನಿರ್ದಿಷ್ಟವಾಗಿ ಯೋಚಿಸುವುದನ್ನೇ ನಿಲ್ಲಿಸಿ ಬಿಡುತ್ತದೆ!

ಆದರೂ ನೆನಪಿರಲಿ, ಅದು ಕ್ಷಣಿಕ ! ಅಪಾರವಾದ ನೀರನ್ನು ಗರ್ಭದಲ್ಲಿ ಹೊತ್ತು ಮಧ್ಯಾಹ್ನದ ಸೂರ್ಯನನ್ನೋ , ಹುಣ್ಣಿಮೆಯ ಚಂದಿರನನ್ನೋ ಮರೆಗೆ ಸರಿಸಿದ ಮೋಡಕ್ಕೂ ಪ್ರಸವವೆನ್ನುವುದಿದೆ! ಮಳೆ ನಿಂತ ಮೇಲೆ ಆಕಾಶ ಶುದ್ಧವಾಗಿ ಬಿಡುತ್ತದೆ! ತನ್ನ ವೈಶಾಲ್ಯವನ್ನು ಮತ್ತೆ ಮೆರೆಯುತ್ತದೆ !



ಜೀವನದಲ್ಲಿ ಸಮಸ್ಯೆಗಳಿದ್ದಾಗ ಮನಸ್ಸನ್ನು ಚಿಂತೆ ಆವರಿಸಿಬಿಡುತ್ತದೆ. ಅದು ಸಹಜ. ಇದಕ್ಕೆ ಯಾರೂ ಹೊರತಲ್ಲ. ಏಕೆಂದರೆ ಚಿಂತೆಗೆ ಕಾರಣವಾದ ಸವಾಲು, ಸಮಸ್ಯೆಗಳಿಲ್ಲದ ಮನಸ್ಸುಗಳೇ ಇಲ್ಲ, ಈ ಲೋಕದಲ್ಲಿ !

ಮೇಘಚ್ಛನ್ನವಾದ ಕಡುನೀಲ ಗಗನದಲ್ಲಿ ಇದ್ದಕ್ಕಿಂದಂತೆ ಕಾಣಿಸಿಕೊಳ್ಳುವ ಮಿಂಚು, ದಟ್ಟಕತ್ತಲನ್ನೂ ಸೀಳಿ ತನ್ನ ಬೆಳಕಿನಿಂದ ಮತ್ತೆ ಎಲ್ಲವನ್ನೂ ತೋರಿಸಿಕೊಡುತ್ತದೆ. ಅದು ಅತ್ಯಂತ ಕ್ಷಣಿಕವಾದರೂ ಕಾರ್ಗತ್ತಲನ್ನೊಮ್ಮೆ ಬಲವಾಗಿ ಬದಿಗೆ ಸರಿಸುವುದರಿಂದ ಬೆಳಕಿನ ಭರವಸೆಯನ್ನು ಸೃಷ್ಟಿಸುತ್ತದೆ.

ಚಿಂತೆ, ಸಂತಾಪಗಳಿಂದ ಕುಸಿದು ಕುಳಿತ ಮನಸ್ಸಿನಲ್ಲೂ ಮಿಂಚಿನಂತೆ ಹೊಳೆಯುವ ಹೊಚ್ಚ ಹೊಸ ಯೋಚನೆಗಳು, ಕಲ್ಪನೆಗಳು ಭರವಸೆಯ ಬೆಳಕನ್ನು ಮೂಡಿಸುತ್ತವೆ. ಜೀವನದಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತವೆ.

ಮಳೆ ಸುರಿದು ಬರಿದಾಗಿ ಮೋಡಗಳೆಲ್ಲ ಮರೆಯಾದಾಗ ಶುಭ್ರವಾದ ಆಕಾಶಕ್ಕೂ ಸಂಕಷ್ಟದಿಂದ ಬಿಡುಗಡೆಯೆಂಬುವುದಿಲ್ಲ! ಇನ್ನು ನನ್ನನ್ನು ಬಾಧಿಸುವವರು ಯಾರೂ ಇಲ್ಲ, ನಾನಿನ್ನು ಶಾಶ್ವತವಾಗಿ ಕ್ಷೇಮ ಎಂದು ನಿಟ್ಟುಸಿರು ಬಿಟ್ಟು ನೆಮ್ಮದಿಯಾಗಿರಲೂ ಸಾಧ್ಯವಿಲ್ಲ! ಏಕೆಂದರೆ, ಒಮ್ಮೆ ಕಳಚಿಕೊಂಡ ಕಪ್ಪು ಮೋಡಗಳು ಮತ್ತೆ ಯಾವಾಗ ಮೆತ್ತಿ ಕೊಳ್ಳುತ್ತವೆ ಎಂದು ಹೇಳಲು ಬರುವುದಿಲ್ಲ!

ನಮ್ಮ ಮನಸ್ಸಿಗೂ ಹಾಗೆಯೇ. ಅಪಾಯಗಳಿಂದ ಪಾರಾಗುವ ಉಪಾಯಗಳನ್ನೊಮ್ಮೆ ಕಂಡುಕೊಂಡ ಬಳಿಕವೂ ನೆಮ್ಮದಿಯೆಂಬುವುದಿಲ್ಲ. ಮತ್ತೆ ಬಂದು ಬಾಧಿಸುವ ಸವಾಲುಗಳ ಬಗೆಗಿನ ಎಚ್ಚರವಿರಲೇಬೇಕಲ್ಲ? . ಆದರೂ ನಡುನಡುವೆ ಸಿಗುವ ಅವಕಾಶದಲ್ಲಿ ಅಪೂರ್ವವಾದದ್ದನ್ನು ಸಾಧಿಸುವ ನಮ್ಮ ಛಲ, ಸಂಕಲ್ಪವಿದೆಯಲ್ಲ, ಅದುವೇ ಜೀವನ.

ಉದಯಿಸುವ ಮುನ್ನವೂ ಕತ್ತಲು. ಅಸ್ತಮಿಸಿದ ಮೇಲೂ ಕತ್ತಲು. ಎಷ್ಟು ಸಲ ಬಂದು ಸಂಪೂರ್ಣ ಗುಡಿಸಿ, ಸಾರಿಸಿ ಹೋದರೂ ಮತ್ತೆ ಬೆನ್ನು ಹತ್ತುವ ಕಾರ್ಗತ್ತಲು! ಆದರೂ ಬೇಸರಿಸಿಕೊಳ್ಳದೆ ಮತ್ತೆ ಮತ್ತೆ ಮೂಡಿಬರುವ ನೇಸರ ನಿತ್ಯವೂ ಆಗಸದೆತ್ತರಕ್ಕೇರಿ ಲೋಕವನ್ನೆಲ್ಲ ಬೆಳಗುವಂತೆ ನಮ್ಮ ಜೀವನೋತ್ಸಾಹವೂ ಕುಗ್ಗದಿರಲಿ!

ನಿನ್ನೆಯ ತನಕದ ನಮ್ಮ ಸಮಯವನ್ನು ಸವೆಸಿ ಸತ್ತುಹೋದ ಸವಾಲುಗಳು ಮರೆತು ಮರೆಯಾಗಿ ಹೋಗಲಿ. ನಾಳೆಯ ಬಗೆಗಿನ ನಮ್ಮ ಆತಂಕವೂ ಬದಿಗೆ ಸರಿಯಲಿ. ಶುದ್ಧ ಮನಸ್ಸಿಗೆ ಸಂಪೂರ್ಣವಾಗಿ ಸರಿಯೆಂದು ತೋರಿದ ಮೇಲೆ ಮುಂದುವರಿಯಲು ಬಯಸಿದ ನಮ್ಮ ಇಂದಿನ ದಾರಿ ಸುಗಮವಾಗಿರಲಿ.

ಎರಡು ಸಾವಿರದ ಇಪ್ಪತ್ತೆರಡು ಬರಡಾಗದಿರಲಿ! ಎಲ್ಲರ ಬಯಕೆಗಳನ್ನು ಈಡೇರಿಸಲಿ.



# ಪತಞ್ಜಲಿ ಯೋಗ ಸೂತ್ರ: ಸಮಾಧಿ ಪಾದ ಸೂತ್ರ 10-11

ಅನನ್ತ ಅಮ್ಬುಗ

ॐ

**ಅಪ್ಪೊ ದೀಪೋ ಭವ - ನಿನಗೆ ನೀನೇ ಬೆಳಕಾಗು -ಭಗವನ್ ಬುದ್ಧ**

**ಯೋಗೇನ ಚಿತ್ತಸ್ಯ ಪದೇನ ವಚಾಮ್ ಮಲಮ್ ಶರೀರಸ್ಯ ಚ ವೈದ್ಯಕೇನ ಯೋಪಾಕರೋತ್ತಮ್ ಪ್ರವರಮ್ ಮುನೀನಾಮ್ ಪತಞ್ಜಲಿಂ ಪ್ರಾಞ್ಜಲಿರಾನತೋಸ್ಮಿ**

**ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ - ಹುಟ್ಟಿದವರು ಸಾಯಲೇ ಬೇಕು, ಸತ್ತವರು ಹುಟ್ಟಲೇ ಬೇಕು. ಆದ್ದರಿನ್ದ, ಈ ಅಪರಿಹಾರ್ಯ/ಅನಿವಾರ್ಯವಾದ ಸ್ಥಿತಿಯು ದು:ಖ ಪಡುವುದಕ್ಕೆ ಅರ್ಹವಾದುದಲ್ಲ - ಭಗವಾನ್ ಕೃಷ್ಣ, ಭಗವದ್ಗೀತೆ ಸಾಙ್ಖ್ಯ ಯೋಗ ಶ್ಲೋಕ ೨೭**

**ಪರೇ ಚ ನ ವಿಜಾನಾತಿ ಮಯಮೇತ್ತಾ ಯಮನಸೆ ಯೆ ಚ ತತ್ಥ ವಿಜಾನಾತಿ ತತೋ ಸಮ್ಮನ್ತಿ ಮೇಧಗ - ಪರರು ಅನ್ದರೆ, ಜ್ಞಾನಿಗಳಲ್ಲದವರು ಹುಟ್ಟಿದವರೆಲ್ಲರೂ ಸಾಯಲೇ ಬೇಕೆಮ್ಬುದನ್ನು ಅರಿತುರುವುದಿಲ್ಲ, ಆದ್ದರಿನ್ದ ವ್ಯಸನ ಪಡುತ್ತಾರೆ. ಜ್ಞಾನಿಗಳು ಹುಟ್ಟಿದವರೆಲ್ಲರೂ ಸಾಯಲೇಬೇಕೆಮ್ಬುದನ್ನು ಅರಿತಿರುತ್ತಾರೆ, ಆದ್ದರಿನ್ದ ವ್ಯಸನ ಪಡುವುದಿಲ್ಲ - ಭಗವಾನ್ ಬುದ್ಧ, ಧಮ್ಮಪದ ಸೂತ್ರ ೬**

## ಮುನ್ನುಡಿ

ವೃತ್ತಿಗಳ ಬಗ್ಗೆ ಚರ್ಚೆಯನ್ನು ಮುನ್ದುವರೆಸುತ್ತಾ, ಈ ಸಞ್ಚಿಕೆಯಲ್ಲಿ ಕೊನೆಯ ಎರೆಡು ವೃತ್ತಿಗಳಾದ ನಿದ್ರೆ ಮತ್ತು ಸ್ಮೃತಿಗಳನ್ನು ನೋಡೋಣ. ಸಾಮನ್ಯವಾಗಿ, ಲೋಕಾರೂಢಿಯಲ್ಲಿ ರಾತ್ರಿಯವೇಳೆ ಅಥವಾ ದೇಹ-ಮನಸ್ಸುಗಳು ದಣಿದಾಗ ಹಾಸಿಗೆಯ ಮೇಲೆ ಕಾಲು ಚಾಚಿ ಮಲಗುವ ಕ್ರಿಯೆಗೆ ನಿದ್ರೆಯೆನ್ದು, ಹಿನ್ದೆ ಪರಿಚಿತರಾದ ವ್ಯಕ್ತಿಯು ನಮ್ಮ ಮುನ್ದೆ ಬನ್ದಾಗ ಅವರನ್ನು ಗುರುತಿಸುವ ಕ್ಷಮತೆಗೆ, ಮನೆಯಲ್ಲಿ ಓದಿಕೊಣ್ಡು ಹೋಗಿದ್ದ ವಿಷಯದ ಬಗ್ಗೆ ಪರೀಕ್ಷೆಯಲ್ಲಿ ಪ್ರಶ್ನೆ ಕೇಳಿದಾಗ, ಸರಿಯಾದ ಉತ್ತರ ಬರಯುವ ಕ್ಷಮತೆ ಮತ್ತು ಈ ರೀತಿಯ ಪ್ರತ್ಯುತ್ಪನ್ನಗೊಳಿಸುವ ಕ್ಷಮತೆಗೆ ಸ್ಮೃತಿ ಎನ್ದು ಕರೆಯುತ್ತೇವೆ. ಆದರೆ, ಈ ಎರೆಡು ತತ್ವಗಳು ಅಷ್ಟು ಅನವಹ್ವರವಾದುದಲ್ಲ(straightforward). ಈ ಎರೆಡು ತತ್ವಗಳಿಗೆ ( ವೃತ್ತಿಗಳಿಗೆ) ಅದರದೇ ಆದ ರಾದ್ಧಾನ್ತಿತ ಪ್ರಚರ್ಯಗಳಿವೆ (established process). ಇಷ್ಟೇ ಅಲ್ಲದೇ ನಿದ್ರೆಗೂ ಸ್ಮೃತಿಗೂ, ಅವುಗಳ ಪ್ರಚರ್ಯಗಳಲ್ಲಿ ಕೆಲವು ಆಮರ್ಶಗಳಿವೆ(similarities) - ವ್ಯಕ್ತಮವಾಗಿ (obviously) ಇವೆರೆಡಕ್ಕೂ ಬಹಳ ವ್ಯತ್ಯಾಸಗಳೂ ಇದೆ. "ಎಚ್ಚರವಾಗಿದ್ದಾಗಲೇ ನಿದ್ದೆ ಮಾಡುತ್ತಿದ್ದಾನೆ" ಎಮ್ಬ ಉದ್ಗಾರವು ಯೋಗದ ನಿಲುವಿನಲ್ಲಿ ಅಸತ್ಯಸನ್ನಿಭವೂ ಅಲ್ಲ (unlikely), ಅನೂಹ್ಯವೂ ಅಲ್ಲ(inconceivable). ನಿದ್ರೆ ಮತ್ತು ಸ್ಮೃತಿಗಳನ್ನು ಸನಾತನ ಧರ್ಮದ ಎಲ್ಲ ದರ್ಶನಗಳೂ, ಅದರಲ್ಲೂ ಯೋಗ ಮತ್ತು ಬೌದ್ಧ ದರ್ಶನಗಳು ಪುರೂಚಿಕವಾಗಿ(comprehensively) ಅಧ್ಯಯನ ಮಾಡಿವೆ ಮತ್ತು ವಿವಿನಕ್ತಿಸಿವೆ. ಓದುಗರು ಇವುಗಳ ಬಗ್ಗೆ ಇನ್ನೂ ಹೆಚ್ಚು ತಿಳಿಯಲು ಇಚ್ಚಿಸಿದರೆ, ಯೋಗ-ವಶಿಷ್ಠ, ವಸುಬನ್ಧುವಿನ ಅಭಿಧಮ್ಮ, ಮಣ್ಡೂಕ್ಯ ಉಪನಿಷತ್ತು, ಸತಿ ( ಸಂಸ್ಕೃತ ಸ್ಮೃತಿ) ಪತ್ತಾನ ಸುತ್ತ ಮುನ್ತಾದವುಗಳನ್ನು ನಿಪಠಿಸಬಹುದು.

**ಅಥ ಸಮಾಧಿ ಪಾದ:**

**ಸೂತ್ರ ೧೦: ಅಭಾವ ಪ್ರತ್ಯಯಾಲಮ್ಬನಾವೃತ್ತಿರ್ನಿದ್ರಾ । ಸೂತ್ರ ೧೧: ಅನುಭೂತ ವಿಷಯಾಸಮ್ಪ್ರಮೋಷ: ಸ್ಮೃತಿ:**

## ಅರ್ಥಗತಿ

**ಸೂತ್ರ** ೧೦: ಅಭಾವ = ವೈಧುರ್ಯ ಅಥವಾ ಇಲ್ಲದಿರುವಿಕೆ (absence of) ; ಪ್ರತ್ಯಯ = ಕಾರಣ, ಬೈಜಿಕ ಅಥವಾ ನಿಬನ್ಧನೆ(reason, causal or basis) ; ಆಲಮ್ಬನಾ = ಆ + ಲಮ್ಬನ (ಲಮ್ಬ). ಲಮ್ಬನ =ಸರದ ಹಾಗೆ ಜೋತಾಡುವುದು; ಆಲಮ್ಬನ, ಜೋತಾಡುವಿಕೆ ಅನ್ದರೆ, ಯಾವುದರೋ ಒನ್ದರ ಮೇಲೆ ( ಕತ್ತಿನ ಮೇಲೆ) ಸರ ಜೋತಾಡುವಹಾಗೆ, ಯಾವುದೋ ಒನ್ದು ವಿಷಯದ ಮೇಲೆ ವೇಶ್ಯಗೊಳ್ಳುವುದು(dependence, depending on) ; ವೃತ್ತಿ = ಮನಸ್ಸಿನ ಚಟುವಟಿಕೆ; ನಿದ್ರಾ = ನಿದ್ರೆ, ಮನ್ದಸಾನ ಇತ್ಯಾದಿ ಮನಸ್ಸಿನ ಒನ್ದು ಪ್ರಸ್ವಾಪ ಸ್ಥಿತಿ ( ಬರೇ ಹಾಸಿಗೆಯಮೇಲೆ ಮಲಗುವ ಕ್ರಿಯೆಯಲ್ಲ)

**ಸೂತ್ರ** ೧೧: ಅನುಭೂತ = ಅನು + ಭೂತ. ಅನು = ಪದೇ ಪದೇ, ಪರಿಪರಿಯಾಗಿ, ಭೂತ = ಗಳಿಸುವುದು (obtaining) , ಅನ್ದರೆ, ಅಭಿಸ್ಥಿರವಾಗಿ ನಾನಾತ್ವವಾಗಿ ಅನುಭವಿಸುವುದು (experiencing both in variety and intensity) ;ವಿಷಯ = ಅನುಭವಿಸತ್ತಕ್ಕನ್ತಹ ವಿಷಯಗಳು; ಆಸಮ್ಪ್ರಮೋಷಹ = ಅ + ಸಮ್ + ಪ್ರ + ಮೋಷ. ಮೋಷ =ಕಸಿದುಕೊಣ್ಡು ಹೋಗುವುದು, ಇಲ್ಲದನ್ತೆ ಮಾಡುವುದು, ಪ್ರ = ಪೂರ್ಣವಾಗಿ/ಎಲ್ಲವನ್ನೂ, ಸಮ್ = ಒಟ್ಟಾರೆ, ಸಮ್ಪ್ರಮೋಷಹ = ಎಲ್ಲವನ್ನೂ ತೆಗೆದುಹಾಕುವುದು ಇಲ್ಲದನ್ತೆ ಮಾಡುವುದು,

ಆಸಮ್ಪ್ರಮೋಷಹ = ಇಲ್ಲದನ್ತೆ ಮಾಡದೇಇರುವುದು, ಅನ್ದರೆ ಉಳಿಸುವುದು (retaining) ; ಸ್ಮೃತಿ = ನೆನಪು

**ವಿವೃತ್ತಿ**

**ಸೂತ್ರ ೧೦: ಅಭಾವ ಪ್ರತ್ಯಯಾಲಮ್ಬನಾವೃತ್ತಿರ್ನಿದ್ರಾ**

ಅಭಾವದ/ಇಲ್ಲದಿರುವಿಕೆಯ ಅರಿವಿನಿನ್ದಾಗುವ ( ಮನಸ್ಸಿನಲ್ಲಿ) ವೃತ್ತಿಯೇ ನಿದ್ರೆ! ನಿದ್ದೆಯನ್ನು ಪತಞ್ಜಲಿ ಮಹರ್ಷಿಗಳು, ಅಭಾವದ ಅರಿವಿನಿನ್ದ ಆಗುವ ಮನಸ್ಸಿನ ಒನ್ದು ವೃತ್ತಿಯೆನ್ದು ಬಹಳ ಕದಾಶಯವಾಗಿ (intriguing) ಉಪಕ್ಷಿಪಗೊಳಿಸುತ್ತಾರೆ (define) . ಈ ಸೋಜಿಗಕ್ಕೆ ಹಲವಾರು ಕಾರಣಗಳಿವೆ - (೧) ಸಾಮಾನ್ಯವಾಗಿ ನಿದ್ದೆಯೆನ್ದರೆ ಮನಸ್ಸಿನ ಚಟುವಟಿಗೆಗಳೆಲ್ಲಾ ನಿನ್ತು, ದಣಿದ ಮನಸ್ಸು ( ದೇಹದ ಜೊತೆಗೆ) ವಿಶ್ರಮಿಸುತ್ತಿರುವ ಸ್ಥಿತಿಯೆನ್ದು ತಿಳಿಯುತ್ತೇವೆ (೨) ಅಭಾವದ ಅರಿವು ಎನ್ದು ಹೇಳುವಾಗ, ಅಪನೀತವಾಗಿ(contradictory) ಅಥವಾ ತಿಗ್ಮತೂಪರವಾಗಿ (oxymoron) ಅನ್ನಿಸುತ್ತದೆಯಲ್ಲಾ?! ಏಕೆನ್ದರೆ, ಸಾಮನ್ಯ ಜ್ಞಾನ-ಅನುಭವದಲ್ಲಿ, ಅನುಭವಕ್ಕೆ ಯಾವುದೋ ಒನ್ದು ವಸ್ತುವಿನ/ವಿಷಯದ ಭಾವದ(presence) ಅವಶ್ಯಕತೆ ಇರಬೇಕೆನ್ದು ಅನ್ನಿಸುತ್ತದೆ. ಅಭಾವದ ಅನುಭವ ಹೇಗಾಗುತ್ತದೆ?! "ಮರದ ಮೇಲೆ ಪಾರಿವಾಳ ಇರಲ್ಲಿಲ್ಲ" ಎನ್ದು ಯಾರಾದರೂ ಹೇಳಿದರೆ, ಅವರು ಪಾರಿವಾಳದ ಅಭಾವದ (ಇಲ್ಲದಿರುವಿಕೆಯ)

ಅನುಭವವನ್ನು ನೆನೆಸಿಕೊಣ್ಡು ಹೇಳಿದರೋ ಅಥವಾ ಪಾರಿವಾಳದ ಇರುವಿಕೆಯನ್ನು ಹಿನ್ದೆ ಅನುಭವಿಸಿದ ಸ್ಮೃತಿಯ ಆಧಾರದ ಉಪಮಾನದಲ್ಲಿ (comparison) ಮರದ ಮೇಲೆ ಪಾರಿವಾಳ ಇಲ್ಲವೆನ್ದು ಹೇಳಿದರೋ?! ಅಭಾವವನ್ನು ಅನುಭವಿಸುವುದು ಹೇಗೆ?! - ನಿದ್ದೆಯನ್ನು ಭಾರತೀಯ ದಾರ್ಶನಿಕರು ಆಮೂಲಾಗ್ರವಾಗಿ ಅಧ್ಯಯನ ಮಾಡಿದ್ದಾರೆ ಹಾಗೂ ಅಭಿವೀಕ್ಷಿಸಿದ್ದಾರೆ - ಯೊಗ ವಸಿಷ್ಠದ ಒನ್ದು ಉದಾಹರಣೆಯನ್ನು ನೋಡೋಣ. ಯೊಗ ವಸಿಷ್ಠವು ನಿದ್ದೆ ಮತ್ತು ಸ್ವಪ್ನವನ್ನು, ಸ್ವಪ್ನೇ ಕಿಲ ಮಹಾಬುದ್ಧೇ ನಾನಾನಿರ್ಮಾಣಶಾಲಿನಿ ಆರಮ್ಭಾ ಏವ ನಾರಮ್ಭಾ ಅಸತ್ಸದಿವ ಜಾತತಮ್ ಎನ್ದು, ನಿದ್ದೆಯನ್ನು/ಸ್ವಪ್ನವನ್ನು ಒನ್ದು ಕಿಲ ಅನ್ದರೆ, ಆಟವೆನ್ದು ಕರೆದು, ಅದರಲ್ಲಿ ನಾನಾ ವಿಷಯಗಳು ನಿರ್ಮಾಣಗೊಣ್ಡು ಆರಮ್ಭವು ಆನ್ಯದನ್ತೆ ಕಣ್ಡು, ಅಸತ್ಯವು ಸತ್ಯದನ್ತೆ ತೋರುತ್ತದೆ, ಎನ್ದು ಹೇಳುತ್ತದೆ. ಇಲ್ಲಿ ಮುಖ್ಯವಾದ ಅಂಶಗಳೆನ್ದರೆ, ನಿರ್ಮಾಣವಾಗುವನ್ತಹಾ ಆಟದನ್ತಹಾ ಒನ್ದು ಕ್ರಿಯೆ, ಅಸತ್ಯವು ಸತ್ಯವೆನ್ದು ತೋರುವ ಅನ್ದರೆ, ಅನುಭವಕ್ಕೆ ಬರುವ ಒನ್ದು ಪ್ರಕ್ರಿಯೆ - ನಿರ್ಮಾಣಗೊಳ್ಳುತ್ತದೆ ಎನ್ನೂ ಹೇಳಿ, ತೋರಿಕೆ ಎನ್ನೂ ಹೇಳುತ್ತದೆ; ಅನ್ದರೆ, ಅನುಭವ ನಿಜವಾದರೂ, ಅದು ಅಭಾವದ, ಇಲ್ಲದಿರುವುದರ ಅನುಭವ. ಇದನ್ನೇ ಈ ಸೂತ್ರವು ಅಭಾವ ಪ್ರತ್ಯಯಾಲಮ್ಬನಾ ಎನ್ದು ಅಭಾವದ ಅನುಭವ ಎನ್ದು ನಿದ್ದೆಯನ್ನು ಕರೆಯುತ್ತದೆ. ಆದರೆ, ನಿದ್ದೆಯು ಮನಸ್ಸಿನ ವೃತ್ತಿ ಅನ್ದರೆ ಮನಸ್ಸಿನ ಒನ್ದು activity ಹೇಗಾಗುತ್ತದೆ? ನಿದ್ದೆಯಲ್ಲಿ ಮನಸ್ಸಿನ ವೃತ್ತಿಗಳು ಇರದಿರುವುದು ನಮ್ಮ ಸಾಮಾನ್ಯ ಅನುಭವಕ್ಕೆ ಬರುವುದನ್ನು ನೋಡಿದ್ದೇವೆಯಲ್ಲಾ?!

ನಿದ್ದೆಯೂ ಮನಸ್ಸಿನ ಒನ್ದು ವೃತ್ತಿಯೆನ್ದು ತಿಳಿಯಬೇಕಾದರೆ, ಮುಖ್ಯವಾಗಿ ಸ್ಪಷ್ಟಗೊಳಿಸಬೇಕಾದ ವಿಷಯನೆನ್ದರೆ ನಿದ್ರಾವಸ್ಥೆಯಲ್ಲಿ, ಮನಸ್ಸು ಪೂರ್ಣವಾಗಿ ವೃತ್ತಿಮುಕ್ತವಾಗಿರುವುದಿಲ್ಲ. ಇದಕ್ಕೆ ಹಲವಾರು ನಿದರ್ಶನಗಳಿವೆ - ನಿದ್ದೆಯಲ್ಲಿರುವಾಗ ಮಲಗಿದವನ ಹೆಸರು ಕೂಗಿದರೆ, ನಿದ್ದೆಯಿನ್ದ ಏಳುವುದು, ನಿದ್ದೆ ಮಾಡಿ ಎದ್ದಮೇಲೆ ಚೆನ್ನಾಗಿ ನಿದ್ದೆ ಬನ್ದಿತ್ತು, ಸರಿಯಾಗಿ ಬರಲಿಲ್ಲವೆಮ್ಬ ನಿದ್ದೆಯ ಗುಣಮಟ್ಟದ ಅನುಭವದ ಬಗ್ಗೆ ನೆನಪಿಸಿಕೊಳ್ಳುವುದು ಇತ್ಯಾದಿ - ಇದು ಆಗಬೇಕಾದರೆ, ಹೆಸರನ್ನು ಕೇಳಿಸಿಕೊಳ್ಳುವ ಕ್ರಿಯೆ, ನಿದ್ದೆಯನ್ನು ಅನುಭವಿಸುವ ಕ್ರಿಯೆಯು ಮನಸ್ಸಿನ ಯಾವುದೋ ಒನ್ದು ಭಾಗದಲ್ಲಿ ಆಗುತ್ತಿರಬೇಕು,

ಆಗುತ್ತಿತುತ್ತದೆ. ಸಾಙ್ಖ್ಯ-ಯೋಗ ದರ್ಶನವು, ಮನಸ್ಸು(ಮತ್ತು ದೇಹವನ್ನು) ಮತ್ತು ಅದರ ಎಲ್ಲ ವೃತ್ತಿಗಳನ್ನು/ಚಟುವಟಿಕೆಗಳನ್ನು, ಪ್ರಕೃತಿಯೆನ್ದು (ಮತ್ತು ಆತ್ಮವನ್ನು ಪುರುಷನೆನ್ದು) ಕರೆಯುತ್ತದೆ, ನೋಡುತ್ತದೆ ಎನ್ದು ಯೋಗಸೂತ್ರದ ( ಸಮಾಧಿಪಾದದ) ಎರಡನೆಯ ಸೂತ್ರವನ್ನು ಚರ್ಚಿಸುವಾಗ ನೋಡಿದ್ದೆವು. ಪ್ರಕೃತಿಯ ಎಲ್ಲ ವೃತ್ತಿಗಳು ಸತ್ವ, ರಜಸ್ ಮತ್ತು ತಮಸ್ಸೆಮ್ಬ ಮೂರು ಗುಣಗಳ ಅನ್ತಃರ್ಪಣದಿನ್ದಾಗುತ್ತದೆ(interplay). ಕೆಲವು ಕ್ರಿಯೆಗಳು ಪೂರ್ಣವಾಗಿ ಸತ್ವಗುಣದಿನ್ದಾದರೆ (ಉದಾಹರಣೆಗೆ ಆನನ್ದದ ಅನುಭವ), ಕೆಲವು ರಜಸ್ಸಿನ ಕಾರಣದಿನ್ದಾಗುತ್ತದೆ ( ನೋವು, ಹಸಿವು ಇತ್ಯಾದಿ), ಮತ್ತೆ ಕೆಲವು ಬರೇ ತಮಸ್ಸಿನ ಕಾರಣದಿನ್ದಾಗುತ್ತದೆ (ಮದದ ಅನುಭವ) - ಮತ್ತೆ ಹಲವಾರು ವೃತ್ತಿಗಳು ಅನ್ತರ್ಪಣದಿನ್ದಾಗುತ್ತದೆ ಅಥವಾ ಪರಸ್ಪರ ಸಮ್ವಾದದಿನ್ದಾಗುತ್ತದೆ. ಇಲ್ಲಿ ಗಮನಿಸಬೇಕಾದ ಒನ್ದು ಬಹು ಮುಖ್ಯ ವಿಷಯವೆನ್ದರೆ, ಸತ್ವ, ಸಾತ್ವಿಕ ಎನ್ದರೆ, ಒಳ್ಳೆಯದು, ತಮಸ್, ತಾಮಸಿಕ ಎನ್ದರೆ ಕೆಟ್ಟದ್ದು ಎಮ್ಬ ತಪ್ಪು ಅಭಿಪ್ರಾಯದಿನ್ದ ಹೊರಬರಬೇಕು - ಯಾವ ಗುಣವೂ ಸ್ವರೂಪತಸವಾಗಿ(by itself)ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ, ಪ್ರಕೃತಿಗೆ, ಅದರ ಕ್ರಿಯೆಗೆ ಮೂರೂ ಬೇಕು. ಆದರೂ ವೂರ್ಯದ(by choice)ಪ್ರಶ್ನೆ ಬನ್ದಾಗ ಸತ್ವವು ಹೆಚ್ಚು ಏಷ್ಟೈಷ (desirable) - ಏಷ್ಟೈಷವಾದರೂ, ಸಮಾಧಿಯ/ಯೋಗದ ವಿಷಯ ಬನ್ದಾಗ, ಈ ಮೂರೂ ಗುಣಗಳಿನ್ದ ಅತಿವೃತಗೊಳ್ಳಬೇಕು(transcend). ಮನಸ್ಸಿನ ವೃತ್ತಿಗಳಲ್ಲಿ, ನಿದ್ದೆಯು ಮೂಲತಹ ತಮಸ್ಸಿನಿನ್ದಾರೂ, ಸತ್ವ ಮತ್ತು ರಜಸಿಕ ನಿದ್ದೆಯೂ ಸಾಧ್ಯವಿದೆ. ಇದನ್ನು, ನಾವೆಲ್ಲರೂ ನಮ್ಮ ದಿನ ನಿತ್ಯ ಜೀವನದಲ್ಲಿ ಅನುಭವಿಸಿರುತ್ತೇವೆ - ಪೂರ್ಣವಾದ ತಾಮಸಿಕ ನಿದ್ದೆಯಿನ್ದ ಎದ್ದ ಮೇಲೆ, ಮನಸ್ಸಿನ ಶಕ್ತಿಯೆಲ್ಲಾ ಪರಿವಾಹಿತಗೊಣ್ಡಿರುತ್ತದೆ(taken or drained out). ನಿದ್ದೆಗೆ ರಜಸ್ಸಿನ ಸೋಙ್ಕು ತಗುಲಿದಾಗ, ಎದ್ದ ಮೇಲೆ ಆಲಸ್ಯದ ಅನುಭವವಾಗುತ್ತದೆ. ನಿದ್ದೆಗೆ ಸತ್ವದ ಛಾಯೆಯಿದ್ದಾಗ, ಎದ್ದ ಮೇಲೆ ಮೈಮನಸ್ಸುಗಳು ಹಗೂರವಾಗಿ ಉಲ್ಲಾಸ ಭರಿತವಾಗಿರುತ್ತದೆ. ಅಭಾವದ ( ತಮಸ್ಸಿನ ಕಾರಣದಿನ್ದ) ಅರಿವಿನ್ದ ಆಗುವ ವೃತ್ತಿಯಾದರೂ, ನಿದ್ದೆಯಲ್ಲಿ ಏಕಾಗ್ರದ, ಅನ್ತರ್ಭಾವದ(in-ward experience) ಅನುಭವವಾದರೂ, ಈ ವೃತ್ತಿಯು ತಮಸ್ಸಿನ ಬೈಜಿಕವಾದ ವೃತ್ತಿಯಾದುದರಿನ್ದ, ಸಮಾಧಿಗೆ, ಸಮಾಧಿ ಸ್ಥಿತಿಯ ಅನ್ತರ್ಭಾವಕ್ಕೆ ವಿರುದ್ಧವಾದುದರಿನ್ದ, ಯೋಗವಾಗಬೇಕಾದರೆ, ನಿದ್ದೆಯೆಮ್ಬ ವೃತ್ತಿಯನ್ನೂ (ಅನ್ದರೆ ಅಭಾವದ ಅರಿವು, ಕಾಲುಚಾಚಿ ಮಲಗುವುದಲ್ಲ) ನಿರೋಧಿಸಬೇಕು. - ಅಭಾವದ ಅರಿವು ಕಾಲುಚಾಚಿ ಮಾಡುವ ಕ್ರಿಯೆ "ನಿದ್ದೆ"ಯಲ್ಲಿ ಮಾತ್ರ ಆಗಬೇಕೆನ್ದಿಲ್ಲ! ಎಚ್ಚರವಾಗಿದ್ದಾಗಲೂ ಆಗಬಹುದು.

**ಸೂತ್ರ ೧೧: ಅನುಭೂತ ವಿಷಯಾಸಮ್ಪ್ರಮೋಷಃ ಸ್ಮೃತಿ:**

ಯಾವ (ವಿಷಯಗಳ) ಅನುಭವಗಳನ್ನು ಹೋಗಲಾಡಿಸಲಾಗುವುದಿಲ್ಲವೋ, ಇಲ್ಲದನ್ತೆ ಮಾಡಲಾಗುವುದಿಲ್ಲವೋ, ಆ ವೃತ್ತಿಗಳನ್ನು ( ಆ ಅನುಭವಗಳನ್ನು) ಸ್ಮೃತಿ ಎನ್ನಲಾಗುತ್ತದೆ.

**ದೃಶ್ಯ ೧** - ಹೊಸದಾಗಿ ಕೊಣ್ಡ ನಿಮ್ಮ ಗೆಳೆಯನ ಮನೆಯ ಗೃಹಪ್ರವೇಶಕ್ಕೆ ಹೋಗಿರುತ್ತೀರಿ; ಅಲ್ಲಿ ಆತ ನೆಟ್ಟ ಒನ್ದು ಹೊಸ ತರಹದ ಹೂವಿನ ಗಿಡವನ್ನು

ಮತ್ತು ಅದರಲ್ಲಿ ಆಗತಾನೆ ಅರಳಿದ ಹೂವನ್ನು ನಿಮ್ಮ ಕಣ್ಣಿನಿನ್ದ ನೋಡಿ, ಹಿನ್ದೆ ಎನ್ದೂ ನೋಡದದ್ದಿದ್ದ ಆ ಹೂವನ್ನು ನೋಡಿ ಆನನ್ದಿಸುತ್ತೀರಿ

**ದೃಶ್ಯ ೨** - ಒನ್ದು ವರ್ಶದ ಬಳಿಕ, ಪ್ರವಾಸಕ್ಕೆನ್ದು ಬೇರೆ ಊರಿಗೆ ಹೋಗಿದ್ದಾಗ, ಆ ಊರಿನ ಪ್ರಸಿದ್ಧ ಉದ್ಯಾನವನದಲ್ಲಿ ವಿಹರಿಸುತ್ತಿದ್ದಾಗ ಒನ್ದು ಅಪರೂಪವೆನ್ದು ವಿಙ್ಗಡಿಸಿಟ್ಟಿದ್ದ ಹೂವಿನ ಗಿಡಗಳ ವಿಭಾಗದಲ್ಲಿ ಒನ್ದು ಹೂವಿನ ಗಿಡ ಮತ್ತು ಅದರಲ್ಲಿ ಸೊಗಸಾಗಿ ಅರಳಿದ್ದ ಹೂವನ್ನು ನೋಡಿ, ಹೋದ ವರ್ಷ ನಿಮ್ಮ ಸ್ನೇಹಿತನ ಮನೆಯಲ್ಲಿ ನೋಡಿದ್ದ ಅದೇ ತರಹದ ಹೂವಿನ ಗಿಡ ಮತ್ತು ಹೂವನ್ನು ನೋಡಿದ್ದ ಸ್ಮೃತಿಯು ಮರುಕಳಿಸಿ, ಅನ್ದು ನೋಡಿದ ಅನುಭವವು ಮರುಕಳಿಸುತ್ತದೆ, ಮತ್ತೆ ಅದೇ ಅನುಭವದ ಅದೃಷ್ಟಕ್ಕೆ ಸನ್ತೋಷವೂ ಆಗುತ್ತದೆ!

ಈ ಎರಡು ದೃಶ್ಯಗಳಲ್ಲಿ ಆಗುತ್ತಿರುವ ಪ್ರಕ್ರಿಯೆ ಏನು? ಸ್ಮೃತಿ ಎಮ್ಬ ಮನಸ್ಸಿನ ವೃತ್ತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಈ ಪ್ರಕ್ರಿಯೆಯನ್ನು ಪ್ರಮಿಮೀತಿಸಬೇಕು(understand) - ಎರಡನೆಯ ಬಾರಿ ಹೂವನ್ನು ಪುನರ್ವೀಕ್ಷಿಸಿದ ಸಮಯದಲ್ಲಿ, ಒನ್ದು ವರ್ಷದ ಹಿನ್ದೆ ವೀಕ್ಷಿಸಿದ ಸ್ಮೃತಿಯು ಮರಿಕಳಿಸಿದಾಗ ಆದದ್ದೇನು? ಮೊದಲನೆಯ ಬಾರಿ ನೋಡಿದ ಹೂವಿನ ನೆನೆಪಾಯಿತೋ? ಅಥವ ಮುದಲನೆಯ ಬಾರಿ ಹೂವನ್ನು ನೋಡಿದ ಅನುಭವದ ನೆನಪಾಯಿತೋ? ಬನ್ದದ್ದು ಹೂವಿನ ಸ್ಮೃತಿಯೋ, ಅನುಭವದ ಸ್ಮೃತಿಯೋ?

ಯಾವುದೇ ವಿಷಯವನ್ನು - ಕರ್ಮ ಮತ್ತು ಜ್ಞಾನೀದ್ರಿಯಗಳ ಮೂಲಕ - ಅನುಭವಿಸುವಾಗ ಮೂರು ತತ್ವಗಳು ಕೆಲಸ ಮಾಡುತ್ತದೆ. ಒನ್ದು, ವಿಷಯ ( ಮೇಲಿನ ಉದಾಹರಣೆಯಲ್ಲಿ ಹೂವು), ಎರೆಡು, ನೋಡುವ ಹೇತುಕ ಅಥವಾ ಕರಣ(instrument, ಮೇಲಿನ ಉದಾಹರಣೆಯಲ್ಲಿ ಕಣ್ಣು) ಮತ್ತು ಮೂರು, ಪ್ರಕ್ರಿಯೆ ( ಮೇಲಿನ ಉದಾಹರಣೆಯಲ್ಲಿ, ನೋಡುವ ಪ್ರಕ್ರಿಯೆ). ಈ ಮೂರು ತತ್ವಗಳ ಸಮ್ವಾದದಿನ್ದ ನಮಗೆ ಹೂವಿನ ಅನುಭವವಾಗುತ್ತದೆ. ಈ ಅನುಭವದ ಅರಿವು ಮನಸ್ಸು-ಬುದ್ದಿಗಳ ಮೇಲೆ ತನ್ನ ಮುದ್ರೆಯನ್ನು ಒತ್ತುತ್ತದೆ; ಈ ಮುದ್ರೆಗೆ ಸಂಸ್ಕಾರ ಎನ್ದು ಹೆಸರು; ಸಂಸ್ಕಾರವೇ ಸ್ಮೃತಿಯಲ್ಲ! ಸಂಸ್ಕಾರವು, ಎರೆಡು ಉತ್ಕಗಳಲ್ಲಿ(occasion) ತನ್ನನ್ನು ತಾನು ಉಲ್ಬಣಗೊಳಿಸಿಕೊಳ್ಳುತ್ತದೆ(manifest) - ಒನ್ದು ನಿದ್ದೆಯಲ್ಲಿ ಮತ್ತೊನ್ದು ಜಾಗ್ರತಾವಸ್ಥೆಯಲ್ಲಿ. ನಿದ್ದೆಯಲ್ಲಿ ಉಲ್ಬಣಗೊಣ್ಡ ಸಂಸ್ಕಾರಗಳ ಬಗ್ಗೆ ಹಿನ್ದಿನ ಸೂತ್ರದಲ್ಲಿ, "ಅಭಾವ ಪ್ರತ್ಯಯಾಲಮ್ಬನಾವೃತ್ತಿರ್ನಿದ್ರಾ" ಎನ್ದು ವಸ್ತುವಿನ ಅಭಾವದಲ್ಲಿ, ವಸ್ತುವಿನ ಬಗ್ಗೆ ಆಗುವ ಅರಿವನ್ನು ನಿದ್ರೆ ಎನ್ದು ತಿಳಿದೆವು ( ಗೃಹಪ್ರವೇಶದಲ್ಲಿ ನೋಡಿದ ಹೂವನ್ನು, ಸ್ವಪ್ನಾವಸ್ಥೆಯಲ್ಲಿ ನೋಡುವುದು). ಜಾಗ್ರತಾವಸ್ಥೆಯಲ್ಲಿ ಸಂಸ್ಕಾರವು ಎರಡು ರೀತಿಯಲ್ಲಿ ಉಲ್ಬಣಗೊಳ್ಳುತ್ತದೆ - ಒನ್ದು, ಬುದ್ಧಿಯ ಮಟ್ಟದಲ್ಲಿ, ಮತ್ತೊನ್ದು ಮನಸ್ಸಿನ ಮಟ್ಟದಲ್ಲಿ. ಉಲ್ಬಣವು, ಅನುಭವದ ಪ್ರಕ್ರಿಯೆಗೆ ( ಹೂವನ್ನು ನೋಡುವ ಪ್ರಕ್ರಿಯೆಗೆ) ಸಮ್ಬನ್ಧಪಟ್ಟದ್ದಾದರೆ, ಅದು ಬುದ್ಧಿಯಲ್ಲಿ ಉ;ಲ್ಬಣಗೊಣ್ಡು, ಈ ಹೂವು ನನಗೆ ಗೊತ್ತಿದೆ ಎಮ್ಬ ಹಿನ್ದಿನ ಅನುಭವದ ಅರಿವನ್ನು ತನ್ದುಕೊಳ್ಳುತ್ತದೆ. ಉಲ್ಬಣವು ನಾಮ-ರೂಪಕ್ಕೆ ಸಮ್ಬನ್ಧ ಪಟ್ಟಿದ್ದರೆ ( ಹೂವಿನ ಆಕಾರ, ಬಣ್ಣ, ಗನ್ಧ ಇತ್ಯಾದಿ) ಅದು, ಮನಸ್ಸಿನಲ್ಲಾಗುತ್ತದೆ. ಈ ಎರೆಡೂ ರೀತಿಯ ಉಲ್ಬಣವೂ ಸ್ಮೃತಿ ಎಮ್ಬ ವೃತ್ತಿ - ಹೋಗಲಾಡಿಸಲಾಗದೇ ಇರುವ ಅನುಭವಗಳು, ಸಂಸ್ಕಾರದನ್ತೆ ನಮ್ಮಲ್ಲಿಯೇ ಉಳಿದು, ಮತ್ತೆ ಜಾಗ್ರತಾವಸ್ಥೆಯಲ್ಲಿ ಉಲ್ಬಣಗೊಳ್ಳುವುದಕ್ಕೆ ಸ್ಮೃತಿ ಎನ್ದು ಹೆಸರು. ಯೋಗವಾಗಬೇಕಾದರೆ, ಈ ವೃತ್ತಿಯೂ ನಿಲ್ಲಬೇಕು!

**ಓಂತತ್ ಸತ್**

ತದ್ಯಥಾ, ಈರೀತಿಯಲ್ಲಿ

ಗತೇ ಗತೇ ಪರಾಗತೇ ಪರಾಸಙ್ಗತೇ ಬೋಧಿ ಸ್ವಾಹ - ಹೋದರು! ಹೋದರು! ಪೂರ್ಣತ್ವದ ಕಡೆಗೆ ಹೋದರು! ಸಮ್ಪೂರ್ಣವಾಗಿ ಪೂರ್ಣತ್ವದಕಡೆಕೆ ಹೋದರು! ಜ್ಞಾನೋದಯಕ್ಕೆ ಜಯಕಾರ - ಪ್ರಜ್ಞಾಪರಮಿತ ಹೃದಯ ಸೂತ್ರ





# ಸಾಕು ಬೇಕುಗಳ ಮರ್ಮ

**ಸತೀಶ್ ಹೊಸನಗರ,** ನ್ಯೂ ಜರ್ಸಿ

ಪ್ರಪಂಚದಲ್ಲಿ ನೂರಕ್ಕೆ ಒಂಬತ್ತು ಜನ ದಿನದ ಊಟದ ಬಗ್ಗೆ ಚಿಂತೆ ಮಾಡ್ತಾರಂತೆ. ನೂರರಲ್ಲಿ 12 ಜನಕ್ಕೆ ಅಕ್ಷರ ಬರೋದಿಲ್ವಂತೆ. ಎಲ್ಲಕ್ಕಿಂತ ಮುಖ್ಯವಾಗಿ ನೂರರಲ್ಲಿ 11 ಜನ ಬಡತನದಲ್ಲಿ ಬದುಕುತ್ತಾರಂತೆ. ಅಮೇರಿಕ ಅಭಿವೃದ್ಧಿ ಹೊಂದಿದ ದೇಶವಾದರೂ, ಇಲ್ಲಿನ ಕಾಲುಭಾಗದಷ್ಟು ಜನರಿಗೆ ನಿವೃತ್ತಿಯಾದ ಮೇಲೆ ಬದುಕಲು ಯಾವುದೇ ಉಳಿತಾಯವೂ ಇಲ್ಲವಂತೆ. ಈ ಅಂಕಿ ಅಂಶಗಳನ್ನೆಲ್ಲ ಸುಮ್ಮನೆ ನೀವು ಅಂತರ್ಜಾಲದಲ್ಲಿ ಹುಡುಕಿದರೆ ಅನೇಕ ಸಮೀಕ್ಷೆ ಮತ್ತು ಅಧ್ಯಯನಗಳ ಮೂಲಕ ದೊರೆಯುತ್ತವೆ.

ನಾವು ಹಣಕಾಸಿನ ವಿಚಾರದಲ್ಲಿ ನಮ್ಮ ನಿಲುವನ್ನು ಕಂಡುಕೊಳ್ಳುವಷ್ಟರಲ್ಲಿ ನಮ್ಮ ಜೀವನದ ಅರ್ಧ ಆಯಸ್ಸಿನ ಸಮೀಪ ಬಂದಿರುತ್ತೇವೆ. ಅರ್ಧ ಜೀವನದ ತರುವಾಯ ಅನಿರೀಕ್ಷಿತವಾಗಿ ಹಲವಾರು ತೊಂದರೆಗಳು ಬಂದು, ಅವರವರ ಆರ್ಥಿಕ ಸ್ಥಿತಿಯಲ್ಲಿ ಏರುಪೇರಾಗಬಹುದಾದರೂ ಹೆಚ್ಚಿನವರು ತಮ್ಮ ನಿವೃತ್ತಿಯ ಬದುಕಿನ ಸಾಧ್ಯತೆ-ಬಾಧ್ಯತೆಗಳ ಬಗ್ಗೆ ಯೋಚಿಸಿಯೇ ಇರುತ್ತಾರೆ. ಇಂತಹ ಸಮಯದಲ್ಲಿಯೇ ನಮ್ಮ ರಿಸ್ಕ್ ಮ್ಯಾನೇಜ್‌ಮೆಂಟ್ ಪ್ರಕ್ರಿಯೆ ಜಾಗರೂಕವಾಗಿರಬೇಕು. ನಿಮ್ಮ ಬಳಿ ಇರುವ ಹಣವನ್ನು ಕೇವಲ ಐದೇ ವರ್ಷದಲ್ಲಿ ದ್ವಿಗುಣ ಮಾಡಿಕೊಡುತ್ತೇವೆ ಎನ್ನುವ ಹೂಡಿಕೆಗಳಲ್ಲಿ ತೊಡಗಿಸಲು ಇದು ಸೂಕ್ತ ಸಮಯವಾಗಿರುವುದಿಲ್ಲ.

ಹಾಗೇ, ಒಂದು ಕುಟುಂಬದ ಜೀವನ "ಸೆಟಲ್" ಆಗುವ ಕಡೆಗೆ ಹೋಗುವುದೂ ಇದೇ ಸಮಯದಲ್ಲಿಯೇ. ಒಬ್ಬರ ವಯೋಮಾನದ ನಲವತ್ತರಿಂದ ಐವತ್ತರ ಹರೆಯದಲ್ಲಿ ಹೆಚ್ಚು ಖರ್ಚುಗಳು ಸಂಭವಿಸುತ್ತವೆ ಎಂದುಕೊಂಡರೆ, ಐವತ್ತರಿಂದ ಅರವತ್ತರ ದಶಕದಲ್ಲಿ ಖರ್ಚುಗಳು ಕಡಿಮೆ ಎಂದುಕೊಳ್ಳಬೇಕಾಗುತ್ತದೆ. ಒಮ್ಮೆ ಅರವತ್ತು, ಮುಂದೆ ಎಪ್ಪತ್ತು ಕಳೆದ ನಂತರ ಖರ್ಚುಗಳು ಇನ್ನೂ ಕಡಿಮೆ ಆಗಿ, ಮುಂದೆ ಅಗತ್ಯಕ್ಕಿಂತ ಹೆಚ್ಚು ಹಣ ಬಿದ್ದು ಕೊಳೆಯತೊಡಗುತ್ತದೆ.

ಇಂತಹ ಸಮಯದಲ್ಲಿಯೇ, ಮುಂದುವರೆದ ದೇಶಗಳಲ್ಲಿ Philanthropy, Giving, Charity, Social Responsibility, Humanitarianism... ಮೊದಲಾದ ಪದಗಳ ಬಳಕೆ ಹೆಚ್ಚು ಅನ್ವಯವಾಗೋದು. ಇಪ್ಪತ್ತರ ಹರೆಯದಲ್ಲಿರುವ ದಂಪತಿಗಳು ಚಾರಿಟಿಯ ವಿಚಾರದಲ್ಲಿ ಸ್ಪಂದಿಸಬಾರದೆಂದೇನೂ ಇಲ್ಲ, ಆದರೆ, ಅವರು ಚಾರಿಟಿಗೆ ಸಂಬಂಧಿಸಿದ್ದನ್ನು ಹೇಗೆ ಸ್ವೀಕರಿಸುತ್ತಾರೋ, ಅದೇ ಎಪ್ಪತ್ತರ ಹರೆಯದಲ್ಲಿರುವ ದಂಪತಿಗಳು ಈ ಪದವನ್ನು ಸ್ವೀಕರಿಸುವ ವಿಚಾರದಲ್ಲಿ ಸಾಕಷ್ಟು ವ್ಯತ್ಯಾಸವಿರುತ್ತದೆ.

***

ಮಾನವ ಮಾನವನಿಗೆ ಸಹಾಯ ಮಾಡಲು ಸಾಧ್ಯವಿದೆಯೇ? ಮಾಡಬೇಕೋ ಬೇಡವೋ, ಎಷ್ಟು ಮಾಡಿದರೆ ಒಳ್ಳೆಯದು ಅಥವಾ ಇಲ್ಲ? ಯಾರು ಯಾರಿಗಾದರೂ ಏಕೆ ಸಹಾಯ ಮಾಡಬೇಕು? ದೇವರು ಸೃಷ್ಟಿಸಿದ ಈ ಸೃಷ್ಟಿಯನ್ನು ದೇವರೇ ನಿಯಂತ್ರಿಸಿಕೊಳ್ಳುತ್ತಾನಾದ್ದರಿಂದ ಅದರಲ್ಲಿ ಹುಲುಮಾನವರದ್ದೇನು ಪಾತ್ರ? ಅಥವಾ ಖಾಯಿಲೆಗೆ ಔಷಧಿಯನ್ನು ಕಂಡುಹಿಡಿಯುವ ವಿಜ್ಞಾನಿಯ ಕೆಲಸದ ಹಾಗೆಯೇ ಒಬ್ಬ ಔದ್ಯಮಿ ತನ್ನ ಸಂಪನ್ಮೂಲಗಳ ಸಹಾಯದಿಂದ ಸಮಾಜದ ಏಳಿಗೆಗೆ ಶ್ರಮಿಸುವುದು ನ್ಯಾಯವಲ್ಲವೇ? ಕಣ್ಣಿಗೆ ಕಾಣದ ವೈರಾಣುಗಳ ವಿರುದ್ಧ ಇಡೀ ಪ್ರಪಂಚವೇ ಹೋರಾಡುತ್ತಿಲ್ಲವೇ? ಹಾಗೆಯೇ ಮುಂದೆ ಎಂದಾದರೂ ದುಷ್ಟ ಜಂತುಗಳೋ, ಅನ್ಯ ಗ್ರಹದ ಜೀವಿಗಳೋ ಬಂದು ಆಕ್ರಮಣ ಮಾಡಿದರೆಂದರೆ ಇಡೀ ಮನುಕುಲವೇ ಒಂದಾಗಿ ನಿಂತು ಹೋರಾಡುವುದಿಲ್ಲವೇ?

ತಮ್ಮ ತಮ್ಮ ಕರ್ತವ್ಯವನ್ನು ಎಲ್ಲರೂ ನಿಭಾಯಿಸಿಕೊಂಡು ಹೋಗುವುದು ನ್ಯಾಯ. ಅಂತಹ ಒಂದು ಕರ್ತವ್ಯದ ತುಣುಕಾಗಿ ನಮ್ಮ ನಮ್ಮ ಸಾಮಾಜಿಕ ಜವಾಬ್ದಾರಿಯೂ ಇದೆ. ನಮ್ಮೆಲ್ಲರಲ್ಲಿ ಸಾಮಾನ್ಯ ಜನರೇ ಹೆಚ್ಚು, ಅಪರೂಪಕ್ಕೊಮ್ಮೆ ವಿಶೇಷವಾಗಿರುವ ಜನರನ್ನು ಭೇಟಿಯಾಗುತ್ತೇವೆಯೇ ವಿನಃ, ನಾವೆಲ್ಲರೂ ಜನ-ಸಾಮಾನ್ಯರು. ಆದರೆ, ನಮ್ಮಂತಹ ಸಾಮಾನ್ಯರಲ್ಲಿ ಒಂದು ಶಕ್ತಿ ಇದೆ, ಅದು ನಮ್ಮ ಸಂಖ್ಯೆ. ಜನ-ಸಾಮಾನ್ಯರೆಲ್ಲ ಒಂದು ದೊಡ್ಡ ಸಂಘಟನೆಯ ಅಡಿಯಲ್ಲಿ ಒಂದಾದಾಗ ಒಂದು ಮಹಾ ಕ್ರಾಂತಿಯಾಗುತ್ತದೆ, ಒಂದು ಸಂಗ್ರಾಮ ನಡೆಯುತ್ತದೆ, ಒಂದು ವ್ಯವಸ್ಥೆಯ ಪರವಾಗಿಯೋ, ವಿರುದ್ಧವಾಗಿಯೋ ಒಂದು ಮಹಾ ಆಂದೋಲನವೇ ಹುಟ್ಟುತ್ತದೆ. ಮುಂದಾಳುತನದ ವಿಚಾರದಲ್ಲಿ ಅನೇಕ ನಾಯಕರನ್ನು ನಾವು ಹೆಸರಿಸಬಹುದಾದರೂ, ವಿಶ್ವದ ಎಲ್ಲ ಚಳವಳಿಯ ಶಕ್ತಿಯಾಗಿ ಜನಸಾಮಾನ್ಯರೇ ಇರುವುದು. ಈ ಜನಸಾಮಾನ್ಯರನ್ನು ಯಾವುದೋ ಒಂದು ಕಾರಣಕ್ಕೆ ಒಂದಾಗಿಸಿ ಅವರನ್ನು ಒಪ್ಪಿಸಿ ಹೋರಾಡುವಂತೆ ಮಾಡುವುದು ಇದೆಯಲ್ಲ, ಅದು ಸಾಮಾನ್ಯರಿಗೆ ಆಗುವ ಕೆಲಸವಲ್ಲ. ಆದರೆ, ಪ್ರತಿಯೊಬ್ಬ ಸಾಮಾನ್ಯನೂ ಕಡಿಮೆ ಎಂದರೆ ಒಂದಲ್ಲ ಒಂದರ ಪರ ಅಥವಾ ವಿರುದ್ಧ ಸಂಘಟಿತಗೊಳ್ಳುವ ಅವಕಾಶ ಇದೆ. ಯಾವುದಕ್ಕೂ ಸ್ಪಂದಿಸದೇ ಬದುಕುವುದೆಂದರೆ, ಅಂತಹ ಬದುಕಿಗೆ ಒಂದು ಅರ್ಥವಾದರೂ ಹೇಗೆ ಬಂದೀತು?

ಇತ್ತೀಚೆಗೆ, ಒಂದೂವರೆ ಬಿಲಿಯನ್ ಡಾಲರ್ ನಷ್ಟು ಸಂಪತ್ತು (ನೆಟ್‌ವರ್ತ್) ಇರುವ ಶ್ರೀಮಂತ ಕುಟುಂಬವೊಂದು ಸುಮಾರು ಐವತ್ತು ಮಿಲಿಯನ್ ಡಾಲರ್ ಅನ್ನು ಕ್ಯಾನ್ಸರ್‌ಗೆ ಸಂಬಂಧಿಸಿದ ಒಳ್ಳೆಯ ಬೆಳವಣಿಗೆಯೊಂದಕ್ಕೆ ದಾನ ಮಾಡಿದ ನಿದರ್ಶನವೊಂದು ಸಿಕ್ಕಿತು. ಒಂದಿಷ್ಟು ಸೊನ್ನೆಗಳನ್ನು ಕಡಿಮೆ ಮಾಡಿ ನೋಡಿದರೆ, ಒಂದು ಮಿಲಿಯನ್ ಸಂಪತ್ತು ಇರುವ ಎಷ್ಟು ಜನರು ಸುಮಾರು 33 ಸಾವಿರ ಡಾಲರುಗಳನ್ನು ಒಂದು ಒಳ್ಳೆಯ ಉದ್ದೇಶಕ್ಕೆ ದಾನ ಮಾಡಬಲ್ಲರು? ಇಂಗ್ಲೀಷಿನಲ್ಲಿ ಟೈದ್ (Tithe) ಎನ್ನುವ ಒಂದು ಪರಂಪರೆ ಕಂಡುಬರುತ್ತದೆ. ಇದು




ಮುಖ್ಯವಾಗಿ ಕ್ರಿಶ್ಚಿಯನ್ ಸಮೂಹದಲ್ಲಿ, ಆಯಾ ಕುಟುಂಬಗಳು ತಮ್ಮ ಆದಾಯದ ಮೊದಲ ಹತ್ತನೇ ಒಂದು ಭಾಗದಷ್ಟನ್ನು ಸಂಬಂಧಿಸಿದ ಚರ್ಚುಗಳಿಗೆ ದಾನವಾಗಿ ಕೊಡುವುದು ಎಂದರ್ಥ ಮಾಡಿಕೊಳ್ಳಬಹುದು. ಆದರೆ, ನಮ್ಮ ಭಾರತೀಯ ಮೂಲದಲ್ಲಿ ಈ ರೀತಿಯ ಆಚರಣೆ ಕಡಿಮೆ. ಫಿಲಾಂತ್ರೊಪಿ, ಚಾರಿಟಿ ಮೊದಲಾದ ಪದಗಳು ನಮಗೆ ಹೊಸದಾಗಿ ಕೇಳಿಬರಬಹುದು. ಆದರೆ, ನಮ್ಮಲ್ಲೂ ಸಹ ಈ ರೀತಿಯ ದೇಣಿಗೆಗಳು, ಕೊಡುಗೆಗಳು ಇದ್ದವು. ಅನೇಕ ದತ್ತಿ ಛತ್ರಗಳು ನಡೆಯುತ್ತಿದ್ದವು. ರಾಜಾಶ್ರಯದಲ್ಲಿ ಅನೇಕ ಉಸ್ತುವಾರಿ ಯೋಜನೆಗಳು ನಡೆಯುತ್ತಿದ್ದವು, ಅನ್ನದಾಸೋಹಗಳು ಇದ್ದವು. ಎಷ್ಟೋ ಹಳ್ಳಿ-ಪಟ್ಟಣಗಳನ್ನು ದತ್ತು ತೆಗೆದುಕೊಂಡು ಅವುಗಳನ್ನು ನೋಡಿಕೊಳ್ಳಲಾಗುತ್ತಿತ್ತು. ಆದರೆ, ನಮ್ಮಲ್ಲಿ ನಮ್ಮ ಆದಾಯದ ಮೊದಲ ಹತ್ತನೇ ಒಂದು ಭಾಗವನ್ನು ನಾವೆಲ್ಲರೂ ಎಂದೂ ಯಾರಿಗೂ ಕೊಟ್ಟಿಲ್ಲ. ಹೀಗೆ ಕೊಟ್ಟ ಹಣ ಹೇಗೆ ಬಳಕೆಗೆ ಬರುತ್ತದೆ, ಅದರಿಂದ ಏನೇನಾಗಬಹುದು, ಇಲ್ಲ ಎನ್ನುವುದನ್ನು ಇಲ್ಲಿ ಚರ್ಚಿಸುವುದಕ್ಕಿಂತ - ಹೀಗೂ ಕೊಡಬಹುದು ಎನ್ನುವ ಪ್ರಕ್ರಿಯೆಯ ಬಗ್ಗೆ ಯೋಚಿಸೋಣ. ಒಳ್ಳೆಯದೋ, ಕೆಟ್ಟದ್ದೋ - ಕೈಬಿಚ್ಚಿ ಕೊಟ್ಟರೆ ತಾನೇ ಅದರಿಂದ ಏನೋ ಒಂದು ಆಗುವುದು? ಒಳ್ಳೆಯದು ಅಥವಾ ಒಳ್ಳೆಯದಲ್ಲದ್ದು ಎನ್ನುವುದನ್ನು ನೀವು ನಾಣ್ಯದ ಯಾವ ಮುಖವನ್ನು ನೋಡಿ ಮಾತನಾಡುತ್ತಿದ್ದೀರಿ ಎನ್ನುವುದರ ಮೇಲೆ ತಾನೇ ನಿರ್ಣಯವಾಗೋದು?

***

ಬಹದ್ದೂರ್ ಗಂಡು ಚಿತ್ರದಲ್ಲಿ ಚಿ. ಉದಯಶಂಕರ್ ಅವರು ಬರೆದು, ಎಂ. ರಂಗಾರಾವ್ ಸಂಗೀತ ನೀಡಿದ ಜನಪ್ರಿಯ ಹಾಡಿನೊಂದರ ಸಾಲುಗಳು ನೆನಪಾಗುತ್ತವೆ:

ಕೋಟೆ ಕಟ್ಟಿ ಮೆರೆದೋರೆಲ್ಲ ಏನಾದರು?
ಮೀಸೆ ತಿರುವಿ ಕುಣಿದೋರೆಲ್ಲ ಮಣ್ಣಾದರು!

ಈ ಸಾಲುಗಳ ಮರ್ಮವನ್ನು ಎರಡು ಕಾರಣಕ್ಕಾಗಿ ಯೋಚಿಸಿಕೊಳ್ಳಬೇಕು. ಮೊದಲನೆಯದಾಗಿ, ಯಾರು ಎಷ್ಟೇ ಆಸ್ತಿ-ಪಾಸ್ತಿ ಮಾಡಿ ಕೂಡಿಟ್ಟರೂ ಎಲ್ಲರೂ ಒಂದು ದಿನ ಅದನ್ನು ಬಿಟ್ಟು ಹೋಗಲೇ ಬೇಕು. ಯಾರ ಚಟ್ಟದ ಹಿಂದೆಯೂ ಒಂದು ಸರಕಿನ ಲಾರಿಯನ್ನು ಅವರು ತೆಗೆದುಕೊಂಡು ಹೋಗೋದಿಲ್ಲವಲ್ಲ? ಎರಡನೆಯದಾಗಿ, ಈಗಾಗಲೇ ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಮಾಡಿಟ್ಟು, ತಮ್ಮ ಜೀವನದ ಅರ್ಧ ಆಯಸ್ಸಿಗಿಂತಲೂ ಹೆಚ್ಚನ್ನು ಕಳೆದು, ಇನ್ನೇನು ನಿವೃತ್ತಿಯ ಹೊಸ್ತಿಲಿನಲ್ಲಿ ನಿಂತು ನೋಡುತ್ತಿರುವ ಎಲ್ಲ ಮಹಾನುಭಾವರೂ ತಮ್ಮ ಆಸ್ತಿಯ ಹತ್ತನೇ ಒಂದು ಭಾಗವನ್ನು ತಮ್ಮ ತಮ್ಮ ಹೆಸರಿನ ಫೌಂಡೇಶನ್‌ನ ಹೆಸರಿನಲ್ಲಿ ಸಮಾಜದ ಏಳಿಗೆಗೆ ಏಕೆ ಬಳಸಬಾರದು?

ಕೊನೇ ಪಕ್ಷ, ವಿಶ್ವದ ಎಲ್ಲ ಮಿಲಿಯನ್-ಬಿಲಿಯನ್ನೈರುಗಳು ತಮ್ಮ ಸಂಪತ್ತಿನ ಸಾವಿರದ ಒಂದು ಭಾಗವನ್ನು ತಮ್ಮ ತಮ್ಮ ನೆರೆಹೊರೆಯನ್ನು ಚೊಕ್ಕಗೊಳಿಸುವುದಕ್ಕೆ, ಅಭಿವೃದ್ಧಿಗೊಳಿಸುವುದಕ್ಕೆ, ಆರೋಗ್ಯಪೂರ್ಣವಾಗಿಸುವುದಕ್ಕೆ ಬಳಸಿಕೊಂಡಿದ್ದೇ ಆದರೆ, ನಮ್ಮ ಸಮಾಜಕ್ಕೆ ಅಂಟಿದ ಕಷ್ಟಗಳು ಅರ್ಧಕ್ಕರ್ಧ ಕಡಿಮೆಯಾದಾವು. ಅದು ಯಾವುದೂ ಬೇಡ, ಪ್ರಪಂಚದ ಒಂಬತ್ತು ಪರ್ಸೆಂಟು ಜನ ದಿನ ರಾತ್ರಿ ಊಟವಿಲ್ಲದೇ ಮಲಗುವುದಾದರೂ ತಪ್ಪೀತು. ಸಾಕು ಮತ್ತು ಬೇಕು ಎನ್ನುವ ಈ ಎರಡು ಪದಗಳ ಮರ್ಮವನ್ನು ಬಲ್ಲವರಿಗೆ, ಕೈಮುಂದು ಮಾಡಿಕೊಡಲು ಕಷ್ಟವಾಗೋದಿಲ್ಲ. ನಾವೆಲ್ಲರೂ ನಮ್ಮ ಆದಾಯ ಮತ್ತು ಸಂಪತ್ತಿನ ಹತ್ತು ಪರ್ಸೆಂಟು ಕೊಡೋದು ಬೇಡ, ವರ್ಷಕ್ಕೆ ಒಂದು ಪರ್ಸೆಂಟ್ ಅನ್ನು ಯಾವುದಾದರೊಂದು ಅಭ್ಯುದಯಕ್ಕೆ ಬಳಸಿದರೆ, ಅದೆಷ್ಟೋ ಅನುಕೂಲಗಳಾಗುತ್ತವೆ ಎನ್ನುವುದೇ ಈ ಹೊತ್ತಿನ ತತ್ವ



# ಜೀವದುಸಿರು ಹುಸಿ ಗಾಳಿಯಾದಾಗ (ಮುಂದುವರೆದ ಭಾಗ)

ಅನುವಾದ: ದಾಶರಥಿ ಘಟ್ಟು ಮೂಲ: ಪಾಲ್ ಕಲಾನಿಧಿ (When Breath Becomes Air)

ಮ್ಯಾನ್‌ಹ್ಯಾಟನ್ನಿನ 50 ಮೈಲಿ ಉತ್ತರಕ್ಕೆ ಹಡ್ಸನ್ ನದಿಯ ಬಳಿಯಿದ್ದ ನನ್ನ ಗೆಳೆಯನ ಮನೆಯನ್ನು ಸೇರುವಷ್ಟರಲ್ಲಿ ಸಂಜೆಯಾಗಿತ್ತು. ವಸಂತ ಋತುವಿನಲ್ಲಾಗಲೇ ಕೊರೆಯುವ ಛಳಿ ಪ್ರಾರಂಭವಾಗಿತ್ತು. ಹನ್ನೆರಡಕ್ಕೂ ಹೆಚ್ಚು ನನ್ನ ಗೆಳೆಯರು ಅಲ್ಲಿ ಸೇರಿದ್ದರು. ಅವರ ಸಂಭ್ರಮದ ಗದ್ದಲದ ಜೊತೆಗೆ ಪುಟ್ಟ ಮಕ್ಕಳ ಕಲರವವೂ ಸೇರಿ ಗೆಲುವಿನ ವಾತಾವರಣ ಸೃಷ್ಟಿಯಾಗಿತ್ತು. ಎಲ್ಲರೂ ನನ್ನನ್ನು ಆಲಂಗಿಸಿ ಸ್ವಾಗತಿಸಿದರು.

"ಲೂಸಿ ಬರಲಿಲ್ಲವೇ?"

"ಬರುವವಳಿದ್ದಳು. ಕೊನೇ ನಿಮಿಷದಲ್ಲಿ ಯಾವುದೋ ಅನಿರೀಕ್ಷಿತ ಕೆಲಸ ಬಂತು." ನಾನು ಹೇಳಿದೆ.

"ಆ ಕೆಲಸದ ಮನೆ ಹಾಳಾಗ!"

"ಅಭ್ಯಂತರವಿಲ್ಲದಿದ್ದರೆ, ನಾನು ನನ್ನ ಬ್ಯಾಗುಗಳನ್ನು ಇಲ್ಲಿಟ್ಟು ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯಲೇ?"

ಕೆಲ ದಿನಗಳು ಆಪರೇಷನ್ ರೂಮಿನಿಂದ ದೂರವಿದ್ದು, ಚೆನ್ನಾಗಿ ನಿದ್ದೆ ಮಾಡಿ, ವಿಶ್ರಾಂತಿ ಪಡೆದರೆ, ನನ್ನ ಶರೀರದ ಬಾಧೆಗಳು ಕಡಿಮೆಯಾಗಿ, ಬೆನ್ನು ನೋವು ಮತ್ತು ಸುಸ್ತು ಸಹಿಸಲಾಗುವಷ್ಟರ ಮಟ್ಟಕ್ಕೆ ಬರುತ್ತದೆ ಎಂದು ನಾನು ಹಾರೈಸಿದ್ದೆ. ಆದರೆ ಒಂದೆರಡು ದಿನ ಕಳೆಯುವಷ್ಟರಲ್ಲಿ ಈ ಪ್ರಾಣ ಹಿಂಡುವ ನೋವಿನಿಂದ ವಿಮೋಚನೆ ಸಿಗುವ ಯಾವ ಸೂಚನೆಯೂ ಕಾಣಲಿಲ್ಲ.

ನಾನು ಬೆಳಗಾದ ಮೇಲೂ ಬಹಳ ಹೊತ್ತು ಮಲಗಿರುತ್ತಿದ್ದೆ. ಮಧ್ಯಾಹ್ನದ ಊಟದ ಹೊತ್ತಿಗೆ ತೊಡರು ಕಾಲುಗಳನ್ನಿಡುತ್ತಾ ಊಟದ ಮೇಜಿನ ಬಳಿಗೆ ಹೋಗಿ, ಜೋಡಿಸಿಟ್ಟಿರುತ್ತಿದ್ದ ಭಕ್ಷ್ಯಗಳನ್ನು ದಿಟ್ಟಿಸುತ್ತಿದ್ದೆ. ಅವುಗಳನ್ನು ಬಡಿಸಿಕೊಂಡು ಬರಲೂ ನನಗೆ ಶಕ್ತಿಯಿರುತ್ತಿರಲಿಲ್ಲ. ರಾತ್ರಿ ಊಟದ ವೇಳೆಗೆ ನಾನು ಎಷ್ಟು ತೀವ್ರವಾಗಿ ಬಳಲಿರುತ್ತಿದ್ದೆನೆಂದರೆ ಮತ್ತೆ ಹಾಸಿಗೆ ಕಾಣಲು ತವಕಿಸುತ್ತಿದ್ದೆ. ಕೆಲವೊಮ್ಮೆ, ನನ್ನ ಗೆಳೆಯರ ಮಕ್ಕಳಿಗೆ ಯಾವುದಾದರೂ ಪುಸ್ತಕವನ್ನು ಓದುತ್ತಿದ್ದೆ. ನಾನು ಓದುತ್ತಿದ್ದ ಕತೆ ಕೇಳುವುದನ್ನು ಬಿಟ್ಟು ಆ ಮಕ್ಕಳು ನನ್ನ ಮೇಲೆ ಹತ್ತಿ, ಇಳಿದು, ಜಿಗಿದು, ಕಿರಿಚಾಡುತ್ತಾ ಆಟವಾಡುತ್ತಿದ್ದರು. ಅವರ ತಾಯಂದಿರು, "ಮಕ್ಕಳೇ, ಪಾಲ್ ಅಂಕಲ್ ಗೆ ಸ್ವಲ್ಪ ವಿರಾಮ ಬೇಕು ಎನ್ನಿಸುತ್ತದೆ. ನೀವು ಬೇರೆ ಕಡೆ ಹೋಗಿ ಆಟ ಆಡಿ." ಎಂದು ಗದರಿಸುತ್ತಿದ್ದರು.

15 ವರ್ಷಗಳ ಹಿಂದೆ ಬೇಸಿಗೆ ರಜಕ್ಕೆ ಮಕ್ಕಳನ್ನೆಲ್ಲಾ ಕರೆದುಕೊಂಡು ಹೋಗಿದ್ದು ನನಗೆ ನೆನಪಾಗುತ್ತದೆ. ಆ ವರ್ಷ ನಾನು ಬೇಸಿಗೆ ಕ್ಯಾಂಪಿನ ಕೌನ್ಸಿಲರ್ ಆಗಿದ್ದೆ. ಉತ್ತರ ಕ್ಯಾಲಿಫೋರ್ನಿಯಾದ, ಟಾಹೋ ಸರೋವರದ ದಂಡೆಯಲ್ಲಿ ನಾವು ಬೀಡು ಬಿಟ್ಟಿದ್ದೆವು. ಉಲ್ಲಾಸಭರಿತ ಮಕ್ಕಳು ನನ್ನನ್ನು ಅಡಚಣೆಯನ್ನಾಗಿ ಮಾಡಿಕೊಂಡು, ನನ್ನ ಮೇಲೆ ಹತ್ತಿ-ಇಳಿದು 'ಕ್ಯಾಪ್ಚರ್ ದಿ ಫ್ಲಾಗ್' ಆಟವಾಡುತ್ತಿದ್ದರು. ಅವರಷ್ಟಕ್ಕೆ ಅವರು ಆಟವಾಡುತ್ತಿದ್ದಾಗ ನಾನು 'ಡೆತ್ ಅಂಡ್ ಫಿಲಾಸಫಿ' ಎಂಬ ಪುಸ್ತಕವನ್ನು ಓದುತ್ತಿದ್ದೆ. ಆ ಸಮಯದ ಅಸಂಬದ್ಧತೆಯ ಬಗ್ಗೆ ನನಗೇ ನಗು ಬರುತ್ತಿತ್ತು- ಹಸಿರು ಹೊದ್ದ ಗಿಡ ಮರ, ಅನತಿ ದೂರದಲ್ಲಿದ್ದ ಪರ್ವತ ಶ್ರೇಣಿಗಳು, ಚಿಲಿಪಿಲಿಗುಟ್ಟುವ ಹಕ್ಕಿಗಳು, ಪುಟ್ಟ ಪುಟ್ಟ ಮಕ್ಕಳ ಸಂತೋಷದ ಕಲರವ- ಇವೆಲ್ಲ ಸಂಭ್ರಮದ ಮಧ್ಯೆ ಇಪ್ಪತ್ತು ವರ್ಷ ವಯಸ್ಸಿನ ನಾನು ಸಾವಿನ ಬಗೆಗಿನ ಪುಟ್ಟ ಪುಸ್ತಕದಲ್ಲಿ ಮುಳುಗಿ ಹೋಗಿದ್ದೆ. ಈಗ, ಈ ಘಳಿಗೆಯಲ್ಲಿ, ನಾನು ಅಂದಿನ ದಿನದ ಸಾದೃಶ್ಯವನ್ನು ಅನುಭವಿಸುತ್ತಿದ್ದೇನೆ. ಟಾಹೋ ಸರೋವರದ ಬದಲು ಈಗ ಹಡ್ಸನ್ ನದಿ; ಈ ಮಕ್ಕಳು ಅಪರಿಚಿತ ಮಕ್ಕಳಲ್ಲ, ಬದಲಿಗೆ ನನ್ನ ಗೆಳೆಯರ ಮಕ್ಕಳು; ಆಗಿನಂತೆ ಸಾವಿನ ವಿಷಯದ ಪುಸ್ತಕವೊಂದು ನನ್ನನ್ನು ಸುತ್ತಲಿನ ಜೀವ ಪ್ರಕ್ರಿಯೆಯಿಂದ ಪ್ರತ್ಯೇಕಿಸುವ ಬದಲು, ನನ್ನದೇ ಶರೀರ ಈಗ ಸಾಯುತ್ತಿದೆ.

ಮೂರನೆಯ ದಿನದ ರಾತ್ರಿ, "ನನ್ನ ಈ ಭೇಟಿಯನ್ನು ಮೊಟಕುಗೊಳಿಸಿ ನಾಳೆಯೇ ಮನೆಗೆ ಹಿಂತಿರುಗುತ್ತಿದ್ದೇನೆ" ಎಂದು ನನ್ನ ಆತಿಥೇಯ ಮೈಕ್ ಗೆ ಹೇಳಿದೆ.

"ನೀನು ಆರಾಮವಾಗಿದ್ದೀ ಎಂದು ಕಾಣುವುದಿಲ್ಲ, ಎಲ್ಲಾ ಸರಿಯಿದೆ ತಾನೇ?" ಎಂದು ಮೈಕ್ ಕೇಳಿದ.

"ಬಾ, ಒಂದು ಸ್ಕಾಚ್ ಹಾಕಿಕೊಂಡು ಮಾತಾಡೋಣ" ಎಂದೆ.

ಇಬ್ಬರೂ ವಿಸ್ಕಿ ಬೆರೆಸಿಕೊಂಡು ಅವನ ಮನೆಯ ಫೈರ್ ಪ್ಲೇಸ್ ಬಳಿ ಬಂದು ಕೂತೆವು.

ನಾನು ಹೇಳಿದೆ, "ಮೈಕ್, ನನಗೆ ಕ್ಯಾನ್ಸರ್ ಆಗಿದೆ ಎಂದು ನನಗನ್ನಿಸುತ್ತದೆ. ಅದೂ, ಅಂತಹ ಗುಣಪಡಿಸಬಹುದಾದ ಒಳ್ಳೆಯ ಕ್ಯಾನ್ಸರ್ ಅಲ್ಲ."

ಅದೇ ಮೊದಲ ಬಾರಿ ನಾನು ನನ್ನ ಪರಿಸ್ಥಿತಿಯನ್ನು ಬಹಿರಂಗವಾಗಿ ಘೋಷಿಸಿದ್ದು.

"ಓಕೆ, ನೀನು ಕೀಟಲೆ ಮಾಡಲು ಇದನ್ನು ಹೇಳುತ್ತಿಲ್ಲ ತಾನೇ? " ಎಂದು ಕೇಳಿದ.

ನಾನು: "ಇಲ್ಲ."

ಅವನು ಸ್ವಲ್ಪ ಹೊತ್ತು ವಿಷಣ್ಣತೆಯಿಂದ ಮೌನವಾಗಿದ್ದ. "ನನಗೇನು ಹೇಳಬೇಕೋ ಗೊತ್ತಾಗುತ್ತಿಲ್ಲ." ಎಂದ.

"ನೋಡು, ನನಗೆ ಕ್ಯಾನ್ಸರ್ ಇದೆಯೋ ಇಲ್ಲವೋ ಎಂದು ನಿಖರವಾಗಿ ನನಗಿನ್ನೂ ಗೊತ್ತಿಲ್ಲ. ಆದರೆ ನನಗಿರುವ ರೋಗ ಲಕ್ಷಣಗಳನ್ನು ನೋಡಿದರೆ, ಅವೆಲ್ಲವೂ ಕ್ಯಾನ್ಸರ್ ನ ಕಡೆಗೇ ಬೆರಳು ತೋರಿಸುತ್ತಿವೆ. ನಾಳೆಯೇ ನಾನು



ಮನೆಗೆ ಹಿಂದಿರುಗಿ, ನಂತರ ಪರೀಕ್ಷೆಗಳನ್ನು ಮಾಡಿಸಿಕೊಂಡು, ಎಲ್ಲವನ್ನೂ ಬಗೆಹರಿಸಿಕೊಳ್ಳುತ್ತೇನೆ. ನಾನು ಅಂದುಕೊಂಡಿದ್ದು ತಪ್ಪಾಗಿರಲಿ ಎಂದು ಹಾರೈಸುತ್ತೇನೆ" ಎಂದೆ.

"ನೀನು ನಿನ್ನ ಲಗೇಜನ್ನು ಇಲ್ಲೇ ಬಿಟ್ಟು ಹೋಗು. ಅದನ್ನು ನಾನು ಅಂಚೆ ಮೂಲಕ ಕಳಿಸುತ್ತೇನೆ" ಎಂದು ಮೈಕ್ ಹೇಳಿದ. ಮಾರನೆಯ ದಿನ ಬೆಳಕು ಹರಿಯುವ ಮೊದಲೇ ಅವನು ನನ್ನನ್ನು ವಿಮಾನ ನಿಲ್ದಾಣಕ್ಕೆ ಬಿಟ್ಟ. ನಂತರದ ಆರು ಗಂಟೆಗಳಲ್ಲಿ ನಾನು ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಇಳಿದೆ. ವಿಮಾನದಿಂದ ಇಳಿಯುತ್ತಿರುವಾಗಲೇ ನನ್ನ ಫೋನು ರಿಂಗಾಯಿತು. ನನ್ನ ಪ್ರೈಮರಿ ಕೇರ್ ವೈದ್ಯೆ ಎಕ್ಸ್ ರೇ ಫಲಿತಾಂಶಗಳ ಬಗ್ಗೆ ಕರೆ ಮಾಡಿದ್ದಳು. "ನಿನ್ನ ಶ್ವಾಸಕೋಶಗಳು ನಿಚ್ಚಳವಾಗಿರುವ ಬದಲು ಮಸಕುಮಸಕಾಗಿದೆ(blurry). ಅದು ಏಕೆ ಹಾಗೆ ಎಂದು ನನಗೆ ಗೊತ್ತಾಗುತ್ತಿಲ್ಲ" ಎಂದು ಅವಳು ಹೇಳಿದಳು.

ಅದು ಏಕೆ ಮತ್ತು ಏನು ಎಂದು ಅವಳಿಗೆ ಖಂಡಿತವಾಗಿಯೂ ಗೊತ್ತು.

ನನಗೂ ಗೊತ್ತು.

********

ಲೂಸಿ ನನ್ನನ್ನು ಕರೆದುಕೊಂಡು ಹೋಗಲು ವಿಮಾನ ನಿಲ್ದಾಣಕ್ಕೆ ಬಂದಿದ್ದಳು. ಆದರೆ ಮನೆ ಸೇರುವವರೆಗೂ ನಾನೂ ಏನನ್ನೂ ಹೇಳದೆ ಸುಮ್ಮನಿದ್ದೆ. ಮನೆ ಸೇರಿ ನಾವಿಬ್ಬರೂ ಸೋಫಾ ಮೇಲೆ ಕುಳಿತುಕೊಂಡೆವು. ನಾನು ಅವಳಿಗೆ ವಿಷಯ ಹೇಳಿದಾಗ, ಅವಳಿಗೂ ಅದೇನೆಂದು ತಿಳಿದಿತ್ತು. ಅವಳು ತನ್ನ ತಲೆಯನ್ನು ನನ್ನ ಭುಜದ ಮೇಲಿಟ್ಟಳು, ನಮ್ಮಿಬ್ಬರ ನಡುವಿನ ಅಂತರ ಮಾಯವಾಯಿತು.

"ನನಗೆ ನೀನು ಬೇಕು" ಎಂದು ಪಿಸುಗುಟ್ಟಿದೆ.

"ನಾನು ನಿನ್ನನ್ನು ಎಂದೆಂದಿಗೂ ಬಿಡುವುದಿಲ್ಲ", ಲೂಸಿ ಮರು ನುಡಿದಳು.

********

ನ್ಯೂರೋ ಸರ್ಜನ್ ಆದ ನಮ್ಮ ಆತ್ಮೀಯ ಗೆಳೆಯನಿಗೆ ಕರೆ ಮಾಡಿ ನನ್ನನ್ನು ಆಸ್ಪತ್ರೆಗೆ ದಾಖಲಿಸಿಕೊಳ್ಳುವಂತೆ ನಾವು ವಿನಂತಿಸಿಕೊಂಡೆವು.

ಆಸ್ಪತ್ರೆಯಲ್ಲಿ ಎಲ್ಲ ರೋಗಿಗಳೂ ಧರಿಸುವ ಪ್ಲಾಸ್ಟಿಕ್ ಬ್ರೇಸ್ಲೆಟ್ಟನ್ನು ನನಗೆ ಕೊಟ್ಟರು. ನನಗೆ ಚಿರಪರಿಚಿತವಾದ ನೀಲಿಬಣ್ಣದ ಆಸ್ಪತ್ರೆ ಗೌನನ್ನು ಹಾಕಿಕೊಂಡು, ನನಗೆ ಪರಿಚಿತರಾದ ನರ್ಸ್‌ಗಳನ್ನು ಹಾದುಕೊಂಡು, ಪರೀಕ್ಷಾ ಕೊಠಡಿಯ ಒಳಗೆ ಹೋದೆ. ಹಲವಾರು ವರ್ಷಗಳಿಂದ, ಇದೇ ಕೊಠಡಿಯಲ್ಲಿ ನಾನು ನೂರಾರು ರೋಗಿಗಳನ್ನು ನೋಡಿದ್ದೆ. ಇದೇ ಕೊಠಡಿಯಲ್ಲಿ ರೋಗಿಗಳ ಜೊತೆ ಕುಳಿತು ಅವರ ಮಾರಣಾಂತಿಕ ರೋಗ ಲಕ್ಷಣಗಳನ್ನೂ ಮತ್ತು ರೋಗ ನಿವಾರಣೆಗೆ ಲಭ್ಯವಿರುವ ಸಂಕೀರ್ಣ ಚಿಕಿತ್ಸೆಗಳನ್ನೂ ವಿವರಿಸಿದ್ದೆ. ಗುಣಮುಖರಾದ ರೋಗಿಗಳನ್ನು ಅಭಿನಂದಿಸಿ, ಅವರ ಮುಖದ ಮೇಲೆ ನಲಿಯುತ್ತಿದ್ದ ಆನಂದವನ್ನು ನೋಡಿ ಸಂತೋಷಪಟ್ಟಿದ್ದೆ. ಇದೇ ಕೊಠಡಿಯಲ್ಲಿ ನಾನು ರೋಗಿಗಳು ಮರಣ ಹೊಂದಿದ ವಿಷಯವನ್ನು ಘೋಷಿಸಿದ್ದೆ. ನನ್ನ ಪಕ್ಕದಲ್ಲಿರುವ ಈ ಕುರ್ಚಿಯಲ್ಲಿ ವೈದ್ಯನಾಗಿ ಕುಳಿತುಕೊಳ್ಳುತ್ತಿದ್ದೆ, ರೋಗಿಗಳನ್ನು ಪರೀಕ್ಷಿಸಿದ ನಂತರ ಇದೇ ಸಿಂಕಿನಲ್ಲಿ ಕೈ ತೊಳೆದುಕೊಳ್ಳುತ್ತಿದ್ದೆ…. ಮಾರ್ಕರ್ ಬೋರ್ಡಿನ ಮೇಲೆ ಸೂಚನೆಗಳನ್ನು ಗೀಚಿದ್ದೆ, ಕೊಠಡಿಯಲ್ಲಿದ್ದ ಕ್ಯಾಲಂಡರನ್ನು ಬದಲಾಯಿಸಿದ್ದೆ. ಎಷ್ಟೋ ಸಲ ವಿಪರೀತ ಆಯಾಸವಾದ ಸಮಯಗಳಲ್ಲಿ, ಇದೇ ಪರೀಕ್ಷಾ ಹಾಸಿಗೆಯ ಮೇಲೆ ಅಡ್ಡಾಗಿ ನಿದ್ದೆ ಮಾಡಲು ಹಾತೊರೆದಿದ್ದೆ. ಈಗ ಇದೇ ಕೊಠಡಿಯ, ಇದೇ ಹಾಸಿಗೆಯ ಮೇಲೆ ನೀಲಿ ಗೌನು ತೊಟ್ಟು ನನ್ನ ಪರೀಕ್ಷೆಗಾಗಿ ಕಣ್ಣುಬಿಟ್ಟುಕೊಂಡು ಕಾಯುತ್ತಿದ್ದೇನೆ!

********

ನನಗೆ ಪರಿಚಿತಳಲ್ಲದ ಯುವ ನರ್ಸೊಬ್ಬಳು ತನ್ನ ಕತ್ತನ್ನು ಬಾಗಿಲಿಂದ ಒಳ ಚಾಚಿ, "ಡಾಕ್ಟರ್ ಇನ್ನೇನು ಬರುತ್ತಾರೆ. ತಾವು ತಾಳ್ಮೆಯಿಂದ ಕಾದಿದ್ದಕ್ಕಾಗಿ ಧನ್ಯವಾದಗಳು" ಎಂದು ಹೇಳಿ ಮರೆಯಾದಳು.

ಆ ಮಾತುಗಳೊಂದಿಗೆ, ನನ್ನ ಕಲ್ಪನೆಯ ಭವಿಷ್ಯ, ಇನ್ನೇನು ಕೈಗೂಡುವಂತಿದ್ದ ಕನಸುಗಳು, ಹತ್ತಾರು ವರ್ಷಗಳ ಅವಿಶ್ರಾಂತ ದುಡಿಮೆ ಆವಿಯಾಗಿ ಹೋಯಿತು.



# ಹರಿಕಥೆ-ಶ್ರೀಮತಿ ವೀಣಾ ಮೋಹನ್ ಜೊತೆ ಸಂವಾದ

**ಉಷಾ ಬಸ್ರೂರ್** , ನ್ಯೂ ಜೆರ್ಸಿ

**ಬೃಂ**ದಾವನ ಕನ್ನಡ ಸಂಘದ *'ಬೃಂಕ್ಸೈ'* ಸರಣಿಯ ಎರಡನೇ ಕಾರ್ಯಕ್ರಮವಾಗಿ ಕಳೆದ ಅಕ್ಟೋಬರ್ 23ರ ಸಂಜೆ 7ಕ್ಕೆ, ನಶಿಸಿ ಹೋಗುತ್ತಿರುವ ಭಾರತೀಯ ಕಲಾ ಪ್ರಾಕಾರವಾದ ಹರಿಕಥೆಯ ಬಗ್ಗೆ, ಅದನ್ನು ಉಳಿಸಲು ಶ್ರಮಿಸುತ್ತಿರುವ 'ಹರಿಕಥಾ ಪ್ರವೀಣೆ' ಬಿರುದಾಂಕಿತ ಶೀಮತಿ ವೀಣಾ ಮೋಹನ್ ಮತ್ತು ಬೃಂದಾವನ ಕನ್ನಡ ಶಾಲೆಯ ಮಕ್ಕಳೊಂದಿಗೆ ಸಂವಾದ/ಪ್ರಶ್ನೋತ್ತರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಶ್ರೀಮತಿ ವಿನುತಾ ಶ್ರೀಧರ್ ಅವರು ಮಕ್ಕಳಿಗೆ ವೀಣಾ ಅವರ ಪರಿಚಯ ಮಾಡಿಕೊಟ್ಟರು. ಸುಮಾರು 27 ವರ್ಷಗಳಿಂದ ನ್ಯೂಜೆರ್ಸಿಯಲ್ಲಿ ನೆಲೆಸಿರುವ ಇವರು ವಾಕ್-ಶ್ರವಣ ತಜ್ಞೆಯೂ, ಸಂಗೀತ, ನೃತ್ಯ ಕಲಾವಿದೆಯೂ ಆಗಿದ್ದು, ಅನೇಕ ರಂಗಪ್ರವೇಶಗಳ ನಿರ್ವಾಹಕಿಯಾಗಿಯೂ ಪರಿಚಿತರು. ಜೊತೆಯಲ್ಲಿ ಕಳೆದ ೯ ವರ್ಷಗಳಿಂದ ಈ ಹರಿಕಥೆಯ ಪುನರುಜ್ಜೀವನಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಈಗಾಗಲೇ ಅಮೆರಿಕಾದ ವಿವಿಧ ಭಾಗಗಳಲ್ಲಿ, ಭಾರತದಲ್ಲಿ ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಅನೇಕ ಹರಿಕಥಾ ಪ್ರದರ್ಶನ ನೀಡಿದ್ದಾರೆ. ಅವರ ಈ ಪ್ರಯತ್ನವನ್ನು ಪ್ರೋತ್ಸಾಹಿಸುವ ಸಲುವಾಗಿ, ಚಿಕ್ಕಮಕ್ಕಳಿಗೆ ಹರಿಕಥೆಯ ಬಗ್ಗೆ ತಿಳಿದುಕೊಳ್ಳಲು, ಅವರಿಗೆ ಇರುವ ಪ್ರಶ್ನೆಗಳನ್ನು ಉತ್ತರಿಸಲು ಈ ಸಂವಾದವನ್ನು ಏರ್ಪಡಿಸಲಾಗಿದೆ ಎಂದರು. ಮಕ್ಕಳಿಗೆ ಅವರೇ ಒಬ್ಬೊಬ್ಬರಾಗಿ ಪ್ರಶ್ನೆಗಳನ್ನು ಕೇಳಲು ಅವಕಾಶ ಮಾಡಿಕೊಡಲಾಯಿತು.

ಮೊದಲನೆಯದಾಗಿ **ಸಾರ್ಥಕ್** ನ ಪ್ರಶ್ನೆ: ಹರಿಕಥೆ ಶುರು ಆಗಿದ್ದು ಯಾವಾಗ, ಯಾರಿಂದ, ಯಾಕೆ?

**ವೀಣಾ:** ಬಹಳ ಹಿಂದೆ, ನಾರದ ಮಹರ್ಷಿಗಳು ಹರಿಕೀರ್ತನೆ ಮಾಡುತ್ತಾ, ಭೂಲೋಕ, ಪಾತಾಳ, ಸ್ವರ್ಗಲೋಕಗಳನ್ನು ಸುತ್ತುತ್ತಿದ್ದರು. ತ್ರೇತಾಯುಗದಲ್ಲಿ ಲವ-ಕುಶರು ರಾಮಾಯಣ ಕಥನವನ್ನು ಎಲ್ಲರಿಗೂ ತಿಳಿಸಿದರು. ಹರಿಕಥೆಗೆ ಬೇರೆ ಬೇರೆ ಹೆಸರುಗಳಿವೆ, ಹರಿಪಾಠ್, ಕಥಾಕಲಾಕ್ಷೇಪ(ಅಂದರೆ, ಕಥೆ ಕೇಳುತ್ತಾ ಸಮಯ ಕಳೆಯೋದು), ಕಥಾಪ್ರಸಂಗ ಇತ್ಯಾದಿ. 12ನೇ ಶತಮಾನದಲ್ಲಿ ಪ್ರಾರಂಭವಾದ 'ಭಕ್ತಿ movement'(ಆಂದೋಲನ, ಚಳುವಳಿ) ನಲ್ಲಿ ಭಕ್ತಿಯಿಂದ ಪ್ರಾರ್ಥಿಸಿದರೆ ದೇವರನ್ನು ಸೇರಬಹುದು, ಮುಕ್ತಿಗಾಗಿ ಭಕ್ತಿ ಮಾರ್ಗ ಎಂದು ಹರಿದಾಸರು ಸಾರಿದರು. ದಾಸ ಶ್ರೇಷ್ಠರೆನಿಸಿದ ಶ್ರೀಪಾದರಾಯರು, ಕನಕದಾಸರು, ಪುರಂದರದಾಸರು, ವಿಜಯದಾಸರು, ಗೋಪಾಲಕೃಷ್ಣ ದಾಸರು ಜನಸಾಮಾನ್ಯರಿಗೂ ದೇವರ ಧ್ಯಾನ ಮಾಡಲು ಮಾರ್ಗ ತೋರಿದರು. ದೇಶದ ಬೇರೆ ಬೇರೆ ಭಾಗಗಳಲ್ಲಿ ಕಾಲಕ್ರಮೇಣ ಈ ಹರಿಕೀರ್ತನೆಯ ರೀತಿ ಬದಲಾಗುತ್ತಾ ಬಂತು, ಉತ್ತರ ಭಾರತದಲ್ಲಿ ಅಭಂಗ್ ರೀತಿಯಲ್ಲಿ ಹರಿಕೀರ್ತನೆ ಮಾಡಿದರೆ, ದಕ್ಷಿಣದಲ್ಲಿ ಶಾಸ್ತ್ರೀಯ ಸಂಗೀತದ ಮೂಲಕ ಕಥೆಗಳನ್ನು ಹೇಳುತ್ತಿದ್ದರು. ತಮಿಳುನಾಡಿನಲ್ಲಿ ಈ ಹರಿದಾಸರನ್ನು ಭಾಗವತರೆಂದೂ ಕರೆಯುತ್ತಾರೆ, ಇವರು ಹರಿಕಥೆಯೊಂದಿಗೆ ನೃತ್ಯ, ನಾಟಕವನ್ನೂ ಸೇರಿಸಿದರು. ಹೀಗೇ ಮುಂದುವರಿಯುತ್ತಾ ಬಂತು.

**ವಿದುಲಾ:** ದೇವರು ಎಲ್ಲಾ ಕಡೆಯೂ ಇರುತ್ತಾನೆಂದ ಮೇಲೆ ನಾವ್ಯಾಕೆ ದೇವಾಲಯಕ್ಕೆ ಹೋಗಬೇಕು?


**ವೀಣಾ:** ನಾನೂ ಚಿಕ್ಕವಳಿದ್ದಾಗ ಈ ಪ್ರಶ್ನೆ ಕೇಳ್ತಿದ್ದೆ . 'ದೇಹೋ ದೇವಾಲಯ ಪ್ರೋಕ್ತಃ, ದೇಹೀ ದೇವೋ ನಿರಂಜನ...' ಅಂದರೆ, ದೇಹವೇ ದೇವಾಲಯ, ನಮ್ಮ ಅಂತರ್ಯವನ್ನು ಅವಲೋಕಿಸಿದರೆ ದೇವರನ್ನು ಕಾಣಬಹುದು, ಆ ಶಕ್ತಿ ನಮ್ಮಲ್ಲಿರುತ್ತದೆ. ಆದರೆ ಅದನ್ನು ನೋಡೋದು ಬಹಳ ಕಷ್ಟ, ಅದಕ್ಕೇ ಒಂದು ಮೂರ್ತಿರೂಪ ಅಂತ ಇದ್ದಾಗ ನಮಗೆ ಅದರ ಮೇಲೆ ನಮ್ಮ ಧ್ಯಾನ/ಗಮನವನ್ನು ಕೇಂದ್ರೀಕರಿಸಲಿಕ್ಕೆ ಸಹಾಯ ಆಗುತ್ತದೆ. ಮನೆಯಲ್ಲಿಯೂ ದೇವಾಲಯ ಮಾಡಿ, ಧ್ಯಾನ ಮಾಡಲು ಅಭ್ಯಾಸ ಮಾಡ್ತಿದ್ರೆ, ನಿನ್ನ ಆಂತರಿಕ ಅವಲೋಕನಕ್ಕೆ ಸಿದ್ಧ ಆಗಲು ಸಾಧ್ಯ, ಅಲ್ಲಿಯವರೆಗೂ ಹೊರಗಿನ ಸಹಾಯ (ದೇವಾಲಯ, ಮೂರ್ತಿ) ಅಗತ್ಯವಾಗಿ ಬೇಕು. ಸತ್ಸಂಗದಿಂದಲೂ ನಮಗೆ ದೇವರೆಡೆಗೆ ನಡೆಯಲು ಸಹಾಯ ಆಗುತ್ತದೆ.

**ರಚ್‌ನಾ:** ಹರಿಕಥೆಯಲ್ಲಿ ಬರುವ ಹಾಡುಗಳು ಶಾಸ್ತ್ರೀಯ ಸಂಗೀತವೇ, ಇಲ್ಲಾ ಜಾನಪದವೆ? ಹರಿಕಥೆ ಶಾಸ್ತ್ರೀಯ ಕಲಾ ಪ್ರಕಾರವೇ, ಜಾನಪದ ಪ್ರಕಾರವೇ?

**ವೀಣಾ:** ಮೊದಲೆಲ್ಲ ಕಡ್ಡಾಯವಾಗಿ ಶಾಸ್ತ್ರೀಯ ಸಂಗೀತದ ಕೆಲವೇ ರಾಗ, ತಾಳ, ಗತಿಗಳಲ್ಲೇ ಹಾಡಬೇಕು ಅಂತಿತ್ತು. ಕ್ರಮೇಣ ಅದರ ಮಿತಿಯು ಸ್ವಲ್ಪ ಸಡಿಲಗೊಂಡು, ಜಾನಪದ, ಭಾವಗೀತೆ, ಬೇರೆ ರಾಗಗಳು ಸೇರಿಕೊಂಡವು. ಆದರೆ ಕೆಲವರು ಈ ರೀತಿ ಎಲ್ಲ ಮಿಶ್ರಣಕ್ಕೆ ಒಪ್ಪದೇ, ಬರೀ ತ್ಯಾಗರಾಜ ಕೃತಿ, ದೀಕ್ಷಿತರ ಕೃತಿಗಳನ್ನಷ್ಟೇ ಅವರ 'ತಂಜಾವೂರು ಭಾಗವತ ಶೈಲಿ'ಯಲ್ಲಿ ಬಳಸುತ್ತಿದ್ದರು. ತೆಲುಗು 'ಬುರ್ರ ಕಥಾ' ಶೈಲಿಯಲ್ಲಿ ತಲೆಬುರುಡೆಯ ಡ್ರಮ್ಸ್ ಹಿಡಿದು ಜಾನಪದ ಹಾಡುಗಳನ್ನೇ ಹಾಡುತ್ತಾರೆ. ದಾಸರು ಹರಿದಾಸ ಕೀರ್ತನೆಗಳನ್ನು ಪ್ರಚಲಿತ ಗೊಳಿಸಲು ಬೇರೆ ಬೇರೆ ಕಲಾಪ್ರಾಕಾರಗಳನ್ನು ಬಳಸಿಕೊಂಡರು, ಸುಳಾದಿ ಒಂದು ಉದಾಹರಣೆ. ಹರಿಕಥೆ ಪ್ರಸಿದ್ಧಿಗೆ ಬಂದ ಹಾಗೆ, ದಾಸರೆಲ್ಲ ತಂಬೂರಿ ಹಿಡಿದು ಬೀದಿ ಬೀದಿಗಳಲ್ಲಿ ಹರಿಕೀರ್ತನೆ ಮಾಡುತ್ತಾ ಸಾಗುತ್ತಿದ್ದರೆ ಭಜನಾ ಮಂಡಳಿಯವರು, ಊರ ಜನರು ಅವರನ್ನು ಹಿಂಬಾಲಿಸುತ್ತಿದ್ದರು. ಗುರುರಾಜುಲು ನಾಯ್ಡು ಅವರು ಈ ಹರಿಕಥೆಗೆ ಹೊಸ ಆಯಾಮವನ್ನೇ ಕೊಟ್ಟರು, ಇನ್ನೂ ಹೆಚ್ಚು ಜನರನ್ನು ಆಕರ್ಷಿಸಲು ಅವರು ಅನೇಕ ಉಪಕಥೆಗಳನ್ನು, ಹಾಸ್ಯವನ್ನೂ ಸೇರಿಸಿ ಹೇಳತೊಡಗಿದರು.

**ವಿದಿಶ & ಶೌರಿ:** ಹರಿಕಥೆ ಯಾಕೆ ಅಷ್ಟು ಹೊತ್ತು ತಗೊಳ್ಳುತ್ತೆ? ಅಷ್ಟೆಲ್ಲ ಡ್ರಾಮಾ ಯಾಕೆ ಮಾಡ್ಬೇಕು ಒಂದು ಕಥೆ ಹೇಳೋಕೆ?

**ವೀಣಾ:** ಮೊದಲೆಲ್ಲಾ ಹರಿಕಥೆ/ಕಥಾಕಾಲಕ್ಷೇಪ ಅನ್ನೋದು 6-7 ಗಂಟೆಗಳ ಕಾಲ ನಡೆಯೋದು, ಈಗ ಅದು ಬರೀ ೯೦ ನಿಮಿಷಕ್ಕೆ ಬಂದು ನಿಂತಿದೆ. ಹರಿಕಥೆ ಅಂದ್ರೆ ಅದ್ರಲ್ಲಿ ಕಥೆ, ಹಾಡು, ನೃತ್ಯ, ನಾಟಕ ಎಲ್ಲ ಇರ್ಬೇಕು, ಅಷ್ಟೊಂದು




ಕಲಾಕಾರರಿಗೆ ಅವಕಾಶ ಕೊಟ್ಟಹಾಗೆ ಆಗುತ್ತದೆ. ಕಥೆಯಲ್ಲಿ ಎಲ್ಲ ಸನ್ನಿವೇಶಗಳೂ, ಪ್ರತೀ ಒಂದು ಸಣ್ಣ ಘಟನೆಯೂ ಇರಬೇಕು, ಇವನ್ನೆಲ್ಲ ಸೇರಿಸಿ ಕಥೆಹೇಳುವಾಗ ತುಂಬಾ ಸಮಯ ತಗೊಳ್ತದೆ. ಆಮೇಲೆ, ಒಂದು ಕಥೆ ಹೇಳುವಾಗ ಹಾವ, ಭಾವದೊಂದಿಗೆ, ಸಂದರ್ಭಕ್ಕೆ ತಕ್ಕಂತೆ ಸ್ವರದಲ್ಲಿ ಏರಿಳಿತ ಎಲ್ಲ ಇದ್ದರೆ ಕಥೆ ಕೇಳುವವರಿಗೂ ಖುಷಿ ಆಗತ್ತೆ, ಬರೀ ಕಥೆ ಹೇಳ್ಕೊಂಡು ಹೋಗುವ ಬದಲು ಮಧ್ಯೆ ಹಾಡನ್ನು ಸೇರಿಸಿದರೆ ಕಥೆ ಹೇಳುವವರಿಗೂ ಸ್ವಲ್ಪ ವಿಶ್ರಾಂತಿ ಸಿಗುತ್ತದೆ.  ಎಲ್ಲರೂ ಆಸಕ್ತಿಯಿಂದ ಕೂತು ಕೇಳಬೇಕು ಅಂದ್ರೆ ಈ ಎಲ್ಲ ಡ್ರಾಮಾ ಇರಲೇಬೇಕು, ಇಲ್ಲಾಂದ್ರೆ ಬೋರ್ ಆಗ್ತದೆ.

**ನವಿಷ್ಕಾ:** ನೀವು ಹೇಗೆ ಎಲ್ಲ ಕಥೆಗಳನ್ನೂ ನೆನಪಿಟ್ಟುಕೊಳ್ತೀರಿ? ಹೇಗೆ ತಯಾರಿ ನಡೆಸ್ತೀರಿ ಪ್ರೋಗ್ರಾಮ್ ಕೊಡೋಕೆ?

**ವೀಣಾ:** ಮೊದಲಿಗೆ ಅಂದಿನ ಕಥೆಗೆ ಪೂರಕವಾದ ಅನೇಕ ಪುಸ್ತಕಗಳನ್ನು ಓದಬೇಕು, ಅರ್ಥ ಮಾಡ್ಕೋಬೇಕು, ಆಮೇಲೆ ಅದನ್ನು ಹೇಗೆ, ಯಾವ ರೀತಿಯಲ್ಲಿ ಜನರಿಗೆ ಹೇಳಬೇಕು, ಅದಕ್ಕೆ ಸರಿಹೊಂದುವ ಹಾಡು, ಹಾಡುಗಾರರನ್ನು ಆರಿಸಬೇಕು, ಆ ಕಥೆಗೆ  ಹೊಂದುವ ಪಕ್ಕವಾದ್ಯ(ಡ್ರಮ್, ವಯೋಲಿನ್, ಹಾರ್ಮೋನಿಯಂ..)ದ ಆಯ್ಕೆ ಮಾಡಿ, ಅವರೊಂದಿಗೆ ಅಭ್ಯಾಸ ಮಾಡಬೇಕು. ಕಥೆಯ ಸಂದರ್ಭಗಳನ್ನು ಲಿಸ್ಟ್ ಮಾಡ್ಕೊಂಡು, ಯಾವಾಗ

ಯಾವ ಹಾಡು ಹಾಡಬೇಕು ಅಂತ ಕ್ಯೂ-ವರ್ಡ್ ಹಾಡುಗಾರರಿಗೆ ಕೊಡಬೇಕು, ಒಮ್ಮೆ ಇಡೀ ಕಥೆ ಹೇಗೆ ಬರಬೇಕು ಅಂತ visualize ಮಾಡ್ಕೋಬೇಕು. ಇದೆಲ್ಲ ಪ್ರಾಕ್ಟಿಸ್ ಮಾಡಿದ ಮೇಲೆ, ಪ್ರೋಗ್ರಾಮ್ ಕೊಡೋದು.

**ಕೌಸ್ತುಭ್:** ಹರಿ ಅಂದ್ರೆ ವಿಷ್ಣು ಅಂತ ಗೊತ್ತು, ಹರಿಕಥೆ ಅಂದ್ರೆ ಬರೀ ವಿಷ್ಣು ಕಥೆನಾ, ಬೇರೆ ದೇವರ ಬಗ್ಗೆ ಹೇಳೋದೂ ಹರಿಕಥೆ ಅಂತ ಆಗತ್ತಾ?

**ವಿನುತಾ:** ಇದೇ ಪ್ರಶ್ನೆ ನಿಹಾರ್ & ಅಭಿನವ್ ಸಹ ಕೇಳಿದ್ರು..

**ವೀಣಾ:** ನಾರದ ಮುನಿಗಳು ಈ ಹರಿಕಥೆ/ಕೀರ್ತನೆ ಶುರು ಮಾಡಿದಾಗ ಹರಿಯ ಬಗ್ಗೆಯೇ ಹೇಳ್ತಿದ್ದದ್ದು, ಆಮೇಲೆ ಲವ-ಕುಶರು ಶ್ರೀರಾಮನ ಕುರಿತು ಹಾಡಿದರು, ಶ್ರೀರಾಮ ಅಂದರೆ ಹರಿಯೇ! ಹಾಗಾಗಿ ಅದು ಹರಿಕಥೆ. ಇನ್ನು ಶಿವನ ಬಗ್ಗೆ ಹೇಳಿದಾಗ ಹರಕಥೆ ಎಂತಲೂ, ಜೈನ್ ತೀರ್ಥಂಕರರ ಬಗ್ಗೆ ಆದರೆ ಜಿನಕಥೆ ಅಂತಲೂ ಕರೆಯುತ್ತಾರೆ. ಬೇರೆ ಬೇರೆ ಹೆಸರುಗಳೆಲ್ಲ ಬೇಡ ಕಥಾಪ್ರಸಂಗ ಅಂತ ಕರೆಯಬೇಕು ಎಂದು ಕೆಲವರು ಹೇಳಿದ್ರು. ಕಥಾಕಾಲಕ್ಷೇಪ ಅಂತಾನೂ ಇದೆ. ಹೆಚ್ಚಾಗಿ ಜನಪ್ರಿಯ ಆಗಿರೋದು ಹರಿಕಥೆ ಅಂತ, ಹರಿ ಎಂದರೆ ಪರಮಾತ್ಮ, ದೇವರು. ದೇವರ ಬಗೆಗಿನ ಕಥೆಗಳನ್ನು ಹಾಡು, ನೃತ್ಯ, ನಾಟಕಗಳ ಮೂಲಕ ಜನರಿಗೆ ಹೇಳೋದನ್ನು ಹರಿಕಥೆ ಅಂತ ಹೇಳ್ತಾರೆ, ಅದು ಯಾವುದೇ ದೇವರ ಬಗ್ಗೆಯೂ ಆಗಿರಬಹುದು.

**ಅಭೀಷ್ಟ:** ನೀವು ಈ ಕಲೆಯನ್ನು ಕಲಿಯಲು ಬೇರೆಲ್ಲ ಕಲೆಗಳನ್ನು ಕಲಿಯುವ ಹಾಗೆ ಪ್ರತ್ಯೇಕ ತರಬೇತಿ ಗುರುಗಳಿಂದ ಪಡೆದಿದ್ದೀರಾ?

**ವೀಣಾ:** ಅಮೆರಿಕಾದಲ್ಲಿ ಇರೋದ್ರಿಂದ ಇಲ್ಲಿ ಯಾರೂ ತರಬೇತಿ ಕೊಡುವವರಿಲ್ಲ, ಇನ್ನೂ ಆ ದೀಕ್ಷೆ ಪಡೆಯಲು ಗುವಿನ ಹುಡುಕಾಟದಲ್ಲಿದ್ದೇನೆ. ಆದರೆ ಅದಕ್ಕೆ ಬೇಕಾದ ಸಂಗೀತ, ನೃತ್ಯ, ನಾಟಕಗಳ ತರಬೇತಿ ಪಡೆದಿದ್ದೇನೆ. ನಿರಂತರ ಅಭ್ಯಾಸ ಮಾಡಬೇಕು, ಸಾಹಿತ್ಯಾಭಿರುಚಿ ಇರಬೇಕು, ಕೆಲವೊಮ್ಮೆ ಕಥೆಗೆ ಪೂರಕವಾದ ಹಾಡುಗಳನ್ನು ರಚಿಸಿ, ಹೊಂದುವ ರಾಗ ಸಂಯೋಜನೆ ಮಾಡಬೇಕಾಗುತ್ತದೆ. ಏಕಲವ್ಯನಂತೆ ಬೇರೆ ಬೇರೆ ಹರಿದಾಸರ ಶೈಲಿಗಳನ್ನು ನೋಡಿ ನೋಡಿ ನನ್ನದೇ ಪ್ರಯತ್ನದಿಂದ ಇದುವರೆಗೆ ಹರಿಕಥೆ ನಡೆಸಿಕೊಡುತ್ತಿದ್ದೇನೆ. ಈಗ ಬೆಂಗಳೂರಿನ ಪ್ರಭಾತ್ ಕಲಾವಿದರ ಸಂಸ್ಥೆ ಈ ಕಲೆಯನ್ನು ಆಸಕ್ತ ಮಕ್ಕಳಿಗೆ ಹೇಳಿಕೊಡ್ಲಿಕ್ಕೆ ಶಾಲೆ ಪ್ರಾರಂಭಿಸಿದ್ದಾರಂತೆ, ಸಂತೋಷದ ವಿಷಯ.

**ಸುದೀಪ್ತಾ:** ಹರಿಕಥೆಯೊಂದಿಗೆ ಭರತನಾಟ್ಯ, ಕಥಕ್ fusion ಮಾಡಿದ್ರೆ ಹೇಗಿರತ್ತೆ?

**ವೀಣಾ:** ಇತ್ತೀಚೆಗೆ ಬಾಸ್ಟನ್ ಕನ್ನಡ ಸಂಘದಲ್ಲಿ 'ಹರಿಕಥಾನೃತ್ಯ' ಅಂತ ಭರತನಾಟ್ಯ ಕಲಾವಿದರೊಂದಿಗೆ ಹರಿಕಥೆ ಮಾಡಿದ್ವಿ, ಎಲ್ಲರಿಗೂ ತುಂಬಾ ಇಷ್ಟ ಆಯ್ತು. ಆಮೇಲೆ Tennessee ಯಲ್ಲಿ 'ಹರಿಕಥಾ ನಾಟಕ' ಅಂತ ಸ್ಟೇಜ್ ನ 2 ಭಾಗ ಮಾಡಿ, ನನ್ನ ಅಭಿನಯದ ಬದಲು ಅವರು ನಾಟಕ ಮಾಡಿ ತೋರಿಸಿದ್ರು. Akkaದಲ್ಲಿ ಪ್ರಭಾತ್ ಕಲಾವಿದರ ಮೊಮ್ಮಗ ಹರಿಕಥಾ-ಕಥಕ್ fusion ನಡೆಸಿಕೊಟ್ಟರು, ಅದ್ಭುತವಾಗಿತ್ತು. ಇದು ಒಳ್ಳೆಯ ಕಾನ್ಸೆಪ್ಟ್, ಬೃಂದಾವನ ದವರೂ ಈ ನಿಟ್ಟಿನಲ್ಲಿ ಯೋಚಿಸಬೇಕು.

**ಪ್ರಸನ್ನ:** ಈ ಹರಿಕಥೆಯ ಪ್ರಾರಂಭ ಹೇಗಾಯ್ತು, ಹೇಗೆ ನಡೆದು ಬಂತು, ಬೇರೆ ಬೇರೆ ಹೆಸರುಗಳು, ಎಲ್ಲವನ್ನೂ ವಿವರಿಸಿದ್ದಕ್ಕೆ ಧನ್ಯವಾದಗಳು. ಮಕ್ಕಳು ಮಾತ್ರ ಅಲ್ಲ, ದೊಡ್ಡವರೂ ಹರಿಕಥೆಯ ಬಗ್ಗೆ ತುಂಬಾ ವಿಷಯಗಳನ್ನು ತಿಳಿದುಕೊಳ್ಳಲು ಸಹಾಯ ಆಯ್ತು. ಈ ಕಲೆಯನ್ನು ಉಳಿಸಲು ಶ್ರಮಿಸುತ್ತಿರುವ ವೀಣಾ ಅವರಿಗೂ, ಅದಕ್ಕೆ ಉತ್ತೇಜನವನ್ನು ಈ ತೆರನಾದ ಕಾರ್ಯಕ್ರಮಗಳಿಂದ ಕೊಡುತ್ತಿರುವ ಬೃಂದಾವನ ಪ್ರಗತಿ ತಂಡದ ಉತ್ಸಾಹವೂ ಶ್ಲಾಘನೀಯ. ಹರಿಕಥಾ-ನೃತ್ಯ-ನಾಟಕ ಅಂತ ಬೃಂದಾವನ ದವರು ಮಾಡಬಹುದು.

**ಉಮಾ:** ಮಕ್ಕಳ ಕೈಯಲ್ಲಿ ಸಧ್ಯದಲ್ಲೇ ಒಂದು ಹರಿಕಥೆ ಮಾಡಿಸಬಹುದಾ?

**ವೀಣಾ:** ಖಂಡಿತವಾಗಿಯೂ, ಸುಮಾರು 5-6 ವರ್ಷಗಳಿಂದ ಅದರ ಬಗ್ಗೆ ಪ್ರಯತ್ನ ನಡೀತಾ ಇದೆ, ಆದಷ್ಟು ಬೇಗ ಆ ಕಾಲ ಕೂಡಿ ಬರಲಿ! ಮಕ್ಕಳೇ, ಸಮಯ ಸಿಕ್ಕಾಗೆಲ್ಲ ನನ್ನ youtube channel ನಲ್ಲಿ ಇರುವ ಹರಿಕಥೆಗಳನ್ನು ಕೇಳುತ್ತಿರಿ, ಕಥೆ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ, ಆಸಕ್ತಿಯಿಂದ ಕೇಳಿ, sub-scribe ಮಾಡಿದ್ರೆ ಹೊಸ ಹೊಸ ಕಥೆಗಳು ಬಂದ ಹಾಗೆ ಕೇಳಬಹುದು, ಈ ಕಲೆಯನ್ನು ಉಳಿಸಿ, ಬೆಳೆಸಲು ಸಹಾಯ ಆಗುತ್ತದೆ.

ನ್ಯೂ ಜೆರ್ಸಿ ಬೃಂದಾವನ ಕನ್ನಡ ಶಾಲೆಗಳಲ್ಲಿ ಕನ್ನಡ ಪಠ್ಯೇತರ ಚಟುವಟಿಕೆಗಳೊಡನೆ, ಕನ್ನಡ ಕಲೆ, ಸಂಸ್ಕೃತಿಯನ್ನು ಪರಿಚಯಿಸುವ ಉದ್ದೇಶದೊಂದಿಗೆ, ಬೃಂದಾವನ ಕನ್ನಡ ಕಲಿಸೋಣ ಶೈಕ್ಷಣೀಯ ಸರಣಿ- ಸಂಕ್ಷಿಪ್ತವಾಗಿ ಬೃಂಕ್ಶೈ- ಸರಣಿ ಆರಂಭವಾದ ಬಗ್ಗೆ ಬೃಂದಾವನ ಕನ್ನಡ ಕಲಿಸೋಣ ನಿರ್ದೇಶಕಿ **ಅರ್ಚನಾ ಆಚಾರ್ಯ** ಅವರು ಸಂಕ್ಷಿಪ್ತವಾಗಿ ತಿಳಿಸಿ, ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳಿಸಿದರು.



# ಪರ್ವತಗಳು ಚಿರಾಯುವಾಗಲಿ

**ಹತ್ತಿಬೆಳಗಲ್ ನಾಗರಾಜ ರಾವ್,** ಜರ್ಮನಿ

ನಿಸರ್ಗದ ರಮಣೀಯತೆಯ ಪಾತ್ರಧಾರಿ ಸಂಪನ್ಮೂಲಗಳಾದ ನದಿ, ಅರಣ್ಯ, ಸಾಗರದಂಥ ಬಲು ಉದ್ದದ ಪಟ್ಟಿಯಲ್ಲಿ ಸುಭದ್ರ ಸ್ಥಾನ ಪರ್ವತಗಳದ್ದು. ಭೂಮಿಯ ಶೇ.25 ರಷ್ಟು ಭಾಗವನ್ನು ಬೆಟ್ಟಗಳು ಆವರಿಸಿದ್ದು, ಪ್ರಪಂಚದಲ್ಲಿನ ಶೇ.15 ರಷ್ಟು ಜನರಿಗೆ ನೆಲೆ ನೀಡಿವೆ. ಪರ್ವತಗಳು ಜೀವಸಂಕುಲಕ್ಕೆ ದೈನಂದಿನ ಜೀವನಕ್ಕೆ ಬೇಕಾಗುವ ಅರ್ಧದಷ್ಟು ನೀರನ್ನು ಒದಗಿಸುತ್ತವೆ. ಲೋಕವನ್ನು ಹರಸುತ್ತಿರುವ ಯುಗದ ದೈವ ತಿಮ್ಮಪ್ಪನು ನೆಲೆನಿಂತಿರುವುದು ಕೂಡ ಸಪ್ತಗಿರಿ ಶೃಂಗದಲ್ಲಿ.

ವಿಶ್ವಸಂಸ್ಥೆಯು 2001 ರಲ್ಲಿ ನ್ಯೂಯಾರ್ಕಿನಲ್ಲಿ 'ಪರ್ವತ ಮತ್ತು ಪರಿಸರ' ಕುರಿತಾಗಿ ವಿಸ್ತೃತ ಚರ್ಚೆಗಳಿಂದ ಕೂಡಿದ ವಿಶೇಷವಾದ ಸಮಾವೇಶವೊಂದನ್ನು ನಡೆಸಿತು. ಇದರ ಫಲಶ್ರುತಿಯಾಗಿ 2003 ರಿಂದ ಮೊದಲ್ಗೊಂಡು, ಪ್ರತಿವರ್ಷ ಡಿಸೆಂಬರ್ ತಿಂಗಳ 11 ರಂದು 'ಅಂತರರಾಷ್ಟ್ರೀಯ ಪರ್ವತಗಳ ದಿನ' ಎಂದು ಆಚರಿಸಲಾಗುತ್ತದೆ. ಆಚರಣೆಯ ಮುಖ್ಯ ಉದ್ದೇಶಗಳೆಂದರೆ ಜೀವವೈವಿಧ್ಯಕ್ಕೆ ಬೆನ್ನೆಲುಬಿನಂತಿರುವ ಪರ್ವತಗಳ ಬಗ್ಗೆ ಸೂಕ್ತ ತಿಳುವಳಿಕೆ ಮತ್ತು ಅವುಗಳ ಸಂರಕ್ಷಣೆ ಬಗ್ಗೆ ಜನಜಾಗೃತಿ ಮೂಡಿಸುವುದಾಗಿದೆ. ಅಂತರರಾಷ್ಟ್ರೀಯ ಪರ್ವತ ದಿನದ ಸಂಕೇತದಲ್ಲಿ ಮೂರು ಸಮಬಾಹು ತ್ರಿಕೋನಗಳಿದ್ದು ಮುಖ್ಯವಾಗಿ ಕಪ್ಪು ಮತ್ತು ಪರ್ವತಗಳನ್ನು, ಪರ್ವತದ ಮೇಲ್ಭಾಗದಲ್ಲಿರುವ ಹಿಮ, ಪರ್ವತಗಳ ಒಳಗಿನಿಂದ ಗಣಿಗಾರಿಕೆ ಮಾಡುವ ಸಂಪನ್ಮೂಲಗಳನ್ನು ಅರ್ಥೈಸುತ್ತವೆ.




ಪರ್ವತಗಳ ರಚನೆಯನ್ನು ಮಣ್ಣಿನಿಂದ, ಕಲ್ಲಿನಿಂದ ಮತ್ತೆ ಸಮ್ಮಿಶ್ರವಾಗಿ ಗುರುತಿಸಬಹುದು. ಅದೆಷ್ಟೋ ಖನಿಜ ನಿಕ್ಷೇಪಗಳಿಂದ ಮೈದುಂಬಿಕೊಂಡಿವೆ. ಅಲ್ಲದೆ ಅವುಗಳ ಎತ್ತರ, ಅಗಾಧತೆ, ವಿಶಾಲತೆ ಮತ್ತು ಅದ್ಭುತ ಸೌಂದರ್ಯ ಅನವರತ ಕುತೂಹಲ ಹೆಚ್ಚಿಸುವಂಥವು. ಅಕ್ಕನ ಕಳಕಳಿ 'ಬೆಟ್ಟದ ಮೇಲೊಂದು ಮನೆಯ ಮಾಡಿ.. ' ವಚನದಲ್ಲೂ ಬೆಟ್ಟಗಳದ್ದೇ ಉಪಮೆ! ಪರ್ವತಗಳಲ್ಲಿನ ಎತ್ತರ, ಇಳಿಜಾರು, ವಿಭಿನ್ನ ಸ್ಥಳಾಕೃತಿ, ಹಲವಾರು ಬೆಳೆಗಳಿಗೂ, ತೋಟಗಾರಿಕೆ, ಜಾನುವಾರು ಮತ್ತು ಅರಣ್ಯ ಪ್ರಭೇದಗಳಿಗೂ ಆಶ್ರಯ ಸ್ಥಳಗಳಾಗಿವೆ. ವಿವಿಧ ಪರಿಸರ ವ್ಯವಸ್ಥೆಗಳು, ಸ್ಥಳೀಯ ಪ್ರಭೇದಗಳೊಟ್ಟಿಗೆ ವಿವಿಧ ಜೀವಗಳು, ಆನುವಂಶಿಕ ಸಂಪನ್ಮೂಲಗಳನ್ನು ಒಳಗೊಂಡಿದೆ. ಪರ್ವತದ ಬಹುಭಾಗವನ್ನು ಪ್ರಾಣಿಗಳನ್ನು ಮೇಯಿಸಲು ಬಳಸಲಾಗುತ್ತಿದೆ. ಪ್ರಾಣಿಗಳು ಗೊಬ್ಬರವನ್ನು ಒದಗಿಸುತ್ತ, ಮಣ್ಣಿನ ಫಲವತ್ತತೆ ಹೆಚ್ಚಿಸುತ್ತವೆ. ಬೆಟ್ಟದ ತಪ್ಪಲು ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಾಫಿ, ಟೀ, ಕೋಕೊ, ಗಿಡಮೂಲಿಕೆಗಳು, ಸಾಂಬಾರ ಪದಾರ್ಥ ಮೊದಲಾದವುಗಳನ್ನು ಬೆಳೆಯಲಾಗುತ್ತಿದೆ. ದೇಶದ ಆರ್ಥಿಕ ಸ್ಥಿತಿಯಲ್ಲಿ ಇದರ ಕೊಡುಗೆ ಅಪಾರವಾಗಿದೆ.

ರಾಜಾಧಿರಾಜರ ಕಾಲಘಟ್ಟಗಳಿಂದಲೂ ನಾಗರೀಕ ಜೀವನ ಶೈಲಿಯ ವಿಕಸನಕ್ಕೆ ತೋರಣ ಕಟ್ಟಿದ ಕೀರ್ತಿ ಪರ್ವತಗಳದ್ದು. ಇತಿಹಾಸದ ದಾಖಲೆಗಳನ್ನು ಉಡಿಯಲ್ಲಿಟ್ಟುಕೊಂಡಿವೆ. ಗತ ಸಾಂಸ್ಕೃತಿಕ ಪರಂಪರೆಯ ಪರಿಕಲ್ಪನೆಗೆ ಅಳಿದು ಉಳಿದಿರುವ ಶಿಲ್ಪಕಲಾಪೂರ್ಣ ಗುಡಿ ಗುಂಡಾರಗಳು, ಕೋಟೆ ಕೊತ್ತಲಗಳು, ಅರಮನೆ ಬಿಡಾರಗಳು ಮೊದಲಾದವುಗಳು ಪರ್ವತಗಳ ಔದಾರ್ಯಗಳಾಗಿಯೇ ಉಳಿದಿವೆ. ಆಧುನಿಕ ವಿಜ್ಞಾನ ಮನೋಭಾವಕ್ಕೂ ಮಿಗಿಲಾದ ಚಿಂತನಗಳಿಗೆ ಆ ಕಾಲದ ಜನರ ಪ್ರಯೋಗ ಶಾಲೆ ಅಥವಾ ಗರಡಿಮನೆಯಂತೆ ಪರ್ವತಗಳಿವೆ. ಮನುಜ ಸ್ವಾರ್ಥದಿಂದ ಅಳಿಸಿರುವುದಕ್ಕೆ ಧಿಕ್ಕಾರವಿದೆ. ದೇಶದ ಭೂಭಾಗದ ಗಡಿಯಲ್ಲಿ ಸಶಸ್ತ್ರ ಯೋಧರ ತಂಡದಂತೆ ಪರ್ವತಗಳು ದಬ್ಬಾಳಿಕೆಗಳನ್ನು ಖಂಡಿಸುತ್ತಾ ಮೆಟ್ಟಿ ನಿಂತಿವೆ. ಕೈಲಾಸ ಪರ್ವತ, ಸಂಜೀವಿನಿ ಪರ್ವತ, ಗೋವರ್ಧನ ಗಿರಿ, ಗೌರಿಶಂಕರ ಶಿಖರ, ಹೀಗೆ ಅನೇಕ ಪರ್ವತಗಳು ಗತ ಚರಿತ್ರೆಯ ಸ್ಫುಟ ಅನುಭೂತಿಗಳನ್ನು ಉಣಿಸುತ್ತಿವೆ.

ಗಿರಿ ಶ್ರೇಣಿಗಳು ಭೂಗೋಳದ ಸುತ್ತ ಬೀಸುವ ಮಾರುತವನ್ನು ತಡೆದು ಮೋಡಗಳಾಗಿ ಹೆಪ್ಪುಗಟ್ಟಿಸಿ, ಮಳೆ ಸುರಿಸುತ್ತವೆ. ಜಗತ್ತಿನ ಎಲ್ಲ ನದಿಗಳ ಶಕ್ತಿ ಕೇಂದ್ರಗಳಾಗಿ, 'ಜಲಚಕ್ರ' ನಿರ್ವಹಿಸುತ್ತಾ ಸಾರ್ಥಕತೆ ಮೆರೆದಿವೆ. ಪಶ್ಚಿಮಘಟ್ಟಗಳಿಂದ ಆರಂಭಿಸಿ ಮುಕುಟ ರತ್ನ ಹಿಮಾಲಯದ ಶಿಖರಗಳವರೆಗೂ, ಅದೆಷ್ಟೋ ಚಿಲುಮೆಗಳನ್ನು ಉಕ್ಕಿಸುತ್ತ ನದಿಗಳ ಓಘಕ್ಕೆ ಧಾರೆಯೆರೆದಿವೆ. ಪರ್ವತಶ್ರೇಣಿಯ ಜನ ಸಮುದಾಯಗಳ ಸಂಸ್ಕೃತಿ, ಭಾಷೆ, ಪರಂಪರೆ, ಜೀವನದ ರೀತಿ ನೀತಿ, ಆಹಾರ, ಉಡುಗೆ-ತೊಡುಗೆ, ಸಂಪ್ರದಾಯ ಎಲ್ಲವೂ ವಿಶಿಷ್ಟ.

ಹವಾಮಾನ ಬದಲಾವಣೆ, ಸಮರ್ಥನೀಯವಲ್ಲದ ಕೃಷಿ ಪದ್ಧತಿಗಳು, ವಾಣಿಜ್ಯ ಗಣಿಗಾರಿಕೆ, ಲಾಗಿಂಗ್, ಮತ್ತು ಬೇಟೆಯಾಡುವುದು ಇವೇ ಮೊದಲಾದವುಗಳು ಪರ್ವತ ಜೀವವೈವಿಧ್ಯತೆಗೆ ಸಂಚಕಾರ ತಂದಿವೆ. . ಅಲ್ಲದಲೆ ಭೂ ಬಳಕೆ ಮತ್ತು ಭೂ ಕವಚ ಬದಲಾವಣೆ, ನೈಸರ್ಗಿಕ ವಿಪತ್ತುಗಳು ಜೀವವೈವಿಧ್ಯತೆಯನ್ನು ಹಿಂಸಿಸುತ್ತಿವೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಹೆಚ್ಚುತ್ತಿರುವ ತಾಪಮಾನ ದಿಂದಾಗಿ ಪರ್ವತದ ಹಿಮನದಿಗಳು ಕರಗುವುದರಿಂದ, ನೇರವಾಗಿ ಲಕ್ಷಾಂತರ ಜನರ ಕುಡಿಯುವ ನೀರಿನ ಸರಬರಾಜಿಗೆ ಅಪಾಯವಾಗಲಿದೆ. ಹಾಗಾಗಿ ಹೆಚ್ಚಾಗುತ್ತಿರುವ ಇಂಗಾಲದ ಡೈ ಆಕ್ಸೈಡ್, ಮೊನೊ ಆಕ್ಸೈಡ್ ಮೊದಲಾದವುಗಳನ್ನು ತಗ್ಗಿಸಬೇಕಾದ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ ನೈಸರ್ಗಿಕ ಸಂಪತ್ತುಗಳಾದ ಪರ್ವತಗಳನ್ನು ಸಂರಕ್ಷಿಸಿಕೊಳ್ಳುವಲ್ಲಿ ನಮ್ಮಲ್ಲಿರುವ ವೈಜ್ಞಾನಿಕ ತಿಳುವಳಿಕೆಗಳನ್ನು ಕಾರ್ಯರೂಪದಲ್ಲಿ ತರಬೇಕಿದೆ. ದಿಟ್ಟತನಕ್ಕೆ ಉಪಮೆಯಂತಿರುವ ಪರ್ವತಗಳ ಸ್ವಾರ್ಥ ಕಾರಣದ ತೇಜೋವಧೆಗೆ ಪೂರ್ಣವಿರಾಮ ಹಾಕಬೇಕಿದೆ. ಕೆಲ ದೇಶಗಳಲ್ಲಿ ಚಾಲ್ತಿಯಲ್ಲಿರುವ ಪ್ರಕೃತಿ ಸ್ನೇಹಿ ಧೋರಣೆಗಳು ಮತ್ತು ತಂತ್ರಜ್ಞಾನಗಳನ್ನು ಜಗತ್ತಿನೆಲ್ಲೆಡೆ ಅಳವಡಿಸಿಕೊಳ್ಳುವುದು ಯೋಗ್ಯ.

'ಪರ್ವತಗಳು ಚಿರಾಯುವಾಗಲಿ' 'ಸದಾಶಯದ ಭಾವ ಜಾಗೃತವಾಗಲಿ' ತನ್ಮೂಲಕ ಮುಂದಿನ ಪೀಳಿಗೆಗೂ ಪರ್ವತಗಳ ಅಗಾಧವಾದ ಅಸ್ಮಿತೆಯ ರಸಾನುಭೂತಿಯನ್ನು ವಿಸ್ತರಿಸಬೇಕಾದ ಕಾಯಕ ತ್ವರಿತವಾಗಲಿ.



# ಲಕ್ಷ್ಮೀದೇವಿಯ ಪ್ರಭಾವ

ಪರಿಮಳಾ ಕೌಜಲಗಿ

ಒಂದೊಮ್ಮೆ ವೈಕುಂಠದಲ್ಲಿ ಲಕ್ಷ್ಮೀನಾರಾಯಣರು ವಿನೋದದಿಂದ ಹರಟುತ್ತಲಿದ್ದರು. ಮಾತು ಮಾತಿನಲ್ಲಿ ಲಕ್ಷ್ಮೀದೇವಿಯೆಂದಳು "ದೇವಾ ನೀನು ಏನೇ ಹೇಳು, ಭೂಲೋಕದಲ್ಲಿ ನನ್ನ ಪ್ರಭಾವವೇ ಹೆಚ್ಚು." ಅದಕ್ಕೆ ನಾರಾಯಣ ಒಪ್ಪಲಿಲ್ಲ. ಕೊನೆಗೆ ಪರೀಕ್ಷಿಸಿಯೇ ನೋಡುವುದು ಎಂದು ನಿರ್ಧಾರವಾಯಿತು. ನಾರಾಯಣನೇ ಮೊದಲು ಭೂಮಿಗೆ ಹೊರಡುವುದೆಂದೂ ನಿಶ್ಚಿತವಾಯಿತು.

ಅದರಂತೆ ನಾರಾಯಣ ಭೂಮಿಗೆ ಬಂದು ಇಳಿದ. ಒಂದು ಊರ ಹೊರಗೆ ಇರುವ ವಿಷ್ಣುದೇವಾಲಯದಲ್ಲಿ ತನ್ನ ವಾಸ್ತವ್ಯ ಹೂಡಿದ. ಮಳೆಗಾಲ ಕಳೆದು ಶರದೃತುವಿನ ಸಂತಸದ ವಾತಾವರಣ. ದೇವಾಲಯದ ಒಂದು ಕಡೆ ಭಗವಂತ ಸಂಜೆಯ ಹೊತ್ತು ಒಂದು ಆಸನದ ಮೇಲೆ ಕುಳಿತುಕೊಂಡಿದ್ದ. ಮನ್ಮಥನನ್ನೂ ಮೀರಿಸುವ ಸುಂದರ ರೂಪ. ಹೊಳೆಯುವ ಬಂಗಾರ ವರ್ಣದ ಪೀತಾಂಬರ. ಮುಖದಲ್ಲಿ ಮಂದಹಾಸ. ಸರಿಸುಮಾರು ೨೮-೩೦ ರಷ್ಟು ವಯಸ್ಸು. ಗುಡಿಗೆ ಬಂದುಹೋಗುತ್ತಲಿದ್ದ ಜನರಿಗೆ ಕುತೂಹಲ. ಯಾರಿವನು ಎಂದು ಯೋಚಿಸುವಷ್ಟರಲ್ಲಿ ದೇವಾಧಿದೇವ ಪ್ರವಚನ ಆರಂಭಿಸಿದ. ಅದ್ಭುತವಾಣಿ, ಮುಖದಿಂದ ಹೊರಹೊಮ್ಮುತ್ತಿರುವ ವೇದಗಳನ್ನು ಕೇಳಿ ಜನ ಮಂತ್ರಮುಗ್ಧರಾಗಿಬಿಟ್ಟರು. ಹೀಗೆಯೇ ದಿನವೂ ಸಂಜೆ ಪ್ರವಚನ ಕಾರ್ಯಕ್ರಮ ಮುಂದುವರೆಯಿತು. ಜನ ಹೆಂಗಸು ಮಕ್ಕಳಾದಿಯಾಗಿ ಕಿಕ್ಕಿರಿದು ತುಂಬುತ್ತಿದ್ದರು. ಪ್ರವಚನವನ್ನು ಕೇಳುತ್ತಿದ್ದರೆ ಯಾವುದೋ ಲೋಕದಲ್ಲಿನ ಅನುಭವ.

ಹೀಗೆಯೇ ಸುಮಾರು ಏಳು ದಿನಗಳು ಕಳೆದವು. ಎಂಟನೆಯ ದಿನ ಲಕ್ಷ್ಮೀದೇವಿ ಧರೆಗಿಳಿದಳು. ಎಂದಿನಂತೆ ಅಂದೂ ಸಂಜೆ ಜನರೆಲ್ಲ ವಿಷ್ಣುದೇಗುಲಕ್ಕೆ ಧಾವಿಸಿ ಹೊರಟಿದ್ದರು. ಒಬ್ಬ ಹೆಣ್ಣುಮಗಳಿಗೆ ಮಾತ್ರ ಅಂದು ಸಕಾಲದಲ್ಲಿ ಹೊರಡಲು ಆಗಲಿಲ್ಲ. ಅವಳ ಮಕ್ಕಳು ತುಂಬ ಹಟ ಮಾಡುತ್ತಲಿದ್ದರು. ಅವರನ್ನು ರಮಿಸಿ ಕರೆದುಕೊಂಡು ಹೊರಡುವುದಕ್ಕೆ ತಡವಾಗಿಬಿಟ್ಟಿತ್ತು. ಒಂದನ್ನು ಕಂಕುಳಲ್ಲಿ, ಇನ್ನೊಂದನ್ನು ಕೈಯಲ್ಲಿ ಎಳೆಯುತ್ತ ಲಗುಬಗೆಯಿಂದ ನಡೆಯುತ್ತಿದ್ದಳು. ಲಕ್ಷ್ಮೀದೇವಿ ಅವಳನ್ನು ಅಡ್ಡಗಟ್ಟಿ ಮಾತಿಗೆಳೆದಳು. "ಎಲ್ಲಿಗೆ ಹೊರಟಿರುವೆ? ಅದೇನು ಇಷ್ಟು ಅವಸರ?" ಲಕ್ಷ್ಮೀದೇವಿಯ ಅದ್ಭುತ ರೂಪಕ್ಕೆ ಆ ಹೆಣ್ಣುಮಗಳು ಮೂಕವಿಸ್ಮಿತಳಾಗಿದ್ದಳು. ಅವಳ ಮಾತಿನ ಮೋಡಿಗೆ ಒಳಗಾದ ಆ ಹೆಣ್ಣುಮಗಳು ಲಕ್ಷ್ಮೀದೇವಿಯ ಹಿಂದೆಯೇ ಹೊರಟಳು. ಒಂದಷ್ಟು ದೂರ ಹೋಗುವುದರಲ್ಲಿ ಲಕ್ಷ್ಮೀದೇವಿಯಯ ಕಣ್ಸನ್ನೆಯಿಂದ ಅಲ್ಲೊಂದು ಆಭರಣಗಳ ಅಂಗಡಿ ಎದ್ದುನಿಂತಿತು.

ಲಕ್ಷ್ಮೀದೇವಿ ಮತ್ತೆ ಮಾತಿಗೆ ತೊಡಗಿದಳು. "ಅದೇನು ನಿನ್ನ ಕೊರಳಲ್ಲಿನ ಹಾರ ಅಷ್ಟೊಂದು ಹಳೆಯದಾಗಿದೆ" ಎನ್ನುತ್ತಾ ಒಂದು ಸುಂದರವಾದ ಹಾರವನ್ನು ಅವಳ ಕೈಯಲ್ಲಿತ್ತು, ಹಳೆಯದನ್ನು ಪಡೆದುಕೊಂಡಳು. ಆ ಹೆಣ್ಣುಮಗಳಿಗೆ ನಿಜವೋ ಕನಸೋ ತಿಳಿಯದಾಯಿತು. ಹಾಗೆಯೆ ಹೊಸ ಹಾರವನ್ನು ಧರಿಸಿ, ನಡೆದುಕೊಂಡು ದೇವಾಲಯ ತಲುಪಿ ಹೆಂಗಳೆಯರ ಮಧ್ಯದಲ್ಲಿ ಕುಳಿತುಕೊಂಡಳು. ಎಲ್ಲರ ದೃಷ್ಟಿ ಅವಳ ಹೊಳೆಯುವ ಕತ್ತಿನ ಹಾರದ ಕಡೆಗೇ. ಪ್ರವಚನ ಮುಗಿಯುವುದೇ ತಡ, ಎಲ್ಲರೂ ಅವಳನ್ನು ಸುತ್ತುವರಿದು ಎಲ್ಲವನ್ನೂ ಕೇಳಿ ತಿಳಿದುಕೊಂಡರು.

ಮರುದಿನ ತಮ್ಮ ಮನೆಯಲ್ಲಿದ್ದ ಹಳೆಯ ಆಭರಣಗಳನ್ನು ಕೊಟ್ಟು ಹೊಸದನ್ನು ಪಡೆಯುವ ಆತುರದಲ್ಲಿ ಹೆಂಗಳೆಯರೆಲ್ಲ ಲಕ್ಷ್ಮೀದೇವಿಯ ಅಂಗಡಿಯ ಮುಂದೆ ಜಮಾಯಿಸಿಬಿಟ್ಟರು. ಆಯ್ಕೆ ಮಾಡಲು ಸಹಾಯ ಮಾಡುವ ನೆಪದಲ್ಲಿ ಗಂಡಸರೂ ಅಲ್ಲೇ ಸೇರಿಕೊಂಡರು. ನಾರಾಯಣನ ಪ್ರವಚನ ಕೇಳಲು ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬರಂತೆ ಬೆರಳೆಣಿಕೆಯಷ್ಟು ಜನ ಇದ್ದರು. ಲಕ್ಷ್ಮೀದೇವಿಯು ಕುಡಿನೋಟ ಬೀರುತ್ತ ಕೇಳಿದಳು "ದೇವಾ, ಈಗ ಹೇಳು ಯಾರ ಪ್ರಭಾವ ಜಾಸ್ತಿ ಎಂದು." ನಾರಾಯಣ ಸೋಲೊಪ್ಪಿಕೊಂಡ.

ಇದೊಂದು ಕಾಲ್ಪನಿಕ ಕಥೆ. ಆದರೆ ಲೋಕದಲ್ಲಿ ಲಕ್ಷ್ಮಿಯ ಪ್ರಭಾವವೇ ಹೆಚ್ಚಾಗಿ ತೋರಿಬರುತ್ತದೆ. ರಾಜಕೀಯ, ಕ್ರೀಡೆ, ಎಲ್ಲದರಲ್ಲೂ ಹಣದ ವ್ಯಾಪಾರವೇ ಜಾಸ್ತಿ. ಹಣಗಳಿಸುವುದು, ಸುಖಪಡುವುದು ಮಾತ್ರ ಜೀವನದ ಗುರಿ ಎಂದು ಬಹುತೇಕ ಜನರ ಮನೋಭಾವ. ಆದರೆ ಹಣದಿಂದಾಗಲೀ, ಇತರ ಭೌತಿಕ ವಸ್ತುಗಳಿಂದಾಗಲೀ ನಿಜವಾದ ಸುಖ, ನೆಮ್ಮದಿ ಸಿಗಲು ಸಾಧ್ಯವಿಲ್ಲ. ಎಷ್ಟೇ ಹಣಗಳಿಸಿದರೂ ಇಲ್ಲಿಂದ ಹೋಗುವಾಗ ಅದನ್ನು ಜೊತೆಗೆ ಒಯ್ಯಲು ಸಾಧ್ಯವೇ? ಒಂದು ದೇಶದ ಕರೆನ್ಸಿ ಬೇರೆ ದೇಶದಲ್ಲಿ ಹೇಗೆ ನಡೆಯುವುದಿಲ್ಲವೋ ಹಾಗೆ. ಹಾಗಾದರೆ ನಾವೇನು ಮಾಡಬಹುದು?

ನಾವು ಗಳಿಸಿದ ಹಣದ ಸ್ವಲ್ಪ ಭಾಗವಾದರೂ ತ್ಯಾಗವಾಗಿ ಮಾರ್ಪಾಡಾದರೆ ಆಗ ನಿಜವಾದ ನೆಮ್ಮದಿ, ಸಾರ್ಥಕತೆ ಸಿಗಲು ಸಾಧ್ಯ. ಸರಳವಾಗಿ ಹೇಳುವುದಾದರೆ ನಮ್ಮ ಹಣದ ಸ್ವಲ್ಪ ಭಾಗವಾದರೂ ದಾನ ಧರ್ಮಗಳಿಗೆ ವಿನಿಯೋಗವಾದರೆ - ಅಂದರೆ ವಿದ್ಯಾದಾನ, ಹಸಿದವರಿಗೆ ಅನ್ನದಾನ, ಕಷ್ಟದಲ್ಲಿರುವವರಿಗೆ ಆರ್ಥಿಕ ಸಹಾಯ ಹೀಗೆ ಇನ್ನೂ ಅನೇಕ ರೀತಿಯ ಸಮಾಜಮುಖಿ ಸೇವೆಗಳಲ್ಲಿ, ನಮ್ಮ ಸಂಸ್ಕೃತಿಯನ್ನು ಉಳಿಸುವ ಚಟುವಟಿಕೆಗಳಲ್ಲಿ ತೊಡಗಿಸಿದಾಗ ಮಾತ್ರ ಆ ಹಣ ಸಾರ್ಥಕವಾಗುತ್ತದೆ.

ತಾತ್ಪರ್ಯವಿಷ್ಟೇ - ಎಲ್ಲರಿಗೂ ಲಕ್ಷ್ಮೀದೇವಿಯ ಅನುಗ್ರಹ ಬೇಕೇ ಬೇಕು. ಅದಿಲ್ಲದೆ ಯಾವುದೇ ಕಾರ್ಯಸಾಧನೆಯಾಗಲೀ, ನೆಮ್ಮದಿಯ ಬದುಕಾಗಲೀ ಸಾಧ್ಯವಿಲ್ಲ. ಆದರೆ ಅದೇ ಅನುಗ್ರಹದ ಬಲದಿಂದ ಭಗವಂತನಿಗೂ ಹತ್ತಿರವಾಗುವುದರಲ್ಲಿ ಬದುಕಿನ ಜಾಣತನ ಅಡಗಿದೆ.



# ಡ್ರೋನುಗಳು ಸಾರ್ ಡ್ರೋನುಗಳು

**ಶ್ರೀಲಕ್ಷ್ಮಿ** *ಬೆಂಗಳೂರು*

UAV (Unmanned Aerial Vehicle) ಮಾನವರಹಿತ ವೈಮಾನಿಕ ವಾಹನ ಸಾಮಾನ್ಯವಾಗಿ ಡ್ರೋನ್ ಎಂದು ಕರೆಯಲ್ಪಡುವ ಸಾಧನ. ಡ್ರೋನ್ ಎಂದಾಕ್ಷಣ ನಮ್ಮ ಮನಸ್ಸಿಗೆ ಬರುವುದು ಒಂದು ಪುಟ್ಟ ಹೆಲಿಕಾಪ್ಟರ್ ನಂತೆ ಕಾಣುವ ರೆಕ್ಕೆಗಳುಳ್ಳ ಆಟಿಕೆಯಂತಹ ಒಂದು ವಸ್ತು. ಆದರೀಗ ತಂತ್ರಜ್ಞಾನ ಕ್ಷೇತ್ರದ ಒಂದು ದೊಡ್ಡ ಆವಿಷ್ಕಾರ ಡ್ರೋನ್ಗಳು ಎನ್ನಬಹುದಾಗಿದೆ. ಬೃಹತ್ ಸಭೆಗಳಲ್ಲಿ, ಸಮಾರಂಭಗಳಲ್ಲಿ ದೃಶ್ಯ ಚಿತ್ರೀಕರಿಸಲು ಹಾಗೂ ದೇಶದ ಭದ್ರತಾ ವ್ಯವಸ್ಥೆಯಲ್ಲಿ ಬಳಸುವ ಸಾಧನವಾಗಿದ್ದ ಡ್ರೋನ್, ಈಗ ಇನ್ನು ಹಲವು ರೀತಿಯಲ್ಲಿ ಬಳಕೆಯಾಗುತ್ತಿದೆ.

**ಡ್ರೋನ್ ಮೂಲಕ ಕೊರೋನ ಲಸಿಕೆ ರವಾನೆ :**

ಕೋವಿಡ್ ಲಸಿಕೆ ಪೂರೈಸಲು ಇತ್ತೀಚೆಗೆ ಆನೇಕಲ್ ತಾಲೂಕಿನ ಚಂದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಸುಮಾರು 5.4ಕೆಜಿ ತೂಕದ 50 ವಯಲ್ ಕೋವಿಶೀಲ್ಡ್ ವ್ಯಾಕ್ಸಿನ್ ಅನ್ನು 1.2 ಕಿ. ಮೀ ಎತ್ತರದಲ್ಲಿ ಜಿಗಣಿಯ ಹಾರಗದ್ದೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೇವಲ ಏಳು ನಿಮಿಷಗಳಲ್ಲಿ ಕೊಂಡೊಯ್ಯಲಾಗಿದೆ. NAL (ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರೀಸ್) ಅಭಿವೃದ್ಧಿಪಡಿಸಿದ ಅಕ್ಕಾ ಕಪ್ಟರ್ ಮೂಲಕ ಸಾಗಾಟ ಮಾಡಲಾಗಿತ್ತು. ರಸ್ತೆ ಮಾರ್ಗವಾಗಿ ಹೋಗಿ ತಲುಪಿಸಲು ಸಮಯ ಹೆಚ್ಚಾಗುತ್ತಿತ್ತು. ಡ್ರೋನ್ ಸಹಾಯದಿಂದ ಲಸಿಕೆಯ ಸಾಗಾಟ ಸುಲಭವಾಯಿತು.



**ಡ್ರೋನ್ ಮೂಲಕ ಕ್ರಿಮಿನಾಶಕ ಸಿಂಪಡನೆ :**

ಕೃಷಿ ಕ್ಷೇತ್ರದಲ್ಲಿ ಡ್ರೋನ್ ತಂತ್ರಜ್ಞಾನದ ಬಳಕೆಯಿಂದ ರೈತರಿಗೆ ಅನೇಕ ರೀತಿಯಲ್ಲಿ ಲಾಭವಾಗುತ್ತಿದೆ. ಕೃಷಿ ಚಟುವಟಿಕೆಗಳಲ್ಲಿ ಕೂಲಿ ಕೆಲಸಗಾರರ ಅವಲಂಬನೆ ಕಡಿಮೆ ಮಾಡಲು ಮಾಗಡಿಯ ದೊಡ್ಡಸೋಮನ ಹಳ್ಳಿಯ ರೈತರು ಡ್ರೋನ್ ಬಳಸಿ ರಾಗಿ ಬೆಳೆಗೆ ಕ್ರಿಮಿನಾಶಕ ಸಿಂಪಡಿಸುವುದಕ್ಕಾಗಿ ಬಳಸುತ್ತಿದ್ದಾರೆ. ಇದರಿಂದ ಹಣ ಹಾಗೂ ಸಮಯದ ಉಳಿತಾಯವಾಗುತ್ತಿದೆ ಎಂಬುದು ಕೆಲವು ರೈತರ ಅನಿಸಿಕೆ. ಈ ಡ್ರೋನ್ ಸಾಧನಕ್ಕೆ ಜಿಪಿಎಸ್ ಆಳವಡಿಸಲಾಗಿ, ಹೊಲದ ಬದುವಿನಲ್ಲೇ ಕುಳಿತು ರಿಮೋಟ್ ಕಂಟ್ರೋಲ್ನಿಂದ ಇಡೀ ಹೊಲಕ್ಕೆ ಕ್ರಿಮಿನಾಶಕ ಸಿಂಪಡಿಸಬಹುದಾಗಿದೆ. ಇಸ್ರೇಲ್ ಕೃಷಿಯ ತಂತ್ರವನ್ನು ಮಾಗಡಿ ತಾಲೂಕಿಗೂ ಪರಿಚಯಿಸಿದ್ದು ಕ್ರಯಾಜಿನ್ ಆಗ್ರಿ ಬಯೋಟೆಕ್ ಕಂಪನಿ.

**ಬಂಡೀಪುರದಲ್ಲಿ ಡ್ರೋನ್ ಹದ್ದಿನ ಕಣ್ಣು :**

ಹುಲಿ ಸಂರಕ್ಷಿತ ಅಭಯಾರಣ್ಯದಲ್ಲಿ ವೈಮಾನಿಕ ಕಣ್ಗಾವಲು ವ್ಯವಸ್ಥೆ ಡ್ರೋನ್ ಮೂಲಕ ನಡೆಯುತ್ತಿದೆ. ದೇಶದ ಪ್ರಮುಖ ರಾಷ್ಟ್ರೀಯ ಉದ್ಯಾನವನಗಳು ಸೇರಿದಂತೆ ದಕ್ಷಿಣ ಭಾರತದ ಬಂಡೀಪುರ ಹಾಗೂ ತಮಿಳುನಾಡಿನ ಸತ್ಯಮಂಗಲ ರಾಷ್ಟ್ರೀಯ ಉಧ್ಯಾನವನಗಳಲ್ಲಿ ಈ ವ್ಯವಸ್ಥೆ ಜಾರಿಗೊಳಿಸಲಾಗಿದೆ. ವನ್ಯಜೀವಿ ಹಾಗೂ ಮಾನವ ಸಂಘರ್ಷ ತಡೆ ಹಾಗೂ ವನ್ಯಜೀವಿಗಳ ಚಲನವಲನದ ಬಗ್ಗೆ ಹೆಚ್ಚಿನ ನಿಗಾವಹಿಸಲು ಈ ಡ್ರೋನ್ ಗಳ ಬಳಕೆಯಾಗುತ್ತಿದೆ. ಅರಣ್ಯದಲ್ಲಿ ಸಂಭವಿಸುವ ಕಾಡ್ಗಿಚಿನ ಬಗ್ಗೆ ಮಾಹಿತಿಯು ಸಹ ಇದರಿಂದ ಸಿಗಲಿದೆ. ಅರಣ್ಯ ಪ್ರದೇಶದಲ್ಲಿ ಅಕ್ರಮ ಚಟುವಟಿಕೆ ನಡೆಯದಂತೆ ಕ್ರಮ ಕೈಗೊಳ್ಳಲು ಡ್ರೋನ್ ಸಹಕಾರಿಯಾಗಿದೆ. ಮಾನವ ರಹಿತ ತಾಂತ್ರಿಕ ಕಣ್ಗಾವಲು ವ್ಯವಸ್ಥೆಯ ಈ ಯೋಜನೆಗೆ ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಥರ್ಮಲ್ ಕ್ಯಾಮೆರಾ ಹಾಗು ರೆಡಾರ್ ಡಿಟೆಕ್ಟರ್ ಬಳಕೆ ಮಾಡಲಾಗಿದೆ.

ರಿಮೋಟ್ ಕಂಟ್ರೋಲ್, ಪ್ರೊಪೆಲರ್ ಗಳಿಗೆ(ಫ್ಯಾನ್ ನಂತಹ ರೆಕ್ಕೆಗಳು) ಜೋಡಿಸಲಾದ ಮೋಟರ್ ಗಳ ತಿರುವು ಬಲವನ್ನು ಬಳಸಿಕೊಂಡು ಈ ಡ್ರೋನ್ ಗಳ ತಯಾರಿಕೆಯಿಂದ ಇನ್ನು ಹಲವು ಉಪಯೋಗಗಳನ್ನು ಮುಂದಿನ ದಿನಗಳಲ್ಲಿ ನಾವು ಖಂಡಿತ ನೋಡಬಹುದು.



# ಒಂದು ಸೋರೆಬುಂಡೆಯ ಕಥೆ! - ಬಾಗ ೨

**ಚಂದ್ರ,** ನ್ಯೂ ಜೆರ್ಸಿ

(ಹಿನ್ನೋಟ: ಭಾಗ ೧ ಓದಲು ಇಲ್ಲಿ ಕ್ಲಿಕ್ ಮಾಡಿ)

ಹಳ್ಳಿಯಲ್ಲಿ ದೊಡ್ಡ ನಾಗ, ಚಿಕ್ಕ ನಾಗ, ಸೋಮ, ಶಿವ ಮತ್ತು ನಂಜುಂಡ ಸೇರಿ, ಈ ಬೇಸಿಗೆಯಲ್ಲಿ ದೊಡ್ಡವರ ಸಹಾಯವಿಲ್ಲದೆ ಈಜು ಕಲಿಯುವ ಯೋಜನೆಯಲ್ಲಿ ತೊಡಗಿದ್ದರು. ಈಜು ಕಲಿಯಲು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಗಿ, ದೊಡ್ಡ ನಾಗ ಯಾರಿಂದಲೋ ತಿಳಿದ ಉಪಾಯವನ್ನ ಪ್ರಯೋಗಿಸಿ ಈಜು ಕಲಿಯಲು ಮುಂದಾಗಿ, ಒಂದು ಸೋರೆಬುಂಡೆಯನ್ನ ಹುಡುಕಲಾರಂಬಿಸಿದರು. ಸೋರೆಬುಂಡೆ ಸಿಗವ ಸ್ಥಳ ತಿಳಿದು, ಸುಮಾರು ದೂರವೇ ಇದ್ದ ತೋಟದ ಕಡೆಗೆ ನಡೆದು, ಅಜ್ಜಿ ಮಾರುತ್ತಿದ್ದ ಸೋರೆಬುಂಡೆ ಖರೀದಿಸಿ, ತೋಟದಿಂದ ಹೊರ ನಡೆದು, ತಮ್ಮ ಹಳ್ಳಿಯ ಬಾವಿಯ ಕಡೆಗೆ ಪ್ರಯಾಣ ಬೆಳೆಸಿದರು

ದಾರಿಯುದ್ದಕ್ಕೂ ಸೋರೆಬುಂಡೆ ಒಂದು ಕೈಯಿಂದ ಇನ್ನೊಂದು ಕೈಗೆ ಓಡಾಡುತ್ತಿತ್ತು. ಯಾರು ಮೊದಲು ಸೋರೆಬುಂಡೆಯನ್ನ ಸೊಂಟಕ್ಕೆ ಕಟ್ಟಿ ನೀರಿಗಿಳಿಯಬೇಕು ಅನ್ನುವ ವಿಚಾರದ ಪೈಪೋಟಿಯೊಂದಿಗೆ, ಸರ ಸರ ನಡೆದು, ದಾರಿ ಸವೆದದ್ದು ಅವರಿಗೆ ತಿಳಿಯಲೇ ಇಲ್ಲ. ಅಷ್ಟರಲ್ಲೇ ತಮ್ಮ ಹಳ್ಳಿ ತಲುಪಿಯಾಗಿತ್ತು. ಅಲ್ಲಿಂದ ಕೇವಲ ಇನ್ನು ಹತ್ತು ನಿಮಿಷದ ದಾರಿ ಅಷ್ಟೇ ಬಾವಿ ತಲುಪಲು. ಒಂದಿಬ್ಬರಂತೂ ಅಲ್ಲಿಂದ ಓಡಲು ಶುರು ಮಾಡಿ, "ನಾವೇ ಮೊದಲು ಬಾವಿಯ ಹತ್ತಿರ ತಲುಪುತ್ತೇವೆಂದು ಕಣ್ಮರೆಯಾದರು". ದೊಡ್ಡ ನಾಗ ಕೂಗಿ ಕರೆದು: "ನಿಲ್ರೋ ನನ್ ಕೈಯಲ್ಲಿದೆ ಸೋರೆ ಬುಂಡೆ ನೀವು ಮೊದಲು ಹೋಗಿ ಅಲ್ಲೇನು ಮಾಡ್ತೀರಿ " ಅಂತ ಹೇಳಿದ್ದು ಅವರಿಗೆ ಕೇಳಿಸಲೇ ಇಲ್ಲ.

ಮಿಕ್ಕವರು ತಮ್ಮ ವೇಗದಲ್ಲಿ ತಾವು ನಡೆದು ಬಾವಿಯ ಬಳಿ ತಲುಪಿದರು. ಮುಂದೆ ಓಡಿ ಬಂದವರು ಸೋರೆಬುಂಡೆಯ ಕುತ್ತಿಗೆಗೆ ಕಟ್ಟಲು ಬೇಕಾದ ದಾರವನ್ನ ಕೈಯಲ್ಲಿ ಹಿಡಿದು ದೊಡ್ಡ ನಾಗನತ್ತ ಓಡಿ, " ನೋಡು ನಾವು ಮುಂದೆ ಬಂದು ದಾರವನ್ನ ಹುಡುಕಿದ್ದೇವೆ ಎಂದು ಅವನ ಕೈಗಿತ್ತರು. ಅದರಿಂದ ಖುಷಿಯಾದ ಅವನು "ಬಲೇ ಮಕ್ಕಳ" ಅಂದು, ದಾರವನ್ನ ಕಸಿದು ಸೋರೆ ಬುಂಡೆಯ ಕುತ್ತಿಗೆಗೆ ಕಟ್ಟತೊಡಗಿದ ಬಾವಿಯತ್ತ ನಡೆಯುತ್ತಲೇ. ಅವನು ದಾರ ಕಟ್ಟುವದನ್ನ ಎಲ್ಲರು ಒಂದೇ ಸಮನೆ ನೋಡುತ್ತಾ, ಆಗಾಗ್ಗೆ, ಒಬ್ಬರು ಇನ್ನೊಬ್ಬರ ಮುಖ ನೋಡಿ ಮೌನವಾಗಿ ಏನೂ ಹೇಳುವಂತಿತ್ತು. "ದೊಡ್ಡ ನಾಗ ಯಾರಿಗೆ ಸೋರೆಬುಂಡೆಯ ಜೊತೆ ನೀರಿಗಿಳಿಯಲು ಬಿಡುತ್ತಾನೆ" ಎನ್ನುವುದು ಅವರೆಲ್ಲರ ಪ್ರಶ್ನೆ ಯಾಗಿತ್ತು. ಆದರೆ, ಒಳಗೊಳಗೆ ಒಂದು ಕಡೆ, ಮೊದಲು ನೀರಿಗಿಳಿಯಲು ಭಯವೂ ಇದ್ದರಿಂದ ಯಾರೂ ಮುಂದೆ ಬರಲಿಲ್ಲ.

ದೊಡ್ಡ ನಾಗ ಬಿಗಿಯಾಗಿ ದಾರ ಕಟ್ಟಿ ಖಾತ್ರಿಗೊಳಿಸಿ, ಚಿಕ್ಕ ನಾಗನ ಕಡೆ ಮುಖ ಮಾಡಿ, "ನಿನಗೆ ಮೊದಲೆ ಸ್ವಲ್ಪ ಈಜು ಬರುತ್ತೆ, ನೀನು ಮೊದಲು ನೀರಿಗಿಳಿ, ಸೋರೆಬುಂಡೆ ಕಟ್ಟಿಕೊಂಡು" ಅಂತ ಹೇಳಿ, ನೇರವಾಗಿ ದಾರ ಕಟ್ಟಿದ ಸೋರೆಬುಂಡೆಯನ್ನ ಅವನ ಕೈಗಿತ್ತ. ಅದನ್ನ ಕೇಳಿ ಎಲ್ಲರಿಗು ಆಶ್ಚರ್ಯವಾಯಿತು. ಕಾರಣ, ಅವರೆಲ್ಲರು, ದೊಡ್ಡ ನಾಗನೇ ಮೊದಲು ನೀರಿಗಿಳಿಯುತ್ತಾನೆ ಅಂದು ಕೊಂಡ್ಡಿದ್ದರು, ದಾರಿಯುದ್ದಕ್ಕೂ ಸೋರೆಬುಂಡೆ ಅವನ ಕೈಯಲ್ಲಿದ್ದದ್ದನ್ನು ನೋಡಿ.

ಚಿಕ್ಕ ನಾಗ ಸೋರೆಬುಂಡೆಯನ್ನು ಕೈಯಲ್ಲಿ ಹಿಡಿದು ಬಾವಿಯ ತುದಿಯಲ್ಲಿ ನಿಂತು ಏನನ್ನೋ ಯೋಚಿಸಿ, ಶಿವನನ್ನ ಕರೆದು, ನೀನು ಹೇಗಿದ್ದರು ಬಾವಿಯೊಳಕ್ಕೆ ಇಳಿಯೊಲ್ಲ, ನಾವು ಯಾರು ಸೋರೆಬುಂಡೆ ಹಿಡಿದು ಈ ಕಡಿದಾದ, ಅಂತ್ಯವಿಲ್ಲದ ಬಾವಿಯೊಳಕ್ಕೆ ಇಳಿಯಲು ಆಗೊದಿಲ್ಲ. ನೀನು ಇದನ್ನ ಹಿಡಿದುಕೊ, ನಾನು ಕೆಳಗೆ ಹೋಗಿ ಕೇಳಿದಾಗ ಮೇಲಿಂದ ಹಾಕು ಎಂದು ಅವನ ಕೈಗಿತ್ತು, ಬಾವಿಯೊಳಗೆ ಇಳಿಯತೊಡಗಿದ. ಅವನ ಹಿಂದೆ ಉಳಿದವರೆಲ್ಲ ಇಳಿದರು.

ಬಾವಿಯೊಳಗಿದ್ದವರು ತಮ್ಮ ಅಂಗಿಯನ್ನ ಬಿಚ್ಚಿ, ಹೆಚ್ಚು ಆಳವಿಲ್ಲದ ಕಡೆ ಇಳಿದು ತಮ್ಮ ಸೋರೆಬುಂಡೆಯ ಸರದಿಗೆ ಕಾದು ನಿಂತರು. ಇತ್ತ ಚಿಕ್ಕ ನಾಗ. ತನ್ನ ಎರಡು ಅಂಗೈಯನ್ನ ಬಾಯಿಯ ಮುಂದಿಟ್ಟು ಜೋರಾಗಿ ಶಿವನನ್ನ ಕೂಗಿ ಕರೆದು, "ಸೋರೆಬುಂಡೆ ಕೆಳಗೆ ಹಾಕು" ಅಂದ. ಅದನ್ನು ಕೇಳಿದ ಶಿವ,
"ತಗೊ ಹಿಡಿದುಕೊ" ಎಂದು ರಪ್ಪನೆ ಕೆಳಕ್ಕೆ ಎಸೆದ. ಅದು ನಾಗನ ಕೈತಪ್ಪಿ, ಅಲ್ಲೇ ಹತ್ತಿರವಿದ್ದ ನಂಜುಂಡನ ತಲೆಯ ಮೇಲೆ ತಪ್ಪನೆ ಬಿತ್ತು.
"ಅಯ್ಯೋ" ಎಂದು ನಂಜುಂಡ ಚೀರಿ, ನೀರಿಂದ ಹೊರಕ್ಕೆ ಹಾರಿ, ಅಲ್ಲೇ ಇದ್ದ ಬಂಡೆಯ ಮೇಲೆ ಕೂತ.

ಸೋಮ ಅವನ ಹಿಂದೆಹೋಗಿ, ಅವನ ತಲೆಯನ್ನ ಪರಿಶೀಲನೆ ಮಾಡಿ "ಏನು ಅಗಿಲ್ಲ" ಬಿಡು ಅಂದು, ಅವನ ಪಕ್ಕಾನೇ ಕೂತ.
ಅತ್ತ, ನೀರಿನೊಳಗಿದ್ದ ದೊಡ್ಡ ಹಾಗು ಚಿಕ್ಕ ನಾಗ, ಬೆಪ್ಪುಮೋರೆಯೊಂದಿಗೆ ಒಬ್ಬರ ಮುಖ ಒಬ್ಬರು ನೋಡುತಿದ್ದರು. ಮೊಗದಲಿ ಏನೊ ಬಹುದೊಡ್ಡ ನಿರಾಶೆ ತುಂಬಿತು. ಅದನ್ನ ನೋಡಿದ ಸೋಮ "ಏನ್ರೋ ಆಯಿತು?" ಅಂತ ಕೇಳಿದ.
"ಲೊ, ಸೋರೆಬುಂಡೆ ಒಡೆದು ಹೋಯಿತು ಮಗ!" ಅಂದ ಬಲು ನಿರಾಶೆ ದನಿಯಲಿ.

ಇದನ್ನ ಕೇಳಿದ ನಂಜುಂಡ, ಚಂಗನೆ ಜಿಗಿದು ಕುಣಿಯತೊಡಗಿದ...."ನನ್ನ ತಲೆಗೆ ಎಷ್ಟು ನೋವಾಗಿದೆ ಗೊತ್ತಾ!," ಎಂದು ಹೇಳುತ್ತಾ!

ಇದನ್ನೆಲ್ಲಾ ಗಮನಿಸುತ್ತಾ ಮೇಲೆ ನಿಂತಿದ್ದ ಶಿವ, "ಹಲೋ" ಇದರಲ್ಲೀ ನನ್ನದೇನು ತಪ್ಪಿಲ್ಲಾ ಅಪ್ಪಾ! "ನನ್ನ ಅಪ್ಪ ಕಾಯುತ್ತಿರುತ್ತಾರೆ" ಅಂತ ಹೇಳಿ ಹಳ್ಳಿಯ ಕಡೆ ಹೊರಟ, ಈಜು ಕಲಿಯುವುದನ್ನ ಬಿಟ್ಟು.

ಉಳಿದವರು ಮುಂದೇನು ಮಾಡುತ್ತಾರೆ ಈಜು ಕಲಿಯಲು ಅನ್ನುವುದನ್ನ ಮುಂದಿನ ಭಾಗದಲ್ಲಿ ನೋಡೋಣ......



# ಕಲಾಂರೊಂದಿಗೆ ಒಂದು ದಿನ

**ಆರ್. ಶ್ರೀಧರ್**

"ಡಾ. ಅಬ್ದುಲ್ ಕಲಾಂ ರವರ ಹೆಸರು ಕೇಳಿದೊಡನೆ ಎಂತಹ ಭಾರತೀಯನೂ ಹೆಮ್ಮೆ ಪಡುವ ಒಂದು ಹೆಸರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಸಾಧನೆಯ ಮೇರು ಶಿಖರವನ್ನು ಹತ್ತಿ ಪರಿಪೂರ್ಣ ಶ್ರೇಷ್ಟ ವ್ಯಕ್ತಿತ್ವನ್ನು ಹೊಂದಿದ ಅತ್ಯಂತ ಸರಳ ವ್ಯಕ್ತಿ ಎಂದರೆ ತಪ್ಪಾಗುವುದಿಲ್ಲ. ಸರ್ ರವರ ಪೂರ್ಣ ಹೆಸರು "ಆವುಲ್ ಫಕೀರ್ ಜೈನಾಲುಬುದೀನ್ ಅಬ್ದುಲ್ ಕಲಾಂ" ಹುಟ್ಟಿದ್ದು 15ನೆ ಅಕ್ಟೋಬರ್ 1931 ತಮಿಳುನಾಡಿನ ರಾಮೇಶ್ವರದಲ್ಲಿ. ಬಾಲ್ಯದಲ್ಲೆ ವಿಜ್ಞಾನದಲ್ಲಿ ಆಸಕ್ತಿ ಹೊಂದಿದ್ದರಿಂದ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹೆಚ್ಚಿನ ಪರಿಣತಿ ಪಡೆದು ಪ್ರಮುಖವಾಗಿ ಭೌತಶಾಸ್ತ್ರ ಮತ್ತು ವೈಮಾನಿಕ ತಂತ್ರಜ್ಞಾನ ಅಭ್ಯಾಸ ಮಾಡಿ ಮುಂದೆ ನಮ್ಮ ದೇಶದ ಪ್ರಮುಖ ವಿಜ್ಞಾನಿಯಾಗಿ ಹಲವಾರು ಕೊಡುಗೆಗಳನ್ನು ನೀಡಿದರು.

ಭಾರತದ ರಕ್ಷಣಾ ಕ್ಷೇತ್ರವನ್ನು ಉತ್ತುಂಗಕ್ಕೆ ಏರಿಸಿದ ಕೀರ್ತಿ ಇವರದು. ಭಾರತದ ಪ್ರಥಮ ರಾಕೆಟ್ ಉಡಾವಣೆ ಯಿಂದ ಹಿಡಿದು ಈಗಿನ ಅತ್ಯಾಧುನಿಕ ತಂತ್ರಜ್ಞಾನದಲ್ಲಿ ಭಾರತದ ಕೀರ್ತಿ ಪತಾಕೆಯನ್ನು ವಿಶ್ವದ ಮೂಲೆ ಮೂಲೆಗೆ ಹಬ್ಬಿಸಿದ ಕೀರ್ತಿ ಇವರದು. ಅಗ್ನಿ, ಪೃಥ್ವಿ, ಬ್ರಹ್ಮೋಸ್ ಕ್ಷಿಪಣಿಯನ್ನು ಭಾರತಕ್ಕೆ ತಂದು ಕೊಟ್ಟು " ಭಾರತದ ಕ್ಷಿಪಣಿ ಮನುಷ್ಯ" ಎಂಬ ಬಿರುದು ಪಡೆದ ಮಹಾನ್ ಚೇತನ. ಇವರ ಅಪಾರ ಕೊಡುಗೆಗಳಿಗೆ ಸಂದದ್ದು ಹಲವಾರು ಪ್ರಶಸ್ತಿಗಳು, ಬಿರುದುಗಳು, 7 ಡಾಕ್ಟರೇಟ್ಗಳು! 1981ರಲ್ಲಿ ಪದ್ಮಭೂಷಣ, 1990ರಲ್ಲಿ ಪದ್ಮವಿಭೂಷಣ ಮತ್ತು ಭಾರತದ ಅತ್ಯಂತ ಹೆಮ್ಮೆಯ ಭಾರತರತ್ನ 1997ರಲ್ಲಿ ನೀಡಲಾಗಿತ್ತು ಎಂದರೆ ಇವರ ಸಾಧನೆಗೆ ಇವರೇ ಸಾಟಿ.

ಇಷ್ಟೆಲ್ಲ ಅಲ್ಲದೆ ಇವರ ಕೊಡುಗೆ ರಾಜಕೀಯದಲ್ಲೂ ಮುಂದುವರೆದಿದ್ದು ಬಹು ವಿಶೇಷ. 2002 ರಲ್ಲಿ ಸರ್ ರವರನ್ನು ಭಾರತದ ರಾಷ್ಟ್ರಪತಿಯಾಗಿ ಆಯ್ಕೆ ಮಾಡಿಲಾಯಿತು ಅಂದಿನಿಂದ ಸುಮಾರು 5 ವರ್ಷ ಅಂದರೆ 2007ರವರಗೆ ಇವರ ಸೇವೆ ಅವಿಸ್ಮರಣೀಯ. 2012ರಲ್ಲಿ ಔಟ್ ಲುಕ್ ಆಫ್ ಇಂಡಿಯಾ ಮಾಡಿದ ಸರ್ವೆಯಲ್ಲಿ ಅತ್ಯಂತ ಶ್ರೇಷ್ಠ ಭಾರತೀಯರಲ್ಲಿ 2ನೆ ಸ್ಥಾನ ಪಡಿದಿದ್ದು ಇವರ ಕೊಡುಗೆಗೆ ಸಾಕ್ಷಿ.

ಇಷ್ಟೆಲ್ಲಾ ಇದ್ದರೂ ತುಂಬ ಮೃದು ಸ್ವಭಾವವನ್ನು ಹೊಂದಿದ್ದು ಯಾರಿಗೂ ನೋಯಿಸದ ರೀತಿಯಲ್ಲಿ ಮಾತನಾಡುವ ಇವರ ಸ್ವಭಾವ ಎಂತಹವರಿಗೂ ಇಷ್ಟವಾಗುತ್ತದೆ. ಮೂಲತ; ನನಗೆ ಅಷ್ಟಾಗಿ ಸರ್ ರವರ ಸಾಧನೆ ಕುರಿತು ತಿಳಿದಿರಲಿಲ್ಲ. ಒಮ್ಮೆ ಬೆಂಗಳೂರಿನ ಜೈನ್ ಕಾಲೇಜಿನಲ್ಲಿ ಕಲಾಂ ಸರ್ ಬರುತ್ತಾರೆ ಎಂದು ಎಲ್ಲ ಜೈನ್ ಸಮೂಹದ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಆಡಳಿತ ವರ್ಗದವರು, ಆಹ್ವಾನಿತರು ನೆರೆದಿದ್ದೆವು. ಆ ಸಮಯದಲ್ಲಿ ಅವರು ರಾಷ್ಟ್ರಪತಿಯಾಗಿ ಆಯ್ಕೆ ಆಗಿದ್ದರು ಮತ್ತು ಪ್ರಮಾಣವಚನ ಸ್ವೀಕರಿಸುವ ಸಮಯ ಅದಾಗಿತ್ತು. ನಮಗೆಲ್ಲ ಕುತೂಹಲ ಅದರಲ್ಲೂ ನನಗೆ ಅವರನ್ನು ನೋಡುವ ಕುತೂಹಲ ಹೆಚ್ಚಿತು. ಸಣ್ಣ ಮಕ್ಕಳಿಂದ ಹಿಡಿದು ಕಾಲೇಜು ವಿದಾರ್ಥಿಗಳೂ ಇದ್ದದ್ದು ವಿಶೇಷ. ಆಗಲೇ ಕಲಾಂ ಸಾರ್ ರವರ ಕೀರ್ತಿ ತುಂಬಾ ಹೆಚ್ಚಾಗಿತ್ತು ಎಂಬುದರಲ್ಲಿ ಯಾವುದೇ ಸಂಶಯವಿರಲಿಲ್ಲ. ನಮಗೆ ಆಗ ಕಲಾಂ ಸರ್ ಒಬ್ಬ ರಾಷ್ಟ್ರಪತಿಗಿಂತ ಒಬ್ಬ ವಿಜ್ಞಾನಿ ಮತ್ತು ಶಿಕ್ಷಕರು ಎಂಬುದು ಹೆಚ್ಚು ಸಂತೋಷ ತಂದಿತ್ತು.

ಕಲಾಂ ಸಾರ್ ರವರನ್ನು ಫೋಟೋಗಳಲ್ಲಿ ನೋಡಿದ್ದ ನಮಗೆ ಅವರು ಎದುರು ಬಂದು ನಿಂತಾಗ ಆದ ಆನಂದ ಅಷ್ಟಿಷ್ಟಲ್ಲ. ಅದನ್ನು ಬಾಯಿಂದ ವರ್ಣಿಸಲು ಆಗುವುದಿಲ್ಲ. ಅಂದಿನ ಆ ಒಂದು ದಿನ ಇಂದಿಗೂ ನನಗೆ ಅವಿಸ್ಮರಣೀಯ ದಿನವಾಗಿದೆ. ನೋಡಲು ತುಂಬ ಸರಳ, ವಿಭಿನ್ನವಾದ ಕೇಶ ವಿನ್ಯಾಸ, ಆಡಂಬರ ರಹಿತ ವಸ್ತ್ರ ವಿನ್ಯಾಸ ಎಂತಹವರನ್ನೂ ಬೆರಗುಗೊಳಿಸದೆ ಇರಲಿಲ್ಲ.

ಒಂದು ಅಂದಾಜು ಅಂದು ಸುಮಾರು 1500 ರಿಂದ 3000 ಜನರು ಸೇರಿದ್ದರು ಎಂದೆನಿಸುತ್ತದೆ. ಅವರು ಬಂದ ತಕ್ಷಣ ಎಲ್ಲರು ಒಟ್ಟಿಗೆ ಎದ್ದು ನಿಂತು ಅವರಿಗೆ ಗೌರವ ಚಪ್ಪಾಳೆಯನ್ನು ಹೊಡೆದಾಗ ಅದು ಅವರ ಮೇಲಿದ್ದ ಪ್ರೀತಿ, ಗೌರವವನ್ನು ತೋರಿಸಿತು. ಚಪ್ಪಾಳೆ ತಂಬಾ ಹೊತ್ತು ಇದ್ದದ್ದು ವಿಶೇಷ!

ಸರ್ ರವರು ಭಾಷಣ ಮಾಡಲು ಪ್ರಾರಂಭಿಸಿದರು. ಮೊದಲು ಅವರು ಪ್ರತಿಪಾದಿಸಿದ್ದು ಎರಡು ಕ್ಷೇತ್ರಗಳನ್ನು. ಅವುಗಳೆಂದರೆ ಒಂದು ಕೃಷಿ ಇನ್ನೊಂದು ವಿಜ್ಞಾನ ಮತ್ತು ತಂತ್ರಜ್ಞಾನ" ಯಾವುದೇ ದೇಶ ಸುಭೀಕ್ಷವಾಗಿರಬೇಕಾದರೆ ಇವರೆಡು ಕ್ಷೇತ್ರ ತುಂಬಾ ಮುಖ್ಯವಾಗುತ್ತದೆ. ಇದು ಸಾಧ್ಯವಾಗಬೇಕಾದರೆ ನಮ್ಮ ಮಕ್ಕಳು ಹೆಚ್ಚು ಶಿಕ್ಷಿತರಾಗಬೇಕು ಮತ್ತು ಈ ಕೆಲಸನ್ನು ನಮ್ಮ ದೇಶದ ಸುಶಿಕ್ಷಿತ ಶಿಕ್ಷಕರು ಮಾಡಬೇಕು ಎಂದರು. ಇದರಲ್ಲಿ ಶಿಕ್ಷಕರ ಪಾತ್ರ ಎಷ್ಟು ಪ್ರಮುಖ ಎಂಬುದು ತಿಳಿಸಿದರು. ಮುಂದುವರೆಯುತ್ತಾ ಅವರು ಪ್ರತಿಪಾದಿಸಿದ ವಿಷಯ, ದೇಶದ ಅಭಿವೃದ್ಧಿಗಾಗಿ ಮೇಲೆ ಹೇಳಿದಂತೆ 1. ಕೃಷಿ ಮತ್ತು ಆಹಾರ ಸಂಸ್ಕರಣೆ, 2. ಶಿಕ್ಷಣ ಮತ್ತು ಆರೋಗ್ಯ, 3. ಸಂವಹನ ತಂತ್ರಜ್ಞಾನ, 4. ಸಾರಿಗೆ, ವಿದ್ಯುತ್ ಮೂಲಸೌಕರ್ಯ ಅಭಿವೃದ್ಧಿ 5. ಸ್ವಾವಲಂಬಿ ತಂತ್ರಜ್ಞಾನ (ಎಲ್ಲ ಕ್ಷೇತ್ರಗಳಲ್ಲೂ). ಇದು ಅವರ ದೂರದರ್ಶಿತ್ವವನ್ನು ತೋರಿಸುತ್ತದೆ! ಮಾತಿನ ಮಧ್ಯೆ ಅವರು ಹಲವಾರು ಬಾರಿ ಒಂದು ವಿಷಯವನ್ನು ಪ್ರಸ್ತಾಪಿಸುತ್ತಿದ್ದರು. ಅದೇನಂದರೆ ದೇಶಕ್ಕೆ ಉತ್ತಮ ನಾಗರೀಕರಾರು? ಎಂದು ಕೇಳಿದ ಪ್ರಶ್ನೆಗೆ ಅವರು ಕೊಟ್ಟ ಉತ್ತರ, ಯಾರೇ ಆದರೂ ಅವರು "ಉತ್ಪಾದಕ ನಾಗರೀಕರಾದರೆ" ಅವರೇ ಶ್ರೇಷ್ಠ ಪ್ರಜೆ ಎಂದರು. ಅದರ ಅರ್ಥವೇನೆಂದರೆ ಯಾರು ದೇಶದ ಏಳಿಗಾಗಿ ದುಡಿಯುತ್ತಾರೋ ಅವರೆಲ್ಲ "ಉತ್ಪಾದಕ ನಾಗರೀಕರೆ

ಇತ್ತೀಚಿನ ದಿನಗಳಲ್ಲಿ ನಮ್ಮ ಯುವ ಸಮುದಾಯ ವಿದೇಶಿ ಸಂಸ್ಕೃತಿಗೆ ಮಾರುಹೋಗಿ ತಮ್ಮ ಪ್ರತಿಭೆಯನ್ನು, ಸಾಧನೆಯನ್ನು ತಾವು ಹುಟ್ಟಿದ ದೇಶಕ್ಕೆ ನೀಡದೆ ಅನ್ಯ ದೇಶಗಳಿಗೆ ನೀಡುತ್ತಿರುವುದು ವಿಷಾದನೀಯ. ಇನ್ನು ಮುಂದುವರೆಯುತ್ತಾ ಕಲಾಂ ಸರ್ ಶಿಕ್ಷಕರ ಕರ್ತವ್ಯವನ್ನು ಕುರಿತು ಹೇಳತೊಡಗಿದರು. "ಯಾರನ್ನು ಉತ್ತಮ ಶಿಕ್ಷಕರು ಎನ್ನಬಹುದು?" ಎಂಬ ಪ್ರಶ್ನೆಗೆ ಅವರು ಹೇಳಿದ್ದು "ಯಾರು ಮಕ್ಕಳಲ್ಲಿ ಸೃಜನಶೀಲತೆ, ತಾರ್ಕಿಕ ಚಿಂತನೆ ಮತ್ತು ಹೆಚ್ಚು ಪ್ರಶ್ನೆ ಮಾಡುವ ಹಾಗೂ ಎಲ್ಲರಿಗಿಂತ ವಿಭಿನ್ನವಾಗಿ ಯೋಚನೆ ಮಾಡುವ ಶಕ್ತಿಯನ್ನು ಬೆಳೆಸುತ್ತಾರೋ ಅವರು ಉತ್ತಮ ಶಿಕ್ಷಕರು". ಈ ಮೇಲಿನ ಹೇಳಿಕೆಯನ್ನು ಅವರ ಬಾಯಲ್ಲಿ ಕೇಳಿದಾಗ ಮೂಲತಃ ಶಿಕ್ಷಕರಾಗಿದ್ದ ಅವರೇ ಶಿಕ್ಷಕರ ಜವಾಬ್ದಾರಿ ಕುರಿತು ವಿವರಿಸಿದಾಗ ನಮಗೂ ಹಾಗೆ ಮಾಡಬೇಕು ಎಂದೆನಿಸಿದ್ದು ಸುಳ್ಳಲ್ಲ.

ನಂತರ ನಡೆದಿದ್ದು ಪ್ರಶ್ನೋತ್ತರ ಕಾರ್ಯಕ್ರಮ. ಮೊದಲ ಪ್ರಶ್ನೆ ಅವರ ಕೇಶ ವಿನ್ಯಾಸದ ಕುರಿತಾಗಿತ್ತು. ಸರ್ ನಿಮ್ಮ ಕೇಶ ವಿನ್ಯಾಸ ತುಂಬ ವಿಭಿನ್ನವಾಗಿದೆ ಇದಕ್ಕೆ ಕಾರಣವೇನು ಎನ್ನಲು ಅವರು ನಕ್ಕು "ನೋಡಿ ಇದು ನನ್ನ ಕೇಶವಿನ್ಯಾಸಕ ಮಾಡಿದ್ದು. ನಾನು ಹೀಗೇಕೆ ಎಂದು ಕೇಳಿದಾಗ ಅವನು ಸರ್ ಇದು ನಿಮ್ಮ ಮುಖಕ್ಕೆ ತುಂಬಾ ಒಪ್ಪುತ್ತದೆ ಎಂದ. ಅದಕ್ಕೆ ಹೌದಾ ಸರಿ ಇರಲಿ ಬಿಡು ಎಂದೆ. ನಿನ್ನ ಕಣ್ಣಿಗೆ ಅದು ಚೆನ್ನಾಗಿದ್ದರೆ ಬೇರೆಯವರಿಗೂ ಚೆನ್ನಾಗಿಯೇ ಇರುತ್ತದೆ ಎಂದೆ". ಆಗ ನಮಗೆಲ್ಲ ಅಬ್ಬ ಎಂಥ ಸರಳ ವ್ಯಕ್ತಿತ್ವ ಇವರದು ಎಂದೆನಿಸಿತು. ಮತ್ತೊಂದು ಪ್ರಶ್ನೆ ಒಬ್ಬ ಚಿಕ್ಕ ಹುಡುಗ ಕೇಳಿದ "ಸರ್ ಪರಮಾಣು ರಚನೆ ಹೀಗೇಕೆ ಇದೆ" ಎಂದ. ಅದಕ್ಕೆ ಅವರು ತಕ್ಷಣ "ನೀನು ಏಕೆ ಹೀಗಿರುವೆ?" ಎಂದು ಪ್ರತಿ ಪ್ರಶ್ನೆ ಕೇಳಿದರು. ಆ ಹುಡುಗ ಸ್ವಲ್ಪ ತಬ್ಬಿಬ್ಬಾದ! ತಕ್ಷಣ ಅವರು ನಕ್ಕು "ನೋಡಿ ವಿಜ್ಞಾನದಲ್ಲಿ ಪ್ರಶ್ನೆ ಕೇಳಬೇಕು ನಿಜ ಆದರೆ ಕೆಲವು facts ಗಳನ್ನು ಹೇಗಿವೆಯೋ ಹಾಗೆಯೇ ಒಪ್ಪಿಕೊಳ್ಳಬೇಕು. ಪರಮಾಣುವಿನ ರಚನೆ ಹೇಗಿರಬೇಕೋ ಹಾಗಿದೆ ಅದನ್ನು ನಾವು ಒಪ್ಪಿಕೊಳ್ಳಬೇಕು. ಎಂದರೆ ಹೇಗೆ ನಾವು ನಮ್ಮನ್ನು ಒಪ್ಪಿಕೊಳ್ಳಬೇಕೋ ಹಾಗೆ" ಎಂದಾಗ ಮತ್ತೊಮ್ಮೆ ಜೋರಾದ ಚಪ್ಪಾಳೆ.

ಮತ್ತೊಬ್ಬರು "ಸರ್ ನೀವು ಏಕೆ ಮದುವೆಯಾಗಲಿಲ್ಲ?" ಎಂದರು. ಅದಕ್ಕೆ "ಯಾರು ಹೇಳಿದ್ದು ನನಗೆ ಮದುವೆಯಾಗಿಲ್ಲ?" ಎಂದರು. ಮತ್ತೊಮ್ಮೆ ನಮಗೆಲ್ಲ ಕಾತುರ ಹೆಚ್ಚಾಯಿತು. ಅದಕ್ಕೆ ಅವರು ನಕ್ಕು "ನನಗೆ ವಿಜ್ಞಾನ ಮತ್ತು ತಂತ್ರಜ್ಞಾನದೊಂದಿಗೆ ಎಂದೋ ಮದುವೆಯಾಗಿದೆ. ಅಂದರೆ ನನಗೆ ನನ್ನ ಕೆಲಸವೇ ಸಂಗಾತಿ" ಎಂದಾಗ ಜೋರಾಗಿ ಚಪ್ಪಾಳೆ, ನಗು. ಅವರ ಮೇಲಿನ ಗೌರವ ಇಮ್ಮಡಿಯಾಯಿತು. ಮತ್ತೊಬ್ಬರು "ಸರ್ ಇಷ್ಟು ದಿನ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದೀರಿ ಈಗ ದೇಶದ ರಾಷ್ಟ್ರಪತಿಯಾಗಿ ಆಯ್ಕೆಯಾಗಿದ್ದೀರಿ ನಿಮಗೆ ಹೇಗೆ ಅನ್ನಿಸುತ್ತದೆ" ಎಂದರು, ಅದಕ್ಕೆ ಅವರು ಮತ್ತೊಮ್ಮ ನಕ್ಕು "ನೋಡಿ ನನಗೆ ನನ್ನ ಕೆಲಸ ತಂಬಾ ಸುಲಭ ಆದರೆ ರಾಷ್ಟ್ರಪತಿಯ ಕೆಲಸ ಸ್ವಲ್ಪ ಭಯವಾಗುತ್ತ ಇದೆ, ಹೇಗೆ ನಿಭಾಯಿಸುತ್ತೇನೋ ತಿಳಿಯದು" ಎಂದರು. ಹೀಗೆ ಹಲವಾರು ಪ್ರಶ್ನೆಗಳಿಗೆ ಅವರು ನಗುತ್ತ ಉತ್ತರ ಕೊಟ್ಟದ್ದನ್ನು ನೋಡಿದರೆ ಅಬ್ಬ ಎಂಥ ಪಾಂಡಿತ್ಯ ಇವರದು ಎನಿಸುತ್ತದೆ.

ಅಂದು ಕಲಾಂ ಸಾರ್ ರವರು ನೀಡಿದ ಹಲವಾರು ಉತ್ತರಗಳು ಇಂದಿಗೂ ಹಲವಾರು ಜನರ ಜೀವನದ ಪಾಠವಾಗಿದೆ ಎಂಥ ಸರಳ ವ್ಯಕ್ತಿತ್ವ "ಸರಳ ಜೀವನ ಉನ್ನತ ಚಿಂತನ" ಎಂಬುದು ಕಲಾಂ ಸರ್ ರವರನ್ನು ನೋಡಿ ಕಲಿಯಬೇಕು. ಅವರ ಜೀವನ ಚರಿತ್ರೆಯೆ ಒಂದು ಪಾಠ. ಜೀವನದುದ್ದಕ್ಕು ಅವರು ಯಾವುದೆ ಸ್ವಾರ್ಥ ಚಿಂತನೆ ಇಲ್ಲದ, ನಿಷ್ಕಲ್ಮಶ, ನಿರ್ಮಲ ಮನಸ್ಸಿನ ನಿಜವಾದ ಭಾರತೀಯ ಎಂದರೆ ಅದು ತಪ್ಪಾಗಲಾರದು. ಸರ್ ರವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ ಅವುಗಳಲ್ಲಿ "ವಿಂಗ್ಸ ಆಫ್ ಫಯರ್," "ಇಗ್ನೈಟೆಡ್ ಮೈಂಡ್ಸ್", "ಇನ್ ಡಾಮಿಟೆಬಲ್ ಸ್ಪಿರಿಟ್ಸ್" ಮುಂತಾದುವುಗಳು ನಿಜವಾದ ಮಾಸ್ಟರ್‌ಪೀಸ್ ಕೃತಿಗಳಾಗಿವೆ.

ಬರೀ ಸ್ವಾರ್ಥ, ಮೋಸ, ಕಪಟ, ಅನ್ಯಾಯ, ದುರಾಸೆ, ದುರಭಿಮಾನಗಳೇ ತುಂಬಿರುವ ಇಂದಿನ ನಮ್ಮ ಸಮಾಜದಲ್ಲಿ ಇಂಥಹ ವ್ಯಕ್ತಿಗಳು ಬಲು ಅಪರೂಪ. ಅವರು ಸಂಪಾದನೆ ಮಾಡಿದ ಹಣವನ್ನು ಪರೋಪಕಾರಕ್ಕೆ ಬಳಸಿದ್ದು, ಸ್ವಂತ ಮನೆ, ಕಾರು ಬಂಗಲೆ ಗಳಿಲ್ಲದ ನಿಸ್ವಾರ್ಥ ಜೀವನ ಅವರದ್ದು. ಇಂತಹ ಅಮೋಘ ಪ್ರತಿಭೆ, ಮಹಾನ್ ಚೇತನ ಜುಲೈ 27, 2015ರಂದು ಶಿಲ್ಲಾಂಗ್‌ನಲ್ಲಿ ಉಪನ್ಯಾಸ ಮಾಡುತ್ತಿದ್ದ ಸಂಧರ್ಭದಲ್ಲಿ ಹೃದಯಾಘಾತಕ್ಕೆ ಒಳಗಾಗಿ ಕುಸಿದು ಬಿದ್ದರು. ನಂತರ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತಾದರೂ ಅವರು ಚಿಕಿತ್ಸೆ ಫಲಕಾರಿಯಾಗದೆ ನಮ್ಮನ್ನು ಈ ಲೋಕವನ್ನು ಬಿಟ್ಟು ಸ್ವರ್ಗವಾಸಿಗಳಾದರು. ಅವರು ಹುಟ್ಟಿ ಬೆಳೆದ ರಾಮೇಶ್ವರಂ ನಲ್ಲೆ ಅವರ ಅಂತ್ಯಕ್ರಿಯೆ ನಡೆಯಿತು. ಅವರು ನಿಧನರಾದ ದಿನ ಸರ್ಕಾರಿ ರಜೆ ನೀಡಬಹುದಾಗಿತ್ತಾದರೂ ಅವರು ಮುಂಚೆಯೇ ಹೇಳಿದ್ದರಂತೆ. "ನಾನು ಸತ್ತ ದಿನದಂದು ಸರ್ಕಾರಿ ರಜೆ ನೀಡಬಾರದು" ಅಂದು ಎಲ್ಲರು ಸ್ವಪ್ರೇರಿತರಾಗಿ ಹೆಚ್ಚು ಕೆಲಸ ಮಾಡಬೇಕು ಎಂದು". ಇದನ್ನೆಲ್ಲ ನೋಡಿದರೆ ಎಂಥವರಿಗೂ ಅವರ ಬಗ್ಗೆ ಗೌರವ ಬರದೆ ಇರುವುದಿಲ್ಲ. ಅವರು ಬಿಟ್ಟು ಹೋದ ಆಸ್ತಿಯಂದರೆ ಅಸಂಖ್ಯಾತ ಪುಸ್ತಕಗಳು, ವೀಣೆ, ಬಟ್ಟೆಬರೆ,1 ಸಿಡಿ ಪ್ಲೇಯರ್, ಒಂದು ಲ್ಯಾಪ್ ಟಾಪ್ ಮಾತ್ರ. ಜೀವನದುದ್ದಕ್ಕು ಅವರ ನಿಜವಾದ ದೇಶಸೇವೆ, ಸಮಾಜ ಸೇವೆ ಗಳನ್ನು ಎಷ್ಟು ಹೊಗಳಿದರೂ ಸಾಲದು. ಇಂತಹ ವ್ಯಕ್ತಿಯನ್ನು ಎಂದಿಗೂ ಮತ್ತೊಮ್ಮೆ ಕಾಣಲಾರೆವು. ನಿಮ್ಮನ್ನು ಪಡೆದ ಭರತ ಮಾತೆ ನಿಜವಾಗಲೂ ಧನ್ಯ. ನೀವು ಎಂದಿಗೂ ನಮ್ಮ ದೇಶದ ಎಲ್ಲರಿಗೂ ಆದರ್ಶ ಪ್ರಾಯ. ನಿಮ್ಮನ್ನು ನೋಡಿ ಕಲಿತಿರುವ, ಕಲಿಯುತ್ತಿರುವ ಮತ್ತು ಮುಂದೆ ಕಲಿಯಲು ಬರುವ ಎಲ್ಲರಿಗೂ ನೀವೇ ಸ್ಫೂರ್ತಿ! ಮತ್ತೊಮ್ಮೆ ಹುಟ್ಟಿ ಬನ್ನಿ ಸರ್. "ಜೈ ಹಿಂದ್".

# ಕನ್ನಡ ರಾಜ್ಯೋತ್ಸವ

## ವಿಶೇಷಾಂಕ





# ಹೊರನಾಡಿನಲ್ಲಿ ಕರುನಾಡ ಹಬ್ಬ

**ರೋಹಿಣಿ ಮಹೇಶ್,** *ನ್ಯೂ ಜರ್ಸಿ*

"ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು! ಕನ್ನಡ ಗೋವಿನ ಓ ಮುದ್ದಿನ ಕರು ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು.. " ಕುವೆಂಪುರವರ ಈ ಹಾಡಿನ ಸಾಲುಗಳು ಕನ್ನಡಿಗರಲ್ಲಿ ಯಾವಾಗಲು ಹಚ್ಚಹಸಿರಾಗಿರುತ್ತದೆ. ಮಾತೃಭಾಷೆಯನ್ನು ಸದಾಕಾಲ ಪ್ರೀತಿಸಿ ಉಳಿಸಿ, ಬಳಸಿ ಬೆಳೆಸಿದರೂ, ರಾಜ್ಯೋತ್ಸವನ್ನು ಆಚರಿಸಲು ನವೆಂಬರ್ ತಿಂಗಳ ಎದುರು ನೋಡುತ್ತಿರುತ್ತೇವೆ. ಆದರೆ ಈ ಸಲ ನವೆಂಬರ್ ೧ ರಂದು ಕರುನಾಡಿನಲ್ಲೆಲ್ಲಾ ಸೂತಕದ ಛಾಯೆ ಆವರಿಸಿತ್ತು.  ಮೂರು ದಿನಗಳ ಹಿಂದೆಯಷ್ಟೇ ಕರುನಾಡು ತನ್ನ ಅಮೂಲ್ಯವಾದ ರಾಜರತ್ನವನ್ನು ಕಳೆದುಕೊಂಡಿತ್ತು. ಕರ್ನಾಟಕದಲ್ಲಿ ಮಾತ್ರವಲ್ಲದೆ ವಿಶ್ವದ ಎಲ್ಲೆಡೆ ಇದ್ದ ಕನ್ನಡಿಗರೂ, ಅಭಿಮಾನಿಗಳೂ ಆ ದುರಂತದ ಸುದ್ದಿ ಕೇಳಿ ಮೂಕಸ್ಥಬ್ಧರಾಗಿದ್ದರು. ಅಮೇರಿಕಾದ ನ್ಯೂ ಜೆರ್ಸಿಯಲ್ಲಿರುವ ನಾವೂ ಸಹ ಇದರಿಂದ ಹೊರತಾಗಿರಲಿಲ್ಲ. ಬೃಂದಾವನಕ್ಕೂ, ಅಂಜನೀಪುತ್ರನಿಗೂ ಬಹಳ ಹತ್ತಿರದ ಬಾಂಧವ್ಯ.

೨೦೧೦ ರಲ್ಲಿ ನ್ಯೂ ಜೆರ್ಸಿಯಲ್ಲಿ ನಡೆದ ಅಕ್ಕ ಸಮ್ಮೇಳನದ ರಾಯಭಾರಿಯಾಗಿ ಭಾಗವಹಿಸಿದ ಅಪ್ಪು, ನಮ್ಮೆಲ್ಲರನ್ನೂ ತಮ್ಮ ನೃತ್ಯ, ಗಾಯನದಿಂದ ರಂಜಿಸಿ, ತಮ್ಮ ಸರಳತೆಯಿಂದ ಸಜ್ಜನಿಕೆಯಿಂದ ನಮ್ಮೆಲ್ಲರಿಗೆ ಇನ್ನೂ ಹತ್ತಿರವಾಗಿ  ಮನೆಯವರಂತಾಗಿದ್ದರು. ಇಂತಹ ದೊಡ್ಮನೆ ಹುಡುಗ ಇನ್ನಿಲ್ಲವೆಂದರೆ ನಂಬಲಸಾಧ್ಯವಾಗಿತ್ತು. ಇದರಿಂದ ಚೇತರಿಸಿಕೊಳ್ಳುವ ಸಮಯದಲ್ಲೇ ಕನ್ನಡರಾಜ್ಯೋತ್ಸವ ಬಂದಿತು. ನಮ್ಮಲ್ಲಿ ಉತ್ಸವ ಮಾಡುವ ಮನಸ್ಸು ಯಾರಿಗೂ ಇಲ್ಲದಿದ್ದರೂ, ಕನ್ನಡಾಂಬೆಯ ಮಡಿಲು ಸೇರಿದ ಯುವರತ್ನನಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿ, ಅವರು ನಮ್ಮೊಂದಿಗೆ ಕಳೆದ ಮಧುರ ಕ್ಷಣಗಳನ್ನು ವಿಡಿಯೋಗಳ ಮೂಲಕ ಮೆಲುಕು ಹಾಕುತ್ತಾ ರಾಜಕುಮಾರನಿಲ್ಲದ ರಾಜ್ಯೋತ್ಸವವನ್ನು ಆಚರಿಸಲು ಮುಂದಾದೆವು. ಪ್ರಗತಿ ತಂಡದ ಅಧ್ಯಕ್ಷೆ ಶ್ರೀಮತಿ. ಪದ್ಮಿನಿ ಹೇಮಂತ್ ಅವರ ನೇತೃತ್ವದಲ್ಲಿ ೨೦೨೧ ರ ಕನ್ನಡ ರಾಜ್ಯೋತ್ಸವವನ್ನು ವರ್ಚುಯಲ್ ಆಗಿ ಆಚರಿಸಿದೆವು. ಶ್ರೀಮತಿ. ಪೂರ್ಣಿಮಾ ಭಟ್ ಅವರು ಬಹಳ ಸುಂದರವಾಗಿ ನಿರೂಪಣೆ ಮಾಡಿಕೊಟ್ಟರು. ಅವರ ಭಾಷಾ ಪ್ರೇಮ, ಕನ್ನಡದ ಮೇಲಿನ ಅವರ ಹಿಡಿತ ಹಾಗೂ ನಿರೂಪಣೆ ಮಾಡುವ ಶೈಲಿ ಬಹಳ ಶ್ಲಾಘನೀಯವಾಗಿತ್ತು.



ರಾಜ್ಯೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಕ್ಟೋಬರ್ ೨೧ ರಂದು ಆಯೋಜಿಸಿದ  "ಮಾತಾಡ್ ಮಾತಾಡ್ ಕನ್ನಡ" ಲಕ್ಷ ಕಂಠ ಗಾಯನ ಅಭಿಯಾನದಲ್ಲಿ ಬೃಂದಾವನ ಕನ್ನಡ ಕೂಟದ ಸದಸ್ಯರು ಭಾಗವಹಿಸುವ ಸುವರ್ಣಾವಕಾಶ ದೊರಕಿತು. "ಬಾರಿಸು ಕನ್ನಡ ಡಿಂಡಿಮವ" ಗೀತೆಯೊಂದಿಗೆ ಕರ್ನಾಟಕದ ಧ್ವಜವನ್ನು  ಹಾರಿಸುತ್ತಾ, ಕನ್ನಡದ ಜಯಭೇರಿ ಭಾರಿಸಿದರು ನಮ್ಮ ನೆಚ್ಚಿನ ಬೃಂದಾವನದ ಗಾಯಕರು.

ರಾಜ್ಯೋತ್ಸವ ಕಾರ್ಯಕ್ರಮ ಮುಂದುವರಿದ ಭಾಗದಲ್ಲಿ ಶ್ರೀಮತಿ. ವೀಣಾ ಮೋಹನ್ ಅವರಿಂದ ಹರಿಕಥೆ ಇತ್ತು. ಹರಿಕಥೆ ಎಂದಾಗ ನಮ್ಮೆಲ್ಲರ ಮನಸ್ಸಿನಲ್ಲಿ ಬರುವ ಕಲ್ಪನೆ ಎಂದರೆ , ಪುರಾಣ ಪುಣ್ಯಕಥೆಗಳು, ಹರಿಹರರ ಕಥೆಗಳು. ಆದರೆ, ನಮ್ಮ ಅಖಂಡಭಾರತದ ಇತಿಹಾಸದಲ್ಲಿ ಬರುವ ಮಹಾನ್ ಚೇತನಗಳ ಕಥೆಗಳನ್ನು ಹರಿಕಥೆಯ ರೂಪದಲ್ಲಿ ಹೇಳಿದರೆ..? ಅಂತಹ ಒಂದು ಪ್ರಯತ್ನವೇ "ವೀರ ರಾಣಿ ಕಿತ್ತೂರು ಚೆನ್ನಮ್ಮ". ವಾಕ್-ಶ್ರವಣ ತಜ್ಞೆಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ. ವೀಣಾ ಮೋಹನ್  ಕಲಾಸರಸ್ವತಿಯ ಆರಾಧಕರಾಗಿದ್ದಾರೆ. ಅವರು ಬಹುಮುಖ ಪ್ರತಿಭೆ. ಶಾಸ್ತ್ರೀಯ ಸಂಗೀತ , ಸುಗಮ ಸಂಗೀತ, ನೃತ್ಯ, ನಾಟಕ, ಏಕಪಾತ್ರಾಭಿನಯ, ನಿರೂಪಣೆ, ಹರಿಕಥೆ ಅವರಿಗೆ ಲೀಲಾಜಾಲವಾಗಿ ಕರಗತವಾಗಿದೆ. ಇತ್ತೀಚೆಗಷ್ಟೇ ವಿದೇಶದಲ್ಲಿ ನೆಲೆಸಿರುವ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಪರಿಚಯ ಹಾಗೂ ಆಸೆ, ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ ಬೃಂದಾವನದ ಕನ್ನಡ ಶಾಲಾ ಮಕ್ಕಳಿಗೋಸ್ಕರ ಹರಿಕಥಾ ಕಾರ್ಯಾಗಾರವನ್ನು ನಡೆಸಿದ್ದರು. ಇದರ ಮುಂದಿನ ಭಾಗವೇ ಇಂದಿನ  "ವೀರ ರಾಣಿ ಕಿತ್ತೂರು ಚೆನ್ನಮ್ಮ" ಎಂಬ ವಿಶಿಷ್ಟವಾದ ಹರಿಕಥೆ.

ರಾಣಿ ಚೆನ್ನಮ್ಮಳ ಕಥೆ ನಮ್ಮೆಲ್ಲರಿಗೆ ತಿಳಿದಿದ್ದರೂ, ಶ್ರೀಮತಿ ವೀಣಾ ಅವರು ಹರಿಕಥೆ ಶೈಲಿಯಲ್ಲಿ ಹೇಳುತ್ತಿರುವಾಗ, ಮಕ್ಕಳು ದೊಡ್ಡವರು ಎಲ್ಲರೂ ತದೇಕ ಚಿತ್ತದಿಂದ ಕೇಳಿದೆವು. ಅವರು ಚೆನ್ನಮ್ಮಳ ಕಥೆ ಹೇಳುತ್ತಾ ಹೋದಂತೆ ನಮ್ಮ ಮನಃಪಟಲದಲ್ಲಿ ದೃಶ್ಯಗಳು ಒಂದೊಂದಾಗಿ ಮೂಡಿಬರತೊಡಗಿದವು. ಆಗಿನ ಕಾಲದ ಕರುನಾಡಿನ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿ, ಬ್ರಿಟಿಷರ ದಬ್ಬಾಳಿಕೆಯ ವಿವರಣೆ ಕಣ್ಣಿಗೆ ಕಟ್ಟುವಂತಿತ್ತು. ಹರಿಕಥೆ ಮುಂದುವರಿದಂತೆ, ಕಾಲಚಕ್ರದಲ್ಲಿ ನಾವೆಲ್ಲರೂ  ಸುಮಾರು ೩೦೦ ವರ್ಷಗಳ ಹಿಂದೆ ಹೋಗಿದ್ದೆವು. ಒಳಜಗಳಗಳಿಂದಾಗಿ ರಾಜ ಮಲ್ಲಸರ್ಜ ದೇಸಾಯಿಯವರನ್ನು ಮೋಸದಿಂದ

ಕಾರಾಗಾರದಲ್ಲಿ ಬಂಧಿಯಾಗಿ ಅನಂತರ, ಅನಾರೋಗ್ಯದಿಂದ ಬಳಲಿ ಅಸುನೀಗಿದಾಗ ಆತಂಕಗೊಂಡೆವು. ಬ್ರಿಟಿಷರು ಅನ್ಯಾಯದ "ಡಾಕ್ಟ್ರಿನ್ ಆಫ್ ಲ್ಯಾಪ್ಸ್" ಎಂಬ ನಿಯಮವನ್ನು ಹೊರಡಿಸಿ ಕಿತ್ತೂರನ್ನು ಕಬಳಿಸಲು ನೋಡುತ್ತಿದ್ದಾರೆ ಎಂದಾಗ ಎಲ್ಲಿಲ್ಲದ ಕೋಪ ನಮ್ಮನ್ನು ಆವರಿಸಿತ್ತು. ಕಪ್ಪ ಕೊಡಬೇಕೆಂದು ಚೆನ್ನಮ್ಮಳನ್ನು ಬಲವಂತ ಮಾಡಿ, ಅವಳ ದತ್ತು ಪುತ್ರನನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದಾಗ ಸಂಕಟವಾಯಿತು. ಬ್ರಿಟಿಷರು ಕಿತ್ತೂರಿನ ಮೇಲೆ ಯುದ್ಧಕ್ಕೆ ಬಂದಾಗ ಚೆನ್ನಮ್ಮ,  ಮಹಿಳಾ, ಪುರುಷರಾದಿಯಾಗಿ ಎಲ್ಲರನ್ನೂ ಉತ್ತೇಜಿಸುವ ಸನ್ನಿವೇಶ ಬಂದಾಗ ನಮ್ಮಲ್ಲಿಯೂ ದೇಶಪ್ರೇಮ ಪುಟಿದೆದ್ದಿತು. ರಾಣಿ ಶಕ್ತಿ ಮೀರಿ ಯುದ್ಧ ಮಾಡುತ್ತಿರುವಾಗ ನಮ್ಮವರೇ, ಸ್ವಾರ್ಥದಿಂದ ತಮ್ಮನ್ನು ತಾವೇ ಮಾರಿಕೊಂಡು ಕನ್ನಡಾಂಬೆಯ ಕೈ ಕಟ್ಟಲು ಮುಂದಾದಾಗ ಮನಸ್ಸು ಮರುಗಿತು. ಯುದ್ಧದ ದೃಶ್ಯದಲ್ಲಿ ನಾವೇ ರಣರಂಗದಲ್ಲಿದ್ದಂತೆ ಭಾಸವಾಯಿತು.




ಸುಮಾರು ಒಂದು ಗಂಟೆಗಳ ಕಾಲ ನಾವೆಲ್ಲರೂ ಈ ರೀತಿಯ ಭಾವನೆಗಳ ಏರಿಳಿತಕ್ಕೆ ಒಳಗಾಗಿದ್ದು, ಪ್ರತ್ಯಕ್ಷವಾಗಿ ಕಂಡಂತೆ ಅನುಭವವಾಗಿದ್ದು ಕೇವಲ ಶ್ರೀಮತಿ ವೀಣಾ ಅವರ ಹರಿಕಥೆಯ ಶೈಲಿಯಿಂದ. ಸನ್ನಿವೇಶಕ್ಕೆ ತಕ್ಕಂತೆ ಅವರ ದನಿಯಲ್ಲಿನ ಏರಿಳಿತ, ಮುಖಭಾವ, ಪಾತ್ರಕ್ಕೆ ತಕ್ಕ ಸಂಭಾಷಣಾ ಶೈಲಿ, ಕಥೆಯಲ್ಲಿನ ತಲ್ಲೀನತೆ, ವಿಷಯದ ಮೇಲಿರುವ ಅವರ ಜ್ಞಾನ, ಭಾಷೆಯ ಹಿಡಿತ ನಮ್ಮನ್ನು ಮಂತ್ರಮುಗ್ಧರನ್ನಾಗಿಸಿತ್ತು. ಕೆಲವು ಪಾತ್ರಗಳು ಉತ್ತರ ಕರ್ನಾಟಕ ಶೈಲಿಯಲ್ಲಿ ಸಂಭಾಷಣೆ ಮಾಡಿದ್ದು, ಬ್ರಿಟಿಷರು ಕನ್ನಡ ಮಾತನಾಡಿದ್ದಿರಬಹುದಾದ ಶೈಲಿ ಬಹಳ ಮನೋರಂಜನಾತ್ಮಕವಾಗಿತ್ತು. ಹರಿಕಥೆ ಕೇಳಿದ, 7 ವರ್ಷದ ಪುಟ್ಟ ವಿದಿಶಾಳ ಸಂತೋಷ ಹೇಳತೀರದು, ಬಾಯಲ್ಲಿ ಮಾಡಿದ ಕುದುರೆಯ ಗೊರಸಿನ ಶಬ್ದ, ಕೀಬೋರ್ಡ್ನಲ್ಲಿ ಮಾಡಿದ ಕಹಳೆಯ ಶಬ್ದ ಹರ್ಷವೆನಿಸಿದರೆ, 13 ವರ್ಷದ ರಚನಳಿಗೆ ಶ್ರೀಮತಿ ವೀಣಾ ಅವರು, ಬ್ರಿಟಿಷರು ಕನ್ನಡ ಮಾತನಾಡಿದ ಶೈಲಿ ಕುತೂಹಲವೆನಿಸಿತು.

ಈ ಹರಿಕಥೆಗೆ  ಶ್ರೀಮತಿ ವಾಣಿಶ್ರೀ ದೀಪಕ್ ಅವರ ಸಂಗೀತವಿದ್ದು ಅವರ ಸುಮಧುರ ದನಿಯ ಹಾಡುಗಳು,  ಹರಿಕಥೆಯ  ಸೊಬಗನ್ನು ಇನ್ನೂ ಹೆಚ್ಚಿಸಿತ್ತು.  ಕಣ್ಣನ್ ರಾಘವನ್ ಅವರ ತಬಲಾ,  ಜೀವನ್ ಕುಲ್ಕರ್ಣಿ ಅವರ ಹಾರ್ಮೋನಿಯಂ ಹಾಗು ಕೀಬೋರ್ಡ್ ನಲ್ಲಿ ಪುಟಾಣಿ ಸಾಯಿ ಗಣೇಶ್ ಅವರ ವಾದ್ಯಗೋಷ್ಠಿ ಹರಿಕಥೆಗೆ ಪೂರಕವಾಗಿದ್ದು ಪ್ರೇಕ್ಷಕರ ಹರಿಕಥಾನುಭವ ಅಮೋಘವಾಗಿತ್ತು. ಅಮೆರಿಕಾದಲ್ಲಿದ್ದುಕೊಂಡು ಶ್ರೀರಾಮನ ದೇವಸ್ಥಾನದಲ್ಲಿ ಹರಿಕಥೆ ಕೇಳಿದಂತೆ ಆದ ಅನುಭವವಂತೂ ವರ್ಣನಾತೀತ. ರಾಜ್ಯೋತ್ಸವದ ದಿನ ಬಹಳ ಸಮಂಜಸವೆನಿಸುವ ವಿಷಯವನ್ನು ಆರಿಸಿದ ಶ್ರೀಮತಿ ವೀಣಾ ಮೋಹನ್ ರವರು ನಮ್ಮೆಲ್ಲರ ಅಂತರಂಗದಲ್ಲಿ ದೇಶಭಕ್ತಿಯನ್ನು , ನಾಡಪ್ರೇಮವನ್ನು ಬಡಿದೆಬ್ಬಿಸಿದ್ದರು.!

"ಹುಟ್ಟಿದರೆ ಕನ್ನಡ ನಾಡಲ್ ಹುಟ್ಟಬೇಕು..." ಎಂದು ಮನಸ್ಸಿನಲ್ಲಿ ಮೂಡುತ್ತಿದ್ದಂತೆ, ನಮ್ಮ ಭಾವಕ್ಕೆ ಸ್ವರವಾಗಿ ಬೃಂದಾವನ ಕನ್ನಡ ಕೂಟದ ಸದಸ್ಯರು  "ಹುಟ್ಟಿದರೆ ಕನ್ನಡ ನಾಡಲ್ ಹುಟ್ಟಬೇಕು.." ಎಂದು ಧ್ವಜ ಹಾರಿಸುತ್ತಾ, ಹಾಡುತ್ತಾ, ತಾಳಹಾಕುತ್ತಾ ಬಂದೇ ಬಿಟ್ಟರು. ಲಕ್ಷ ಕಂಠ ಗಾಯನ ಅಭಿಯಾನದಲ್ಲಿ  ಹಾಡಿದ ಈ ಮತ್ತೊಂದು ಮಧುರ ಗೀತೆಯನ್ನು ಪ್ರಸ್ತುತ ಪಡಿಸಿ ನಮ್ಮೆಲ್ಲರನ್ನೂ ಮನೋರಂಜಿಸಿದರು. ಒಟ್ಟಿನಲ್ಲಿ ೨೦೨೦ ರ ಕನ್ನಡ ರಾಜ್ಯೋತ್ಸವವನ್ನು ನಾವು ಸಿಹಿ-ಕಹಿ ಅನುಭವದೊಂದಿಗೆ ಆಚರಿಸಿದೆವು.



# ರನ್ ಫಾರ್ ಕಮ್ಯೂನಿಟಿ

**ವಾಣಿ ಗಿರೀಶ್,** ನ್ಯೂ ಜರ್ಸಿ

ನವೆಂಬರ್ ೭ ಭಾನುವಾರ! ಕಾತುರದಿಂದ ಕಾಯುತ್ತಿದ್ದ ***ರನ್ ಫಾರ್ ಕಮ್ಯೂನಿಟಿ*** ದಿನ ಬಂದೇ ಬಿಟ್ಟಿತು. ಅಂದು ಬೆಳಿಗ್ಗೆ ೯:೩೦ ಕ್ಕೆ ನಾನು ಮತ್ತು ನಮ್ಮ ಮನೆಯವರು ನಾರ್ತ್ ಬ್ರನ್ಸ್ವಿಕ್ ಪಾರ್ಕ್ ಗೆ ಬಂದು ತಲುಪಿದೆವು. ಆಗಲೇ ಸುಮಾರು ಜನರು ತಮ್ಮ ಕೈಯಲ್ಲಿ ಕನ್ನಡದ ಬಾವುಟವನ್ನು ಹಿಡಿದುಕೊಂಡು ಕಾರ್ಯಕ್ರಮದ ಆರಂಭಕ್ಕಾಗಿ ಕಾಯುತ್ತಿದ್ದರು. ನಾವೂ ಕೂಡ ಆ ಕಡೆಗೆ ಧಾವಿಸಿದೆವು. ಆ ದಿನ ಅಲ್ಲಿ ನೆರೆದಿದ್ದ ನಮ್ಮೆಲ್ಲ ಕನ್ನಡಿಗರ ಉತ್ಸಾಹ, ಹುಮ್ಮಸ್ಸನ್ನು ನೋಡಿ ಈ ನವಂಬರ್ ತಿಂಗಳ ಛಳಿಯು ಬೆಚ್ಚಗೆ ಕೂತಂತಿತ್ತು, ಅದಕ್ಕೆ ಏನೋ ಒಂದು ಚೂರೂ ಕೂಡ ಗಾಳಿಯೂ ಇರಲಿಲ್ಲ. ಸೂರ್ಯನಾರಾಯಣನು ನಮ್ಮೆಲ್ಲರನ್ನೂ ನೋಡಲು ಕಾದಂತಿತ್ತು.

ಈ Covid-19 ನಿಂದಾಗಿ ತುಂಬ ದಿನಗಳಿಂದ ಒಬ್ಬರನ್ನು ಒಬ್ಬರು ಭೇಟಿಯಾಗದೆ, ಇಂದು ಮಾಸ್ಕ್ ಇಲ್ಲದೆ ಮುಖಾ ಮುಖಿಯಾಗುವ ಸದವಕಾಶ ಸಿಕ್ಕಿದ್ದರಿಂದ, ಒಂಥರಾ ಆನಂದ, ಉಲ್ಲಾಸ ಎಲ್ಲರಲ್ಲೂ ಕಾಣುತಿತ್ತು. ಮೊದಲಿಗೆ ಎಲ್ಲರು ರಿಜಿಸ್ಟ್ರೇಷನ್ ಡೆಸ್ಕಿಗೆ ಹೋಗಿ ನಮ್ಮ ನಮ್ಮ ಹೆಸರನ್ನು ನೋಂದಾಯಿಸಿ, ಕೊಟ್ಟ ಬ್ಯಾಂಡ್ ಗಳನ್ನೂ ಮತ್ತು ಕೊಟ್ಟಿರುವ ೫k ರನ್ ಸಂಖ್ಯೆಯನ್ನು ಧರಿಸಿದೆವು. ಇದರ ಜೊತೆಗೆ "ಸೇವಾ ದೀಪಾವಳಿ"ಯ ಅಂಗವಾಗಿ ದೇಣಿಗೆ ಕೊಡುವವರು ಕೂಡ ಸ್ಥಳೀಯವಾಗಿ ಹಣವನ್ನು ಪಾವತಿ ಮಾಡವ ವ್ಯವಸ್ಥೆ ಮಾಡಲಾಗಿತ್ತು.

ವೇಳಾ ಪಟ್ಟಿಗೆ ಅನುಗುಣವಾಗಿ ಸುಮಾರು ೯:೩೦ಕ್ಕೆ ಗಣೇಶನ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕನ್ನಡ ರಾಜ್ಯೋತ್ಸವದ ಅಂಗವಾಗಿ ನಮ್ಮ ಕನ್ನಡ ಬಾವುಟವನ್ನು ಹಾರಿಸಿ, ಬೃಂದಾವನದ ಪ್ರಗತಿ ತಂಡದ ಅಧ್ಯಕ್ಷರಾದ ಶ್ರೀಮತಿ ಪದ್ಮಿನಿಯವರೂ ಸೇರಿದಂತೆ ನಾವೆಲ್ಲರೂ ನಾಡಗೀತೆಯನ್ನು ಹಾಡಿದೆವು. ಅದಾದ ನಂತರ, ಅಕಾಲಿಕವಾಗಿ ನಮ್ಮೆಲ್ಲರನ್ನು ಅಗಲಿದ, ಕನ್ನಡದ ಕಣ್ಮಣಿಯಾದ Power Star ಪುನೀತ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿ ಮೂರು ನಿಮಿಷದ ಮೌನವನ್ನು ಆಚರಿಸಿದೆವು.



ನಂತರ ಅಲ್ಲಿಂದ ಎಲ್ಲರು ಹಚ್ಚುಹಸಿರಾದ ಹುಲ್ಲಿನ ಕ್ರೀಡಾಂಗಣದೆಡೆಗೆ ನಡೆದೆವು. ಇಲ್ಲಿ ೧೫ ನಿಮಿಷದ Zumba ವನ್ನು ಸವಿತ ಆನಂದ್ ಅವರಿಂದ ಹಮ್ಮಿಕೊಳ್ಳಲಾಗಿತ್ತು. ಅಲ್ಲಿಯವರೆಗೂ ಛಳಿ ಛಳಿಯಂತ ನಿಂತಿದ್ದ ಚಿಕ್ಕವರು ದೊಡ್ಡವರು ಎಲ್ಲರೂ ಸಂತಸದಿಂದ ಅಪ್ಪುವಿನ ಕೆಲವು ನೆಚ್ಚಿನ ಹಾಡುಗಳಿಗೆ ಹೆಜ್ಜೆ ಹಾಕುತ್ತ ಕುಣಿದು ಕುಪ್ಪಳಿಸಿದರು. ಈ Zumba ನಮ್ಮೆಲ್ಲ ೫k ಓಟಗಾರರಿಗೆ ಒಳ್ಳೆಯ warm up ಕ್ರೀಡೆ ಆಯಿತು.



ಈಗ ಕಾರ್ಯಕ್ರಮದ ಮುಖ್ಯ ಭಾಗವಾದ ೫ಕೆ  ಓಟದ ಸಮಯ. ಸುಹಾಸ್ ಮತ್ತು ಗಿರೀಶ್ ಹೊಂಗಲ್ ಅವರು ಎಲ್ಲರನ್ನು ೫ಕೆ ಪ್ರಾರಂಭಮಾಡುವ ಸ್ಥಳಕ್ಕೆ ಕರೆದುಕೊಂಡು ಹೋದರು. ಅಲ್ಲಿಯೂ ಕೂಡ  ಸ್ಪರ್ಧಿಗಳ  ಅನಕೂಲಕ್ಕಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ನಾನು ಮತ್ತು ನನ್ನ 'ಮಿಂಚಿನ ಓಟ'ದ ತಂಡದ ಸಂಗಾತಿ ಉಷಾ ಬಸ್ರೂರ್  ಜೊತೆಯಾಗಿ  ಓಟಕ್ಕೆ ಸಿದ್ಧರಾದೆವು.

ಸ್ಪರ್ಧಿಗಳನ್ನು ಮೂರು ಗುಂಪುಗಳಾಗಿ ವಿಭಾಗಿಸಲಾಗಿತ್ತು. ಯುವಕರು, ಮಕ್ಕಳು ಮತ್ತು ದೊಡ್ಡವರು. ಈ ರೀತಿಯಾಗಿ ಎರಡೆರಡು ನಿಮಿಷದ ಅಂತರದಲ್ಲಿ ಓಟ ವನ್ನು ಪ್ರಾರಂಭಿಸಿದೆವು. ಈ COVID ೧೯ ನಿಂದಾಗಿ ಮನೆಯಲ್ಲಿ ವಾಕಿಂಗ್/ರನ್ನಿಂಗನ್ನು ಅಭ್ಯಾಸಮಾಡಿಕೊಂಡಿದ್ದ ನನಗೆ ಆರಂಭದಲ್ಲಿ ಹೊರಗಡೆ ಓಡುವುದು ಸ್ವಲ್ಪ ಕಷ್ಟವೇ ಅನಿಸಿತು . ಆದರೆ ಧ್ರುವ  ಕುಮಾರನು ಹೇಳಿದಂತೆ "ಸಾಧನೆಗೆ ಆಸಾಧ್ಯವಾದದ್ದು ಯಾವುದು ಇಲ್ಲ", ಸಾಧಿಸುವ ಛಲ ಆ ದಿನ ನಮ್ಮೆಲ್ಲರಲ್ಲಿ ಎದ್ದುಕಾಣುತ್ತಿತ್ತು. ಹೀಗೆ ಓಟ ಭರದಿಂದ ಸಾಗಿತು.

ಪ್ರತಿಬಾರಿಯಂತೆ ನಮ್ಮ ಮಿಂಚಿನ ಓಟದ ತಂಡದ ಕೆಲವು ಸದಸ್ಯರು ವೇಗವಾಗಿ ಓಡಿ ಮೊದಲಿಗೆ ಓಟವನ್ನು ಪೂರ್ತಿಗೊಳಿಸಿದರು. ಅದೇ ರೀತಿಯಾಗಿ  ಮಕ್ಕಳು ಯುವಕರು, ಹೆಂಗಸರು ಮತ್ತು ಗಂಡಸರ ಗುಂಪುಗಳಲ್ಲಿ ಪ್ರಥಮ ದ್ವಿತೀಯ, ತೃತೀಯ ಮತ್ತು ಚತುರ್ಥ ಸ್ಥಾನಗಳಿಗೆ ವೇಗವಾಗಿ ಗುರಿಯನ್ನು ತಲುಪಿದವರ ಹೆಸರನ್ನು ದಾಖಲಿಕೊಳ್ಳುತ್ತಿದ್ದರು.



ಈ ಕಡೆ ನಾವು ಓಟ ಮುಗಿಸಿದಂತೆಯೇ finish line ನಲ್ಲಿ ನಮ್ಮ ಅರ್ಚನಾ ಆಚಾರ್ಯ ರವರು ನಮ್ಮೆಲ್ಲರಿಗೂ ಬಂಗಾರದ ಬಣ್ಣದ ಪದಕಗಳ ವಿಜಯಮಾಲೆಯನ್ನು ಕೊರಳಿಗೆ ಹಾಕಿ ನಾವು ಒಲಿಂಪಿಕ್ಸ್ ನಲ್ಲಿ ವಿಜೇತರಾದ ಅನುಭವ ಬರುವಂತೆ ಮಾಡಿದರು. ನಿಜಕ್ಕೂ ಆ ಘಳಿಗೆ ರೋಮಾಂಚಕಾರಿಯಾಗಿತ್ತು. ಈ ಕಾರ್ಯಕ್ರಮದಿಂದಾಗಿ ಸುಮಾರು ಒಂದೂವರೆ ವರ್ಷದಿಂದ virtual ಪಾಠ ಮಾಡುತಿದ್ದ ನಮಗೆ, ನಮ್ಮ Edison ಕನ್ನಡ ಶಾಲೆಯ ಕೆಲವು ಶಿಕ್ಷಕಿಯರನ್ನು ಮತ್ತು ವಿದ್ಯಾರ್ಥಿಗಳನ್ನು ಮುಖಾಮುಖಿ ಭೇಟಿಯಾಗುವ ಅವಕಾಶ ಕೂಡ ಒದಗಿಬಂದಿತ್ತು.

ಇನ್ನು ಈ ಕಾರ್ಯಕ್ರಮದ ಕೊನೆಯಘಟ್ಟ, ಉಪಹಾರ ಸಮಯ, ಈ ದಿಶೆಯಲ್ಲಿ ನಮ್ಮ ಪ್ರಗತಿ ತಂಡದ ಪರಿಶ್ರಮ ಮೆಚ್ಚುಗೆಗೆ ಅರ್ಹ! ಅಷ್ಟು ಹೊತ್ತು ರನ್ ಮಾಡಿದ ನಮಗೆ ಆ ಉದ್ಯಾನವನದಲ್ಲಿ 'ಶ್ರೀ ದೋಸಾ' ಉಪಹಾರ ಗೃಹದಿಂದ ಬಿಸಿ-ಬಿಸಿಯಾದ ಉಪ್ಪಿಟ್ಟು ಮತ್ತು ಕೇಸರಿ ಭಾತ್ ನ್ನು ತರಿಸಲಾಗಿತ್ತು. ಅದರ ಜೊತೆಗೆ ಹೈಜೀನ್ ಬಗ್ಗೆ ಕೂಡ ಗಮನ ಹರಿಸುತ್ತ, ಪ್ರಗತಿ ತಂಡದ ಕಿರಣ್ ಅಗ್ರಹಾರ ಅವರು ಎಲ್ಲರಿಗೂ ಒಂದೊಂದು ಸ್ಯಾನಿಟೈಝರ್ ಬಾಟಲನ್ನು ನೀಡಿದರು. ಮಕ್ಕಳಿಗೆ ಡೋನಟ್ಸ್ ಮತ್ತು ಬೇಗಲ್ ಗಳನ್ನು ತರಿಸಲಾಗಿತ್ತು. ಸಾಮಾನ್ಯವಾಗಿ ಓಟದ ಕಾರ್ಯಕ್ರಮಗಳಲ್ಲಿ ತಿಂಡಿಯ ವ್ಯವಸ್ಥೆ ಅಪರೂಪವಾದರೂ ನಮ್ಮ ನಾಡಿನ ರುಚಿ ರುಚಿಯಾದ ತಿಂಡಿಗಳನ್ನು ಸವಿಯುವ ಮಜವೇ ಬೇರೆ ಅಲ್ಲವಾ? ಅದಕ್ಕೆ ನನಗನಿಸುತ್ತೆ ಈ ರೀತಿಯ ಮಿತವಾದ ಮತ್ತು ಹಿತವಾದ ಉಪಹಾರ ಒಳ್ಳೆಯ ಯೋಚನೆ ಅಂತ :-) .

ಇನ್ನು ಕೊನೆಯದಾಗಿ ಬಹುಮಾನ ವಿತರಣೆ ಕಾರ್ಯಕ್ರಮ, ಹಿಂದಿನ ಅಧ್ಯಕ್ಷರಾದ ಪ್ರಸನ್ನ ಕುಮಾರ್ ಮತ್ತು ಇಂದಿನ ಪ್ರಗತಿ ತಂಡದ ಅಧ್ಯಕ್ಷರಾದ ಶ್ರೀಮತಿ ಪದ್ಮಿನಿಯವರು ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು. ವಿಜೇತರು ಸಂತೋಷದಿಂದ ತಮ್ಮ ತಮ್ಮ ಸ್ನೇಹಿತರೊಂದಿಗೆ ಫೋಟೋಗಳನ್ನು ಸೆಲ್ಫಿ ಯನ್ನು ತೆಗೆದುಕೊಳ್ಳುವ ಸಮಯ ಅದಾಗಿತ್ತು.

ಒಟ್ಟಿನಲ್ಲಿ ಬೃಂದಾವನದ ಪ್ರಗತಿ ತಂಡ ಹಮ್ಮಿಕೊಂಡ ಈ ರನ್ ಫಾರ್ ಕಮ್ಯುನಿಟಿ ಕಾರ್ಯಕ್ರಮ ಅವಿಸ್ಮರಣೀಯವಾಗಿತ್ತು. ನಾನು ನಮ್ಮ ಮನೆಯವರು ಮನೆಗೆ ಬರುತ್ತಾ ಕಾರಲ್ಲಿ ಯೋಚಿಸಿದ್ದು ಒಂದೇ, "ಪ್ರಗತಿ ತಂಡ ಮತ್ತೆ ಯಾವಾಗ ಈ ತರಹದ ೫ಕೆ ರನ್ ಕಾರ್ಯಕ್ರಮ ಇಟ್ಟುಕೊಳ್ಳುತ್ತಾರೆ?" ಈ ತರಹದ ಕಮ್ಯೂನಿಟಿಗೂ ಮತ್ತು ದೇಹಕ್ಕೂ ಆರೋಗ್ಯಕರವಾದ ಕಾರ್ಯಕ್ರಮಗಳನ್ನು ಮೇಲಿಂದ ಮೇಲೆ ಆಯೋಜಿಸಬೇಕಾಗಿ ನಮ್ಮ ಕೋರಿಕೆ .





# ಕನ್ನಡ ರಾಜ್ಯೋತ್ಸವ

**ಹೇಮಂತ್ ಚಿನ್ನು,** *ಬೇಲೂರು, ಹಾಸನ*

ಇಂದು ಕನ್ನಡ ರಾಜ್ಯೋತ್ಸವ. ಇದು ಕನ್ನಡಾಂಬೆಯ ಮಹೋತ್ಸವ. ತಾಯಿ ಭುವನೇಶ್ವರಿಯ ಉತ್ಸವ. ಕನ್ನಡ ನಾಡು ನುಡಿಯ ವೈಭವವು ವೈಶಿಷ್ಟ್ಯಪೂರ್ಣವಾದುದು.ಇಂದು ನಾವು ಶ್ರೀಗಂಧದ ಬೀಡು, ಶಿಲ್ಪಕಲೆಯ ತವರೂರು, ಸಂಸ್ಕೃತಿಯ ನೆಲೆವೀಡು, ಹಚ್ಚ ಹಸುರಿನ ಸುಂದರ ಬೆಟ್ಟಗಳ, ಪವಿತ್ರ ನದಿಗಳ ನಾಡು, ಕರುನಾಡು ಎಂದು ಕರೆಯಲ್ಪಡುವ ಕರ್ನಾಟಕದ ಕನ್ನಡ ರಾಜ್ಯೋತ್ಸವವನ್ನು ಬಹಳ ಸಡಗರ-ಸಂಭ್ರಮ ಹಾಗೂ ಹೆಮ್ಮೆಯಿಂದ ಆಚರಿಸುತ್ತೇವೆ.

ಕನ್ನಡ ನುಡಿಯು ಪ್ರಾಯಶಃ 2000 ವರ್ಷಗಳ ಇತಿಹಾಸವನ್ನು ಹೊಂದಿದೆ. ಕದಂಬರ ಕಾಲದ ಹಲ್ಮಿಡಿ ಶಾಸನದಲ್ಲಿ ಹುಟ್ಟಿ ... ರಾಷ್ಟ್ರಕೂಟರ ಕಾಲದ ಕವಿರಾಜ ಮಾರ್ಗದಲ್ಲಿ ಬೆಳೆದು .. ರನ್ನ- ಪಂಪರಿಂದ ಪೋಷಿಸಲ್ಪಟ್ಟು.. ಪೂರ್ವದ ಹಳಗನ್ನಡ - ನಡುಗನ್ನಡ - ಹೊಸಗನ್ನಡವಾಗಿ ರೂಪಾಂತರಗೊಂಡು, ಸಂವಿಧಾನದಲ್ಲಿ ಲಿಖಿತಗೊಂಡ 18 ಭಾಷೆಗಳಲ್ಲಿಯೇ ಕನ್ನಡ ಭಾಷೆ 8 ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದು ವಿಶಾಲ ಸಮೃದ್ಧ ಸಾಹಿತ್ಯವಾಗಿ ಬೆಳೆದು ನಿಂತಿದೆ. ರಾಷ್ಟ್ರಕವಿ ಕುವೆಂಪು, ವರಕವಿ ಬೇಂದ್ರೆ, ಕಡಲತೀರದ ಭಾರ್ಗವ ಶಿವರಾಮ ಕಾರಂತ, ಕನ್ನಡದ ಆಸ್ತಿ ಮಾಸ್ತಿ, ಭಾರತ ಸಿಂಧೂ ರಶ್ಮಿಯ ವಿ.ಕೃ. ಗೋಕಾಕ್, ಸಮಗ್ರ ಸಾಹಿತ್ಯದ ಅನಂತಮೂರ್ತಿ, ನಾಟಕಕಾರ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ ಹಾಗೂ ಇನ್ನೂ ಅನೇಕ ಮಹಾನ್ ವಿದ್ವಾಂಸರು, ಸಾಹಿತಿಗಳು, ಕವಿಗಳು, ಲೇಖಕರು ಹಾಗೂ ಬರಹಗಾರರಿಂದ ಕನ್ನಡ ನುಡಿ ಪ್ರಜ್ವಲಿಸಿದೆ. ರನ್ನ - ಪಂಪ ಜನಿಸಿದ ಪುಣ್ಯಬೀಡು ಈ ಕರ್ನಾಟಕ. ಹೊಯ್ಸಳ, ಚಾಲುಕ್ಯ, ಕದಂಬರು, ಗಂಗರು ಹಾಗೂ ಇನ್ನೂ ಅನೇಕ ರಾಜಮನೆತನಗಳು ಆಳಿದ ತ್ಯಾಗ ಭೂಮಿ ಈ ಕರ್ನಾಟಕ. ಈ ಮಣ್ಣಿನಲ್ಲಿ ಪ್ರೀತಿ ಇದೆ, ತ್ಯಾಗವಿದೆ, ಪರೋಪಕಾರ ಗುಣವಿದೆ, ಧೈರ್ಯವಿದೆ, ಶೌರ್ಯವಿದೆ, ಕರುಣೆಯಿದೆ. ಇಂತಹ ನಾಡಿನಲ್ಲಿ ಹುಟ್ಟಿದ ನಾವೆಲ್ಲರೂ ಭಾಗ್ಯಶಾಲಿಗಳು. ಕರುನಾಡನ್ನು ಹಲವು ಸಾಮ್ರಾಜ್ಯಗಳು ಹಾಗೂ ರಾಜ ವಂಶದವರು ಆಳಿದ್ದಾರೆ. ಕನ್ನಡದ ಮೊದಲ ರಾಜವಂಶ ಬಹುಶಃ ಬನವಾಸಿಯ ಕದಂಬರು, ಶಿಲ್ಪಕಲೆಯನ್ನು ಹುಟ್ಟುಹಾಕಿದ ಹೊಯ್ಸಳರು, ತಲಕಾಡಿನ ಗಂಗರು, ಚರಿತ್ರೆಯ ಪುಟಗಳಲ್ಲಿ ಸುವರ್ಣ ಯುಗವನ್ನು ಬರೆದು ಹೋಗಿರುವ ವಿಜಯನಗರ ಸಾಮ್ರಾಜ್ಯದ ಅರಸರು, ಮೈಸೂರು ಸಂಸ್ಥಾನ ದವರು ಇನ್ನೂ ಅನೇಕ ರಾಜಮನೆತನದವರು ಕನ್ನಡದ ವೈಭವೋಪೇತ ಇತಿಹಾಸಕ್ಕೆ ಮತ್ತು ಶ್ರೀಮಂತ ಶಿಲ್ಪಕಲೆ, ಸಾಹಿತ್ಯ, ಸಂಸ್ಕೃತಿಯ, ಹುಟ್ಟು ಹಾಗೂ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಕರ್ನಾಟಕದ ಹುಟ್ಟಿನ ಬಗ್ಗೆ ತಿಳಿಯುವುದಾದರೆ 1905 ರಲ್ಲಿ ಕನ್ನಡದ ಕುಲಪುರೋಹಿತರಾದ ಆಲೂರು ವೆಂಟರಾವ್ ರವರು ಕರ್ನಾಟಕ ಏಕೀಕರಣ ಚಳುವಳಿ ಪ್ರಾರಂಭಿಸಿದರೆ ಜೊತೆಗೂಡಿ ಹೋರಾಡಿದವರು ಕೋಟಿ ಕೋಟಿ ಕನ್ನಡಿಗರು. 1950 ರಲ್ಲಿ ಭಾರತವು ಗಣರಾಜ್ಯವಾಗಿ ನಂತರ ಭಾರತದ ವಿವಿಧ ಪ್ರಾಂತ್ಯಗಳು ಭಾಷೆಗಳ ಆಧಾರದ ಮೇಲೆ ರಾಜ್ಯಗಳು ರೂಪುಗೊಂಡವು. ಮದ್ರಾಸ್, ಮುಂಬಯಿ ಹೈದರಾಬಾದ್.. ಕನ್ನಡ ಮಾತನಾಡುವ ಪ್ರಾಂತ್ಯಗಳು ಸೇರಿ 1956 ನವಂಬರ್ 1 ರಂದು ಏಕೀಕೃತ ಕನ್ನಡ ನಾಡು ಮೈಸೂರು ರಾಜ್ಯ ಎಂಬ ಅಭಿದಾನದೊಂದಿಗೆ ಉದಯವಾಯಿತು.

1956ರಲ್ಲಿ ಡಾ: ಬಾಬು ರಾಜೇಂದ್ರ ಪ್ರಸಾದ್ ರವರಿಂದ ಉದ್ಘಾಟನೆಗೊಂಡ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಗಳಾಗಿ ಎಸ್. ನಿಜಲಿಂಗಪ್ಪನವರು ಹಾಗೂ ರಾಜ್ಯಪಾಲರಾಗಿ ಜಯಚಾಮರಾಜೇಂದ್ರ ಒಡೆಯರು ಆಯ್ಕೆಯಾದರು. ನಂತರದ ಬೆಳವಣಿಗೆಯಲ್ಲಿ ಕರ್ನಾಟಕ ಏಕೀಕರಣ ಚಳುವಳಿಯ ಹೋರಾಟಗಾರರು, ಕನ್ನಡ ಸಾಹಿತಿಗಳು, ಕನ್ನಡಿಗರು ಹಾಗೂ ಕನ್ನಡ ಪರ ಸಂಘಟನೆಗಳ ಆಶಯದಂತೆ ದೇವರಾಜ ಅರಸರ ಕಾಲದಲ್ಲಿ 1973 ನವಂಬರ್ 1 ರಂದು ಮೈಸೂರು ರಾಜ್ಯ ಕರ್ನಾಟಕ ಎಂಬ ಅಭಿದಾನ ಪಡೆಯಿತು. ಅಂದಿನಿಂದ ಪ್ರತಿ ವರ್ಷ ನವಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಿ ಕನ್ನಡ ನಾಡು ನುಡಿಗೆ ಗೌರವ ಸಲ್ಲಿಸುತ್ತೇವೆ.

ಕರ್ನಾಟಕ ಪದದ ಮೂಲವೂ ಸಾಮಾನ್ಯವಾಗಿ ಕರು ಮತ್ತು ನಾಡು ಸೇರಿ ಎತ್ತರದ ಭೂಮಿ ಎಂಬರ್ಥದ ಕರುನಾಡು ಪದದಿಂದ ಉಗಮವಾಗಿದೆ. ಕರು ಎಂದರೆ ಕಪ್ಪು, ನಾಡು ಎಂದರೆ ಪ್ರದೇಶ. ಅಂದರೇ, ಬಯಲು ಸೀಮೆಯ ಕಡು ಕಪ್ಪುಹತ್ತಿ ಮಣ್ಣಿನಿಂದಾಗಿ ಕರ್ನಾಟಕ ಎಂಬ ಹೆಸರು ಬಂದಿದೆ. ಕೃಷ್ಣ ನದಿಯ ದಕ್ಷಿಣಕ್ಕೆ ಎರಡು ಕಡೆ ಜಲಾವೃತವಾದ ಪ್ರದೇಶವಾದುದರಿಂದ ಬ್ರಿಟಿಷರ ಕಾಲದಲ್ಲಿ ಕರ್ನಾಟಿಕ್ ಅಥವಾ ಕರ್ನಾಟಕ ಎಂದು ಹೆಸರು ಬಳಕೆ ಬಂದಿತು.

ಕರ್ನಾಟಕಕ್ಕೆ ತನ್ನದೇ ಆದ ಪ್ರತ್ಯೇಕ ಬಾವುಟವಿದೆ. ಕೆಂಪು ಮತ್ತು ಹಳದಿ ಬಣ್ಣದ ಕನ್ನಡ ಧ್ವಜವು ಕನ್ನಡ ನಾಡಿನ ಹಿರಿಮೆ ಗರಿಮೆಯ ಸಂಕೇತವಾಗಿದೆ. ಈ ಬಣ್ಣವು ಕನ್ನಡಾಂಬೆಯ ಅರಿಷಿನ ಕುಂಕುಮವನ್ನು ಸೂಚಿಸುತ್ತದೆ ಹಾಗೂ ಹಳದಿ ಬಣ್ಣವು ಶಾಂತಿ ಸೌಹಾರ್ಧತೆ ಸೂಚಿಸಿದರೆ ಕೆಂಪು ಬಣ್ಣವು ಕ್ರಾಂತಿಯ ಸಂದೇಶ

ನೀಡುತ್ತದೆ. ಅಂದರೆ ಕನ್ನಡಿಗರು ಶಾಂತಿಗೂ ಬದ್ಧ, ಕ್ರಾಂತಿಗೂ ಸಿದ್ಧ ಎಂಬ ಸಂದೇಶ ನೀಡುತ್ತದೆ. ಕನ್ನಡ ಬಾವುಟವನ್ನು ಕನ್ನಡ ಹೋರಾಟಗಾರರಾದ ಎಂ.ರಾಮಮೂರ್ತಿಯವರು ಸಿದ್ಧಪಡಿಸಿದರು. ಕನ್ನಡ ಧ್ವಜವನ್ನು ಕರ್ನಾಟಕದ ಎಲ್ಲೆಡೇ ಸ್ಥಿರವಾಗಿ ಕರ್ನಾಟಕ ಹಾಗೂ ಕನ್ನಡವನ್ನು ಪ್ರತಿನಿಧಿಸಲು ಬಳಸುತ್ತಾರೆ. ರಾಜ್ಯೋತ್ಸವದಂದು ಎಲ್ಲಾ ರೀತಿಯ ವಾಹನಗಳ ಮೇಲೂ ಕನ್ನಡ ಬಾವುಟ ರಾರಾಜಿಸುತ್ತದೆ.

ಕರ್ನಾಟಕದ ಮಾತೃಭಾಷೆ ಕನ್ನಡವೇ ಆದರೂ ಅದರಲ್ಲಿ ಹಲವು ವಿಶೇಷತೆಗಳನ್ನು ಕಾಣಬಹುದು. ಬೆಂಗಳೂರಿನ ಕಂಗ್ಲೀಷ್ ಕನ್ನಡ, ಮೈಸೂರಿನ ಮೆಲುಧನಿ ಕನ್ನಡ, ಧಾರವಾಡದ ಗಂಡು ಕನ್ನಡ, ದಕ್ಷಿಣದ ಗ್ರಾಂಥಿಕ ಕನ್ನಡ, ಕಾಸರಗೂಡಿನ ಮಲೆಯಾಳಮ್ ಕನ್ನಡ, ಹೈದರಾಬಾದ್ ಕರ್ನಾಟಕದ ಉರ್ದು ಮಿಶ್ರಿತ ಕನ್ನಡ ಮುಂತಾದವು. ಕರ್ನಾಟಕ ರಾಜ್ಯ ಸರ್ಕಾರ ಕನ್ನಡ ರಾಜ್ಯೋತ್ಸವದಂದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸುತ್ತದೆ.

***ಕನ್ನಡದ ಬಗ್ಗೆ ಕವಿವಾಣಿಗಳು***

**ಕುವೆಂಪು–**ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುವುದು. ಕನ್ನಡಕ್ಕಾಗಿ ಕೊರಳೆತ್ತಿದರೆ ಅದು ಪಾಂಚಜನ್ಯವಾಗುವುದು. ಕನ್ನಡಕ್ಕಾಗಿ ಕಿರುಬೆರಳೆತ್ತಿದರೆ ಅದು ಗೋವರ್ಧನ ಗಿರಿಯಾಗುವುದು.

ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು. ಕನ್ನಡ ಗೋವಿನ ಓ ಮುದ್ದಿನ ಕರು ಕನ್ನಡತನವೊಂದಿದ್ದರೇ ನೀ ನಮಗೆ ಕಲ್ಪತರು.

**ಜಿ.ಪಿ. ರಾಜರತ್ನಂ–**ಹೆಂಡ ಹೋಗ್ಲಿ, ಹೆಂಡ್ತಿ ಹೋಗ್ಲಿ, ಎಲ್ಲಾ ಕೊಚ್ಕೊಂಡು ಹೋಗಲಿ, ಪರ್ ಪಂಚ ಇರೋತನಕ ಮೂಗ್ನಲ್ಲಿ ಕನ್ನಡ ಪದವಾಡ್ತೀನಿ.

**ಮಹಲಿಂಗರಂಗ-**ಸುಲಿದ ಬಾಳೆಯ ಹಣ್ಣಿನಂದದಿ, ಕಳಿದ ಸಿಗುರಿನ ಕಬ್ಬಿನಂದದಿ, ಅಳಿದ ಉಷ್ಣದ ಹಾಲಿನಂದದಿ, ಸುಲಭವಾಗಿರ್ಪ, ಲಲಿತವಹ ಕನ್ನಡದ ನುಡಿಯಲ್ಲಿ, ತಿಳಿದ ತನ್ನೋಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನಿದೆ

**ಡಿ.ಎಸ್. ಕರ್ಕಿ-** ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ,
ಸಿರಿನುಡಿಯ ದೀಪ! ಒಲವೆತ್ತಿ ತೋರುವಾ ದೀಪ .


"ಕನ್ನಡದ ರವಿಮೂಡಿ ಬಂದ. ಮುನ್ನಡೆವ ಬೆಳಕನ್ನೇ ತಂದ". "ರಾಜ್ಯೋತ್ಸವ, ನಮ್ಮ ರಾಜ್ಯೋತ್ಸವ", "ನಾವಾಡುವ ನುಡಿಯೇ ಕನ್ನಡ ನುಡಿ. ನಾವಿರುವ ತಾಣವೇ ಗಂಧದ ಗುಡಿ", "ಕನ್ನಡ ಹೊನ್ನುಡಿ ದೇವಿಯನು ಪೂಜಿಸುವೆ, ನಾ ಆರಾಧಿಸುವೆ". ಇಂತಹ ಅರ್ಥಪೂರ್ಣ ಕನ್ನಡ ಮಾಧುರ್ಯ ಗೀತೆಗಳನ್ನು ರಚಿಸಿದ ಹಾಗೂ ರಚಿಸುವಂತಹ ಕವಿಗಳು ಕೋಟಿ ಕೋಟಿ ಉದಯಿಸಲಿ. ನಾವೆಲ್ಲಾ ಅವುಗಳನ್ನು ಸಂಭ್ರಮದಿಂದ ಹಾಡೋಣ. ಸತ್ತಂತಿಹರನು ಬಡಿದೆಚ್ಚರಿಸು. ಕಚ್ಚಾಡುವವರನು ಕೂಡಿಸಿ ಒಲಿಸು ಎಂಬ ಕವಿವಾಣಿಯ ಆಶಯದಂತೆ ಕಾರ್ಯ ಪ್ರವೃತ್ತರಾಗೋಣ. ಕನ್ನಡ ಉಳಿಸಿ ಬೆಳೆಸೋಣ.

ಇತ್ತೀಚಿನ ದಿನಗಳಲ್ಲಿ ಕನ್ನಡ ನಾಡಿನಲ್ಲಿ ಕನ್ನಡ ಕಣ್ಮರೆಯಾಗುತ್ತಿರುವುದು ವಿಷಾದದ ಸಂಗತಿಯಾಗಿದೆ. ಹಾಗಾಗಿ ನಾವೆಲ್ಲಾ ಅಖಂಡ ಕರ್ನಾಟಕದ ಉಳಿವಿಗಾಗಿ ಹೋರಾಡಬೇಕು. ಮುಂದೆ ನಮ್ಮ ಭಾಷೆಯನ್ನು ಕಳೆದುಕೊಳ್ಳುವ ಆತಂಕ ಬರುವುದು ಬೇಡ. ಕನ್ನಡ ಭಾಷೆ ಈ ನಾಡಿನ ಸಮಸ್ತ ಕನ್ನಡಿಗರ ಆಸ್ತಿ. ಕನ್ನಡ ನಾಡು ನುಡಿಯ ಅಭಿಯಾನ ಇಂದಿನ ಜನತೆಯ ನರ ನರಗಳಲಿ ಮಿಡಿಯುವಂತಾಗಲಿ ಎಂದು ಶಾಂತದೇವಿ ಮಾಳವಾಡ ಅಭಿಪ್ರಾಯ ಪಟ್ಟಿದ್ದಾರೆ.

ಕನ್ನಡ ಭಾಷೆಯ ಉಳಿವಿಗೆ ಮತ್ತು ಬೆಳವಣಿಗೆಗೆ ಭಾಷಾಭಿಮಾನ, ಭಾಷೆಯ ಬಗ್ಗೆ ಅಪಾರವಾದ ಜ್ಞಾನ, ಭಾಷೆಯನ್ನು ಶ್ರೀಮಂತಗೊಳಿಸುವ, ಮುನ್ನಡೆಸುವ ಇಚ್ಛಾ ಶಕ್ತಿ ಬೇಕು. ಅನ್ಯಭಾಷಿಗರಿಗೆ ಕನ್ನಡ ಕಲಿಸೋಣ. ಕನ್ನಡಿಗರೆಲ್ಲರೂ ಕನ್ನಡ ಭಾಷೆಯನ್ನು ಹೆಬ್ಬಾಗಿಲಿನಂತೆ ಬಳಸಿ ಇತರ ಭಾಷೆಗಳನ್ನು ಗಾಳಿ, ಬೆಳಕಿಗೆ ಬೇಕಾದ ಕಿಟಕಿಗಳಂತೆ ಉಪಯೋಗಿಸಬೇಕು. ಅದರಲ್ಲಿರುವ ಉತ್ತಮಾಂಶಗಳನ್ನು ನಾವು ಸ್ವೀಕರಿಸಬೇಕು. ಮಗು ಭಾಷೆಯನ್ನು ಅನುಕರಣೆಯ ಮೂಲಕ ಕಲಿಯುತ್ತದೆ. ಆದುದರಿಂದ ಮಗುವಿಗೆ ಮೊದಲು ಮಾತೃಭಾಷೆಯ ಮೂಲಕ ಶಿಕ್ಷಣ ಕೊಡಬೇಕು. ಅಗತ್ಯವಿದ್ದರೆ ಪರಭಾಷೆಯನ್ನು ಕಲಿಸಬೇಕು. ಮನೆಯೇ ಮೊದಲ ಪಾಠಶಾಲೆ. ಇಲ್ಲಿಂದಲೇ ಮಕ್ಕಳಿಗೆ ಮಾತೃಭಾಷಾ ಕಲಿಕೆ ಮತ್ತು ಭಾಷಾಭಿಮಾನ ಬೆಳೆಸುವುದು ಮುಖ್ಯವಾಗುತ್ತದೆ. ಮಕ್ಕಳಿಗೆ ನಮ್ಮ ನಾಡು ನುಡಿಯ ಬಗ್ಗೆ ಹೆಮ್ಮೆ ಪಡುವಂತಹ ಕಲಿಕೆಯನ್ನು ಪ್ರೋತ್ಸಾಹಿಸಬೇಕು. ಕನ್ನಡ ಕಲಿಕೆಯನ್ನು ಒತ್ತಾಯವಾಗಿ ಹೇರುವ ಪರಿಸ್ಥಿತಿ ಬದಲಾಗಿ ಕನ್ನಡ ಭಾಷೆ ನಮ್ಮ ತಾಯಿ ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರದ್ದು ಎಂಬ ಭಾವಾನಾತ್ಮಕ ಅಂಶಗಳನ್ನು ಬಿತ್ತುವ ಕಾರ್ಯ ಮಾಡಬೇಕು. ಈ ಕಾಯಕದಲ್ಲಿ ಪ್ರತಿಯೊಬ್ಬ ಕನ್ನಡಿಗನು ಕಂಕಣ ಬದ್ಧವಾಗಿ ಕಾರ್ಯನಿರ್ವಹಿಸಿದರೆ ಕನ್ನಡಿಗರಷ್ಟೆ ಅಲ್ಲದೆ ಇತರರೂ ಕನ್ನಡ ಭಾಷೆಯನ್ನು ಪ್ರೀತಿಸಿ ಅಳವಡಿಸಿಕೊಳ್ಳಲು ಪ್ರಯತ್ನಿಸುವರು.

ಕನ್ನಡದ ಅಭಿವೃದ್ಧಿಯು ಕೇವಲ ನವಂಬರ್ ತಿಂಗಳಲ್ಲಿ ನಡೆದರೆ ಸಾಲದು. ಸಾಮಾನ್ಯ ಪ್ರಜೆಯಿಂದ ಹಿಡಿದು... ವಿಧಾನಸೌಧದವರೆಗೂ ವರ್ಷದಾದ್ಯಂತ ನಡೆಯಬೇಕು. ರಾಷ್ಟ್ರೀಯ ಐಕ್ಯತೆಗೆ ಭಂಗ ಬರದಂತೆ ಕನ್ನಡ ರಾಜ್ಯೋತ್ಸವ ಆಚರಿಸೋಣ. ಅದಕ್ಕಾಗಿ ಕಂಕಣ ಬದ್ಧರಾಗಿ ನಿಲ್ಲೋಣ. ರಾಷ್ಟ್ರಕವಿ ಕುವೆಂಪುರವರು ಜೈ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ ಎಂದು ಹಾಡಿ ಹೊಗಳಿದ್ದಾರೆ. ಭಾರತಾಂಬೆ ತಾಯಿಯಾದರೆ ಕನ್ನಡಾಂಬೆ ಮಗಳಾಗಿದ್ದಾಳೆ. ಅಮ್ಮ ಮಗಳ ಸಂಬಂಧಕ್ಕೆ ಯಾವುದೇ ತೊಡಕಾಗದಂತೆ ನಾವು ಹೆಜ್ಜೆಯಿಡಬೇಕು. ಗಡಿನಾಡೆ ಇರಲಿ, ನಡುನಾಡೆ ಇರಲಿ, ಎಲ್ಲೆಲ್ಲಿ ಕನ್ನಡದ ಕಂಪು ಸೂಸಲು ಸಾಧ್ಯವೋ ಅಲ್ಲೆಲ್ಲಾ ಕನ್ನಡದ ಪರಿಮಳವನ್ನು ಚೆಲ್ಲೋಣ. ಕನ್ನಡದ ಕೀರ್ತಿ ಪತಾಕೆ ಹಾರಿಸೋಣ. Covid ಇರುವುದರಿಂದ ಕಡ್ಡಾಯವಾಗಿ SOP ಪಾಲನೆ ಮಾಡೋಣ.

ಎಲ್ಲೆಡೆ ಮೊಳಗಲಿ ..ಕನ್ನಡದ ನಾದ.. ಕನ್ನಡದ ಪದ! ಕನ್ನಡವೇ ಸತ್ಯ, ಕನ್ನಡವೇ ನಿತ್ಯ!


ಕಾಣದಂತೆ ಮಾಯವಾದ
ನಮ್ಮ "ಅಪ್ಪು" ಗೆ,
ನುಡಿ ನಮನಗಳ "ಅಪ್ಪುಗೆ"



# ಕಾಣೆಯಾದ ಕರ್ನಾಟಕದ ರತ್ನನಿಗೆ ಕಡಲಾಚೆಯಿಂದ ವಂದನೆ

**ವಿ. ಪ್ರಸನ್ನ ಕುಮಾರ್,** *ನ್ಯೂ ಜರ್ಸಿ*




*ಅಕ್ಕ ಸಮ್ಮೇಳನದಲ್ಲಿ ಅಕ್ಕರೆಯ ಅಪ್ಪು*

"ಪ್ರೇಮದ ಕಾಣಿಕೆ"ಯಲ್ಲಿ ಆರು ತಿಂಗಳ ಹಸುಗೂಸಾಗಿ ಪಾದರ್ಪಣ ಮಾಡಿತು ಪುಟ್ಟ ಲೋಹಿತ
"ನಟ ಸಾರ್ವಭೌಮ" ನಾಗಿ ನಲವತ್ತಾರಿಗೆ ಕಣ್ಣೀರಿನಲ್ಲಿ ಮುಳುಗಿಸಿ ಹೊರಟೇ ಹೋದ ಪುನೀತ

ತಾಯಿಗೆ ತಕ್ಕ ಮಗನಾಗಿ ಬೆಳೆದು ಎಲ್ಲರ ಮನೆಮಾತಾಗಿದ್ದು ಪ್ರೀತಿಯ "ಅಪ್ಪು" ಅಂತ
ಭೂಮಿಗೆ ಬಂದ ಭಗವಂತನೇ ಎಂಬಂತೆ ನಮ್ಮೆಲರಿಗೆ ಆಗಿದ್ದ ಈ ನಮ್ಮ ಭಾಗ್ಯವಂತ

ಚಲಿಸುವ ಮೋಡಗಳಲ್ಲಿ ಅಪ್ಪನೊಡನೆ ಸಾಗಿ ಹೊಸ ಬೆಳಕನ್ನೂ ಚೆಲ್ಲಿದ ವೀರ ಕನ್ನಡಿಗ
ಕಾಣದಂತೆ ಮಾಯವಾದನೆಂದು ಹಾಡಿ ತಾನೆ ಈ ದಿನ ಕಾಣೆಯಾದ ಅಂಜನಿ ಪುತ್ರ

ಕಣ್ಣಿಗೆ ಕಾಣುವ ದೇವರು ಎಂದರೆ ಅಮ್ಮ ತಾನೆ ಅಂತ ಹಾಡಿದ ಯಾರಿವನು
ಬೆಟ್ಟದ ಹೂವಲ್ಲಿ ಬಾಲ ನಟನೆಗಾಗಿ ರಾಷ್ಟ್ರಪ್ರಶಸ್ತಿ ಪಡೆದ ಮಗು ನೀನು

ಅಪ್ಪು ಇಂದ ಶುರುವಾದ ನಿನ್ನ ನಯನ ಮನೋಹರ "ಡ್ಯಾನ್ಸ್" ಸ್ಟೆಪ್ಪುಗಳು
ಮುಂದಿನ ಮೂವತ್ತು ಚಿತ್ರಗಳಲ್ಲಿ ಮೂಡಿಬಂತು ಒಂದಕ್ಕಿಂತ ಒಂದು ಮಿಗಿಲು

ನಟನೆ ನಾಟ್ಯ ಗಾನ ಬಜಾನ ಒಂದೇ ಎರಡೇ ನಿನ್ನಲ್ಲಿದ್ದ ಕಲೆಗಳ ವಿಶೇಷ
ನಿನ್ನೆಲ್ಲಾ ಚಿತ್ರದಲ್ಲೂ ಇರುತಿತ್ತು ಮನರಂಜನೆಯ ಜೊತೆಗೆ ಒಳ್ಳೆಯ ಸಂದೇಶ

ನ್ಯೂಜರ್ಸಿಯ ಅಕ್ಕ ಸಮ್ಮೇಳನದ "ಬ್ರಾಂಡ್" ರಾಯಭಾರಿಯಾಗಿದ್ದು ನೀನೆ
ಎಲ್ಲರೊಡನೆ ಸ್ನೇಹಜೀವಿಯಂತೆ ಬೆರತೆ, ಸಮ್ಮೇಳನಕ್ಕೆ ಕಳೆ ಬಂದಿದ್ದು ಅದಕೆ ತಾನೆ

ಕ್ಯಾಲಿಫೋರ್ನಿಯಾದ ಅಕ್ಕ ಸಮ್ಮೇಳನದಲ್ಲಿ ಕೋಟ್ಯಾಧಿಪತಿಯನ್ನು ನಡೆಸಿಕೊಟ್ಟೆ ತಾನೆ
ಅಟ್ಲಾಂಟಿಕ್ ಸಿಟಿಯ ಅಕ್ಕ ಸಮ್ಮೇಳನದಲ್ಲಿ ಯುವ ಕುಡಿಗಳ ಜೊತೆ ಕುಣಿದು ಕುಪ್ಪಳಿಸಿದ್ದೂ ನೀನೆ

ನೀ ಹೋದ ಮೇಲೆ ಜಗಕೆಲ್ಲ ತಿಳಿಯಿತು ನೀನು ಮಾಡುತಿದ್ದ ಧರ್ಮ ಕಾರ್ಯಗಳೇನೆಂದು
ಹಲವಾರು ಗೋಶಾಲೆ, ಅನಾಥಾಶ್ರಮ, ವೃದ್ಧಾಶ್ರಮ ನಡೆಸಿ ಆಗಿದ್ದೆ ನೀ ಬಡವರ ಬಂಧು

ನಿನ್ನ ಕೈಂಕರ್ಯಗಳು, "ಕೊಡುವ" ಜೀವನ ಶೈಲಿ ನೀಡುವುದು ನಮಗೆಲ್ಲ ಅಪಾರವಾದ ಸ್ಪೂರ್ತಿ
ಅದನು ಅಳವಡಿಸಿಕೊಂಡರೆ ಈಗಿರುವರು, ಮುಂದಿನ ಪೀಳಿಗೆಯವರು ತರುವರು ಮನೆಗಳಿಗೆ ಕೀರ್ತಿ

ನೀನು ಇರುವಷ್ಟು ದಿನ ಪ್ರೀತಿಯಿಂದ ಬಡವರನು ಬೆಳಸಿ ಎಲ್ಲರಿಗೂ ನೀಡುತಿದ್ದೆ ಮನರಂಜನೆ
ನೀನು ಮಾಡುತಿದ್ದ ಅಪಾರವಾದ ಸತ್ಕಾರ್ಯಗಳಿಗೆ ಇದೋ ನಿನಗೆ ನಮ್ಮೆಲ್ಲರ "ಅಭಿ" ವಂದನೆ !!!



# ಅಗಲಿದ ಅಪ್ಪುವಿಗೆ ಕಾವ್ಯ ನುಡಿ ನಮನ

ಮಧುಕರ್ ರಾವ್

ಹುಟ್ಟಿದಾಗ ಲೋಹಿತ, ಬೆಳೆದಾಗ ಪುನೀತ,

ಮುದ್ದಿನ ಅಪ್ಪು ಡಾ!! ರಾಜ್ ನ ಸುತ,
ದೊಡ್ಮನೆ ಹುಡುಗ ಭಾಗ್ಯವಂತ,
ಪುನೀತ ನೀ ಎದೆಂದೂ ಜೀವಂತ.

ಹುಟ್ಟು ಕಲೆಯ ಅರಸ ರಾಜಕುಮಾರನಾಗಿದ್ದೀಯೆಲ್ಲವೆ,
ಹೃದಯವಿನ್ನೂ ಕಂಪಿಸಿ, ಇನ್ನೊಂದವಕಾಶ ಕೊಡಬೇಕಿತ್ತಲ್ಲವೆ,
ಮಿಂಚಿನಂತೆ ಮಿಂಚಿ, ಕಾಣದಂತೆ ಮರೆಯಾದೆಯಲ್ಲವೆ,
ಸಾಧಿಸಿ, ಸಾಧನೆಯ ಶಿಖರದಿ ಎಲ್ಲರ ದಾರಿದೀಪವಾಗಿರುವೆ,

ಸಂಬಂಧಿಯಲ್ಲ, ಸ್ನೇಹಿತನಲ್ಲ, ನಿನ್ನಭಿಮಾನದ ಅಗಲಿಕೆಯಲ್ಲಿ ನೊಂದಿರುವೆ,
ದೇವಮಾನವನಂತೆ ಕನಸಿನಲ್ಲಿ ಬಂದ ನಿನ್ನೋಡಿ ಕಣ್ಣೊದ್ದೆಯಾಗಿರುವೆ,
ಆಕಾಶದಿಂದೆರಡು ನಕ್ಷತ್ರದ ಮಿಲನದ ನೇತ್ರದಿ ನೋಡುತಿರುವೆ,
ಅಜೇಯನಾಗಿ ವಿಕ್ರಮನಂತೆ,ಎಲ್ಲರ ಹೃದಯದಲ್ಲಿರುವೆ,

ನೆರವಿನ ಗೋಶಾಲಾ, ಶಾಲಾಮಕ್ಕಳ,ರೈತರ ಹಾಲಿನ ಜೇನಾಗಿರುವೆ,
ಶಕ್ತಿಧಾಮದ ಜೀವ,ಅನಾಥರ ದೀನ ಬಂಧುವಾಗಿರುವೆ,
ಜನಸೇವೆಯ ಜೀವನಾಡಿ ಪುನೀತನೆಂದೆಂದು ಮರೆಯಲು ಸಾಧ್ಯವೆ,
ಮತ್ತೆ ಹುಟ್ಟಿ ಬರಲೆಂದು ಪರಮಾತ್ಮನ ಬೇಡುವೆ.!!!!

## ಹುಟ್ಟು -ಸಾವು

ಹುಟ್ಟು ಒಂದಿನ,

ಸಾವು ಒಂದಿನ,
ಬದುಕು ಮೂರೇ ದಿನ,
ಮಧ್ಯ ಏಕೀ ತನ,
ಹುಂಬತನ
ಜಂಭತನ,
ನಾನತ್ವನ,
ಸಣ್ಣತನ,
ಬಿಗುಮಾನ,
ಅನುಮಾನ,
ಕಳ್ಳತನ.
ದುರ್ಬುದ್ಧಿನ.

ಪಾಲಿಸೋಣ
ಒಳ್ಳೆಯತನ,
ನಂಬಿಕೆನ
ದಾನ-ಧರ್ಮನ,
ನಗು ಮುಖನ.



## ದಿಶೆ

**ಡಾ. ಹರಿಕುಮಾರ್**, *ಬೆಂಗಳೂರು*

ಸಾಗುತಲಿವೆ ಚಿಂತನೆಗಳು ದಶದಿಶೆಗಳೆಡೆಗೆ

ಎಲ್ಲಕ್ಕೂ ನಿರ್ದಿಷ್ಟ ಗುರಿ ತಲುಪುವ ವಿಶ್ವಾಸವಿಲ್ಲ
ಸಂತಸದ ನೆಲೆ ಮರೀಚಿಕೆಯಲ್ಲ
ಎಲ್ಲ ಕಲ್ಪಿತ ಕಷ್ಟ ನಷ್ಟಗಳು ನೈಜ ಸ್ವರೂಪವಲ್ಲ

ಸಾಂಗತ್ಯಗಳ ಕೋಪ – ವಿಕೋಪ
ಅಭದ್ರ– ಕ್ಷುದ್ರ ಅಭಿಲಾಷೆಗಳು ಪ್ರಪಾತ
ಋತುಚಕ್ರದ ಸುಳಿಯಲಿ ಸುಲಲಿತವಿಲ್ಲ
ಜಿಹ್ವೆಗೆ ಸಿಕ್ಕ ಮಧುರ ಮಾತುಗಳೆಲ್ಲಾ ಕಹಿಯಾದವಲ್ಲ

ಧೈರ್ಯ ಮನೋಸ್ಥೈರ್ಯಗಳು ಮಾರ್ಗದರ್ಶಿಗಳಾಗಲಿಲ್ಲ
ಅಶಾಂತಿ – ವಿಭ್ರಾಂತಿಗಳ ಆರ್ಭಟದಲಿ
ಸಹಜ ಮನಗಳು ಪ್ರಸ್ತುತ ವಿಷಮ ಸ್ಥಿತಿಯಲಿ
ದಾವಾನಿಲದಲಿ ಸುಟ್ಟು ಹೋಗಿವೆಯಲ್ಲ

ಅವನೊಬ್ಬನೆ ಏಕಾಂಗಿಯಲ್ಲ ಈ
ಪಥದಲ್ಲಿ ಹಲವರಿದ್ದಾರೆ ಬೆಲೆ
ತೆರುವವರಿದ್ದಾರೆ. ಅಚಲ ನಂಬಿಕೆಯ ಮರ
ನಿಶ್ಚಲ ಜಗದಲಿ ಬೋಳಾಯ್ತು. ಇಷ್ಟಾದರೂ
ಪ್ರಯತ್ನ ನಿಲ್ಲದು.....!



## ಮಕ್ಕಳು

**ಹೇಮಂತ್ ಚಿನ್ನು**, *ಬೇಲೂರು, ಹಾಸನ*

ಮಕ್ಕಳು ಕೇಳಿದ್ದೆಲ್ಲವನ್ನೂ ಕೊಡಿಸುವುದಷ್ಟೇ ಪ್ರೀತಿಯಲ್ಲ, ಕೊಡಿಸದೇ ಇದ್ದು

ನಿರಾಕರಣೆಯ ನೋವ ಸಹಿಸೋದನ್ನು ಕಲಿಸೋದು ಕೂಡ ಪ್ರೀತಿಯೇ...
ಕೇಳಿದಲ್ಲಿಗೆ ಕರೆದೊಯ್ಯುವುದು/ಕಳಿಸುವುದಷ್ಟೇ ಅಲ್ಲ, ಕರೆದೊಯ್ಯದೇ/ಕಳಿಸದೇ ಮನೆಯಲ್ಲಿ ಇರುವಂತೆ ಮಾಡಿ ನಿರಾಸೆಯನ್ನು ಅರಗಿಸಿಕೊಳ್ಳೋದನ್ನು ತಿಳಿಸೋದೂ ಪ್ರೀತಿಯೇ...
ಕೇಳಿದ್ದೆಲ್ಲವನ್ನೂ ಅವರ ಬಾಯಿಂದುದುರಿದ ತಕ್ಷಣ ಹಾಜರುಪಡಿಸೋದಷ್ಟೇ ಅಲ್ಲ, ತಮ್ಮ ಅಗತ್ಯಗಳಿಗಾಗಿ ಕಾಯುವ ತಾಳ್ಮೆ ಕಲಿಸೋದೂ ಪ್ರೀತಿಯೇ...
ಅವರು ಹೋದ ದಾರಿಯಲ್ಲಿಯೇ ಅವರನ್ನು ಅವರ ಪಾಡಿಗೆ ಬಿಡುವುದಷ್ಟೇ ಅಲ್ಲ, ಸರಿಯಾದ ದಾರಿಯನ್ನು ತೋರಿಸುವುದೂ ಕೂಡ ಪ್ರೀತಿಯೇ...
ಅವರಿಗೆ ಅನಿಸಿದ್ದೆಲ್ಲವನ್ನೂ ಹೇಳುವಷ್ಟು ಸ್ವಾತಂತ್ರ್ಯ ಕೊಡುವುದಷ್ಟೇ ಅಲ್ಲ, ಯಾವ ಸಮಯದಲ್ಲಿ ಏನು ಮತ್ತು ಎಷ್ಟು ಮಾತನಾಡಬೇಕೆಂಬುದರ ಅರಿವು ಮೂಡಿಸೋದೂ ಪ್ರೀತಿಯೇ...
ಆಸೆ ಪಟ್ಟದ್ದೆಲ್ಲವನ್ನೂ ಕೊಂಡು ಯಾ ತಯಾರಿಸಿ ತಿನ್ನಿಸುವುದಷ್ಟೇ ಅಲ್ಲ, ತಮ್ಮ ದೇಹ ಮತ್ತು ಆರೋಗ್ಯದ ಬಗ್ಗೆ ನಿಗಾ ವಹಿಸೋದನ್ನು ರೂಢಿಸೋದೂ ಪ್ರೀತಿಯೇ...
ಅವರಿಗೆ ಬೇಕಾದ್ದನ್ನೆಲ್ಲಾ ಮಾಡೋದಕ್ಕೆ ಅನುವು ಮಾಡಿಕೊಡೋದಷ್ಟೇ ಅಲ್ಲ, ಮಾಡಲೇಬಾರದಂಥವುಗಳ ಬಗ್ಗೆ ತಿಳಿಹೇಳಿ ತಿದ್ದೋದೂ ಕೂಡ ಪ್ರೀತಿಯೇ...
ಅವರಿಗೆ ಬೇಕಾದಷ್ಟು ಖರ್ಚಿಗೆ ಹಣ ನೀಡೋದಷ್ಟೇ ಅಲ್ಲ, ಅದರ ದುಡಿಮೆಗೆ ಪಟ್ಟ ಶ್ರಮ ಮತ್ತದರ ಬೆಲೆ ತಿಳಿಸೋದೂ ಪ್ರೀತಿಯೇ...
ಸಾಯುವವರೆಗೆ ದುಡಿಯುವುದನ್ನಷ್ಟೇ ಕಲಿಸೋದಲ್ಲ, ದುಡಿತವನ್ನು ಉಳಿಸಿ ಭವಿಷ್ಯಕ್ಕೆ ಕೂಡಿಡೋದನ್ನು ಕಲಿಸೋದೂ ಪ್ರೀತಿಯೇ...
ತನ್ನಿಂದಾಗದ ಕೆಲಸವೇ ಇಲ್ಲ ಎಂಬಷ್ಟು ಹುರುಪು ತುಂಬೋದಷ್ಟೇ ಅಲ್ಲ, ನನ್ನಂತೆಯೇ ಇತರರೂ ಎಲ್ಲರೂ ಕೂಡಿ ನೆಮ್ಮದಿಯಿಂದಿರಬೇಕೆಂಬುದನ್ನು ತಿಳಿಸೋದೂ ಪ್ರೀತಿಯೇ...
ಬರಿಯ ಸುಖ, ಗೆಲುವು, ಸಂತೋಷಗಳನ್ನಷ್ಟೇ ಒಪ್ಪೋದಲ್ಲ, ಕಷ್ಟ, ನೋವು, ಸೋಲುಗಳನ್ನೂ ಅಷ್ಟೇ ಸಮನಾಗಿ ಸ್ವೀಕರಿಸೋದನ್ನ ಕಲಿಸೋದೂ ಪ್ರೀತಿಯೇ...
ದುಡಿಮೆಯ ಜಾಲದಲ್ಲಿ ಸಿಕ್ಕು ಯಾಂತ್ರಿಕವಾಗೋದಷ್ಟೇ ಅಲ್ಲ, ಮಾನವೀಯ ಮೌಲ್ಯಗಳ ರೂಢಿಸಿಕೊಳ್ಳೋದನ್ನ ಕಲಿಸೋದೂ ಪ್ರೀತಿಯೇ ...

*ಮಕ್ಕಳನ್ನು ಮುದ್ದಿಸುವುದಷ್ಟೇ ಅಲ್ಲ, ದಂಡಿಸುವುದೂ ಪ್ರೀತಿಯೇ....*



# ಪರ್ಸು ಭಾಗ್ಯ

ವಾಸವಿ ಗೂಡೂರು

**(ಧರಣಿ ಮಂಡಲ ಮಧ್ಯದೊಳಗೆ ಕವನದಂತೆ)**

ನಾರಿಮಣಿಯರ ಹೆಗಲನೇರಿ
ಮೆರೆಯುತಿಹ ಹಲವಾರು ರೀತಿಯ
ಚೀಲ ಪರ್ಸು ಬ್ಯಾಗುಗಳ ನಾ
ಪರಿಯನೆಂತು ಪೇಳ್ವೆನು----------1

ಅಂದ ಚೆಂದದ ಡ್ರೆಸ್ಸು  ಧರಿಸಿ
ಫೇಸ್ಗೆ ಮೇಕಪ್ ಟಚಪ್ ಕೊಟ್ಟು
ಅದರ ಮೇಲೊಂದು ಮಾಸ್ಕು ಹಾಕಿ
ಹೊರಗೆ ಹೋಗುವ ವೇಳೆಗೆ------2

ಕಪ್ಪು ಪರ್ಸು, ಕೆಂಪು ಪರ್ಸು
ಬಗೆ ಬಗೆಯ ಚೆಂದದ ಪರ್ಸು
ಯಾವುದು ತನ್ನ ಡ್ರೆಸ್ಗೆ ಮ್ಯಾಚು
ಹುಡುಗಿಯೊಬ್ಬಳು ಯೋಚಿಸೇ---3

ಲೆದರ್ ಆಗಲಿ ಜೂಟು ಆಗಲಿ
ಸ್ಟೈಲಲಿ  ಟೆಕ್ಸ್ಟೈಲು ಆಗಲಿ
ಮಾಡ್ ಆಗಿ ಡೆನಿಮ್ ಹಾಕಲೇ
ಎಂಬ ಯೋಚನೆ ಮಾಡಲು-------4

ಒಂದು ಪರ್ಸಿಗೆ ಒಂದೇ ಹಿಡಿಕೆ
ಇನ್ನೊಂದಕ್ಕೆ ಎರಡು ಹಿಡಿಕೆ
ಮತ್ತೊಂದಕ್ಕೆ ಉದ್ದದ ಸ್ಟ್ರ್ಯಾಪು
ಚಿಕ್ಕ ಹಿಡಿಯವು ಕೆಲವಿರೆ......5

ಕೋರ್ಸ್ ಬ್ರ್ಯಾಂಡಿದೆ ಗುಚ್ಚಿಯೊಂದಿದೆ
ಟ್ರೆಂಡಿಯಾದ ಫೆಂಡಿಯೊಂದಿದೆ
ಬ್ಯೆಟು ಕಾಣಲು ಬ್ಯೆಟೋನೊಂದಿದೆ
ಬೆಟರೇ ಕೋಚು  ಬರ್ಬೆರಿ.

ಬ್ಯಾಕಿಗ್ಹಾಕಲೇ ಕ್ಲಚ್ಚು ಹಿಡಿಯಲೇ
ರಿಸ್ಟಿಗ್ಹಾಕುವ ರಿಕ್ಲೆಟ್ಟು ಒಯ್ಯಲೇ
ದೊಡ್ಡ ಟೋಟೆ ಬ್ಯಾಗೇ ಧರಿಸಲೇ
ಬಾಡಿ ಕ್ರಾಸು ಹಾಕಲೇ------7

ಪಿನ್ನು ಬೇಕು , ಪೆನ್ನು ಬೇಕು
ಚೆನ್ನ ಲಿಪ್ಸ್ಟಿಕ್ ಕೋಂಬು ಬೇಕು
ಮುನ್ನ ಹಣವನೇ ಮರ್ತೆ ಬಿಟ್ಟೇನು
ಎನ್ನುತ ಚೀಲವೇ ತುಂಬಿತು-------8

ಇಷ್ಟು ಚಿಂತಿಸಿ ಪರ್ಸು ತುಂಬಿಸಿ
ಇಷ್ಟದ ಬ್ಯಾಗನು ಹೆಗಲಿಗೇರಿಸಿ
ಬಾಲೆ ನಡೆಯಲು ಬಣ್ಣದ ಬ್ಯಾಗು
ತನ್ನ ಭಾಗ್ಯಕೆ ನಕ್ಕಿತು--------



# ಮಕ್ಕಳು

ಮಧುಕರ್ ರಾವ್

ಮಕ್ಕಳಿದ್ದರೆ ಮನೆ ತುಂಬ,

ಚೆಲುವಿನ ನಲಿವಿನ ಪ್ರತಿಬಿಂಬ,

ತಂದೆ ತಾಯಿಯರ ಜೀವನದ ಶುಭಾರಂಭ,
ಗಂಡು-ಹೆಣ್ಣು ಮಕ್ಕಳೇ ತಂದೆತಾಯಿಯ ಬಿಂಬ

ಜಂಭದಿ ಬೆಳೆಸಿದರೆ, ಮಕ್ಕಳು ಆಗುವರು ಹುಂಬ,
ಕಲಿಸಿದರೆ ಒಳ್ಳೆಯ ನಡೆನುಡಿಯ ಆರಂಭ,

ಸತ್ಪ್ರಜೆಯ ಮುನ್ಸೂಚನೆಯ ಪ್ರಾರಂಭ,
ಇಂದಿನ ಮಕ್ಕಳೇ ಮುಂದೆ ದೇಶದ ಆಧಾರ ಸ್ಥಂಬ,

ಮಕ್ಕಳ ಮೇಲಿನ ಪ್ರೀತಿ,
ನೆಹರು ಹುಟ್ಟಿದ ಜಯಂತಿ,

ಮಕ್ಕಳಿಗೋಸ್ಕರ ಸಂಭ್ರಮಿಸುವ ನೀತಿ,
ಆಯಿತು ಮಕ್ಕಳ ದಿನಾಚರಣೆಯ ರೀತಿ,

ಬಾಲ್ಯಾವಸ್ಥೆಯೇ ಅಂದ,
ಸವಿ ಸವಿನೆನಪೇ ಚೆಂದ

ಅರಳುವ ಮೊಗ್ಗಿನ ಮಕರಂದ,
ಕಪಟವಿಲ್ಲದ ಸ್ನೇಹಾನುಬಂಧ

ಚಿಂತೆಯಿಲ್ಲದ ಆನಂದ,
ಮತ್ತೆ ಸಿಗೋಲ್ಲ ಬಾಲ್ಯದಾನಂದ

ಪ್ರತಿವರ್ಷ ನೆನೆಯೋಣ ನೆನಪಿನಂಗಳದಿಂದ,
ಸಂಭ್ರಮಿಸೋಣ ಮಕ್ಕಳ ದಿನದ ಆನಂದದ ಕಂದ.

-

**ಪ್ರಕಾಶಕರು:**
ಬೃಂದಾವನ ಕನ್ನಡ ಸಂಘ
501(3)(c) ಪಡೆದ ಚಾರಿಟಿ ಸಂಸ್ಥೆ
Karnataka Cultural Organization (KCO) Brindavana
New Jersey, USA

www.Brindavana.org

© 2021 All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ. ಚಿತ್ರ ಕೃಪೆ ಅಂತರ್ಜಾಲ/ಲೇಖಕರು

ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ. ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.brindavana.org ಗೆ ಭೇಟಿ ಕೊಟ್ಟು, ನಿಮ್ಮ ವಿವರಗಳನ್ನು ನೀಡಿ, ಸದಸ್ಯತ್ವ ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org



# ಸ್ವಲ್ಪ ಸಿಹಿ.. ಸ್ವಲ್ಪ ಖಾರ

ಅನುಪಮಾ

## ಬಾದಾಮ್ ಪುರಿ

1 1 /2 ಕಪ್ ಮೈದಾ ಹಿಟ್ಟು

2 ಟೇಬಲ್ ಸ್ಪೂನ್ ಬೇಕಿಂಗ್ ಪೌಡರ್

1 ಟೀ ಸ್ಪೂನ್ ಸಕ್ಕರೆ

2 ಟೇಬಲ್ ಸ್ಪೂನ್ ತುಪ್ಪ

ಒಂದು ಪಾತ್ರೆಯಲ್ಲಿ ಮೇಲಿನ ಎಲ್ಲ ಪದಾರ್ಥಗಳನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ ನಂತರ ಸ್ವಲ್ಪ ಹಾಲನ್ನು ಹಾಕಿ ಗಟ್ಟಿಯಾಗಿ ಕಲೆಸಿ ಮೇಲೆ ಎಣ್ಣೆಯನ್ನು ಸವರಿ ತಟ್ಟೆಯನ್ನು ಮುಚ್ಚಿ ಹತ್ತು ನಿಮಿಷ ಇಡಬೇಕು.

ಒಂದು ಪಾತ್ರೆಯಲ್ಲಿ 1 1 /2 ಕಪ್ ಸಕ್ಕರೆ, 1 ಕಪ್ ನೀರು ಹಾಕಿ ಚೆನ್ನಾಗಿ ಕುದಿಸಿ ಅದು ಒಂದು ಎಳೆ ಪಾಕ ಬಂದ ಮೇಲೆ 3 - 4 ನಿಂಬೆ ರಸ ಕೆಲವು ಕೇಸರಿ ದಳಗಳನ್ನು ಹಾಕಿ ಮುಚ್ಚಿಡಬೇಕು. ಏಲಕ್ಕಿ ಪುಡಿಯನ್ನು ಸೇರಿಸಬೇಕು.
ಕಲೆಸಿದ ಹಿಟ್ಟನ್ನು ನಾದಿ ಸಣ್ಣ ಸಣ್ಣ ಉಂಡೆಗಳನ್ನು ಮಾಡಿ ಪೂರಿ ತರಹ ಒತ್ತಿ ತುಪ್ಪದ ಸಾಟಿಯನ್ನು ಸವರಿ ಮತ್ತೆ ಮಡಚಿ ಅದರ ಮೇಲೂ ತುಪ್ಪದ ಸಾಟಿಯನ್ನು ಹಾಕಿ ತ್ರಿಕೋನ ಆಕಾರವಾಗಿ ಮಡಿಸಿ ಸ್ವಲ್ಪ ಲಟ್ಟಣಿಗೆಯಿಂದ ಒತ್ತಿ ಅದರ ಮಧ್ಯದಲ್ಲಿ ಒಂದು ಲವಂಗವನ್ನು ಚುಚ್ಚಿ ಇಡಬೇಕು.

ಬಾಣಲೆಯಲ್ಲಿ ಎಣ್ಣೆ ಹಾಕಿ ಕಾದನಂತರ ಬಾದಾಮ್ ಪೂರಿಗಳನ್ನು ಹಾಕಿ ಮಧ್ಯಮ ಉರಿಯಲ್ಲಿ ನಿಧಾನವಾಗಿ ಹೊಂಬಣ್ಣ ಬರುವವರೆಗೂ ಗರಿಗರಿಯಾಗಿ ಕರಿದು ಬಿಸಿಯಾದ ಪಾಕಕ್ಕೆ ಹಾಕಿ ನಾಲಕ್ಕು ನಿಮಿಷ ಬಿಟ್ಟು ತೆಗೆದು ಮೇಲೆ ಕೊಬ್ಬರಿ ಪುಡಿಯನ್ನು ಉದುರಿಸಿ ಅಲಂಕರಿಸಬೇಕು.

ಈಗ ಬಾದಾಮ್ ಪುರಿ ಸವಿಯಲು ಸಿದ್ಧ .





## ಓಡಪ್ಪೆ

ಅಕ್ಕಿ ಹಿಟ್ಟು 1 ಕಪ್

ಕಾಯಿ ತುರಿ 1 / 4 ಕಪ್

ಉಪ್ಪು ರುಚಿಗೆ ತಕ್ಕಷ್ಟು

ಅಕ್ಕಿ ಹಿಟ್ಟಿಗೆ ಕಾಯಿತುರಿ ಉಪ್ಪು ನೀರು ಹಾಕಿ ದೋಸೆ ಹಿಟ್ಟಿಗಿಂತ ಸ್ವಲ್ಪ ತೆಳುವಾಗಿ ಕಲೆಸಿ.

ಅರ್ಧ ಘಂಟೆಯ ನಂತರ ದೋಸೆ ಹೆಂಚಿಗೆ ಎಣ್ಣೆ ಸವರಿ ಹಿಟ್ಟನ್ನು ತೆಳುವಾಗಿ ಹಾಕಿ ಒಂದು ತಟ್ಟೆಯನ್ನು ಮುಚ್ಚಿ ಒಂದೇ ಕಡೆ ನಿಧಾನಯಾಗಿ ಬೇಯಿಸಬೇಕು.

ಈಗ ಸವಿಯಾದ ದೋಸೆ ನಿಮಗಿಷ್ಟವಾದ ಚಟ್ನಿಯೊಡನೆ ಸೇವಿಸಲು ತಯಾರು .

.



# ಸಾದಾ ಹಲ್ವಾ

ಲಕ್ಷ್ಮಿ ಕೊಲಾಲ್

**ಸಾದಾ ಹಲ್ವಾ**

1 ಕಪ್ ಬಾದಾಮಿ

1/ 2 ಕಪ್ ಕಡ್ಲೆಕಾಯಿ  ಬೀಜ .

1 / 2 ಕಪ್  ಗಸಗಸೆ .

1 / 2  ಕಪ್ ಸಕ್ಕರೆ  .

2 ಚಮಚ  ತುಪ್ಪ.

ಕೇಸರಿ ಎಸಳುಗಳು .

ಬಾದಾಮಿ, ಕಡ್ಲೆಕಾಯಿ  ಬೀಜ ಮತ್ತು ಗಸಗಸೆಯನ್ನು 7 ಗಂಟೆಗಳ ಕಾಲ ನೀರಿನಲ್ಲಿ ನೆನೆಸಬೇಕು. ನಂತರ ಮಿಕ್ಸಿ ಜಾರ್ ನಲ್ಲಿ ನುಣ್ಣಗಾಗುವ ತನಕ ರುಬ್ಬಿಕೊಳ್ಳಬೇಕು. ಅನಂತರ ಒಂದು ದಪ್ಪ ತಳವಿರುವ ಪಾತ್ರೆಗೆ ತುಪ್ಪವನ್ನು ಹಾಕಿ ಅದು ಕರಗುತ್ತಿದ್ದಂತೆ  ರುಬ್ಬಿದ ಮಿಶ್ರಣವನ್ನು ಹಾಕಿ ಚೆನ್ನಾಗಿ ಬೇಯಿಸಬೇಕು ಒಂದೆರಡು ನಿಮಿಷದ ನಂತರ ಸಕ್ಕರೆಯನ್ನು ಸೇರಿಸಿ ಚೆನ್ನಾಗಿ ಬೇಯಿಸಿ. ಮಿಶ್ರಣವು ಪಾತ್ರೆಯ ತಳದಿಂದ ಬಿಟ್ಟು ಬಂದಾಗ ಒಲೆಯ ಉರಿಯನ್ನು ಆರಿಸಬೇಕು . ಕೇಸರಿ  ದಳಗಳು ಮತ್ತು ಬಾದಾಮಿಗಳಿಂದ ಅಲಂಕರಿಸಬೇಕು .

ಈಗ ಸಾದಾ ಹಲ್ವಾ ಸವಿಯಲು ತಯಾರು . ಇದನ್ನು ಬಿಸಿಯಾಗಿ ಅಥವಾ ತಣಿಸಿಯೂ ಸವಿಯಬಹುದು .





# ವಿವಿಧ ಕಷಾಯಗಳು - ಭಾಗ 1

*ಟಿ.ಆರ್.ಮಂಜುನಾಥ*, *ಬೆಂಗಳೂರು*

ಪ್ರಪಂಚದಾದ್ಯಂತ ಕರೋನಾ ಅಲೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಈ ಕರೋನಾ ವೈರಸ್ ರೋಗನಿರೋಧಕ ಶಕ್ತಿ ಕಡಿಮೆ ಇರುವ ಹಾಗೂ ಶ್ವಾಸಕೋಶದ ತೊಂದರೆ ಇರುವವರಿಗೆ ಬಹಳ ತೊಂದರೆ ಕೊಡುತ್ತದೆ ಎಂಬುದು ತಜ್ಞರ ಅಭಿಪ್ರಾಯ. ಆದರೆ ಈ ಸಮಯದಲ್ಲಿ ಎಲ್ಲರ ಗಮನ ಸೆಳೆದದ್ದು ಭಾರತೀಯ ಆಹಾರ ಪದ್ಧತಿ. ಇದರಲ್ಲಿ ಮುಖ್ಯವಾಗಿ ಅವರು ಸೇವಿಸುವ ವಿವಿಧ ಕಷಾಯಗಳು. ಹಿಂದಿನ ತಲೆಮಾರಿನವರಾದ ನಮಗೆಲ್ಲ ಅದು ವಿಶೇಷವಲ್ಲದಿದ್ದರೂ ಇಂದಿನ ಅನೇಕ ಭಾರತೀಯರಿಗೆ ಅದು ಅಪಥ್ಯವಾಗಿತ್ತು. ಆದರೆ ಕರೋನಾ ಅದರ ಮಹತ್ವವನ್ನು ಸ್ವಲ್ಪ ಮಟ್ಟಿಗೆ ಎಲ್ಲರೂ ಅರಿಯುವಂತೆ ಮಾಡಿತು. ಚಳಿ ದೇಶಗಳಲ್ಲಂತೂ ಈ ಕಷಾಯಗಳು ಬಹು ಉಪಯೋಗಿ ಎಂದರೆ ತಪ್ಪಾಗಲಾರದು. ಅಂತಹ ಕೆಲವು ಕಷಾಯಗಳನ್ನು ಇಲ್ಲಿ ಪರಿಚಯಿಸಿದ್ದೇನೆ. ಎಲ್ಲರೂ ಅಗಾಗ ಬಳಕೆ ಮಾಡಿದರೆ ಮನೆಮಂದಿಗೆಲ್ಲಾ ಒಳ್ಳೆಯದು.

ಸಾಮಾನ್ಯವಾಗಿ ಯಾವುದಾದರೂ ವಿಶೇಷ ಸಂದರ್ಭಗಳಲ್ಲಿ ಹೆಚ್ಚಿನ ಆಹಾರ ಸೇವಿಸಿದಾಗ ಅದರಿಂದ ದೇಹಕ್ಕೆ ತೊಂದರೆಯಾಗದಿರಲು ಎಲ್ಲ ಹಿಂದಿನ ಮನೆಗಳಲ್ಲೂ ಮಾಡುತ್ತಿದ್ದ ಕಷಾಯ ಈ ಕೆಳಗಿನದು.



### ಮನೆ ಕಷಾಯ

**ಸಾಮಗ್ರಿಗಳು (8 ಲೋಟ ಕಷಾಯಕ್ಕೆ)**

ಹಸಿಶುಂಠಿ 2 ಇಂಚು ಚೆನ್ನಾಗಿ ಜಜ್ಜಿದ್ದು
ಕಾಳುಮೆಣಸು 8-10 ತರಿತರಿಯಾಗಿ ಕುಟ್ಟಿದ್ದು
ಕೊತ್ತಂಬರಿಬೀಜ 2 ಟೀ ಚಮಚ ತರಿತರಿಯಾಗಿ ಕುಟ್ಟಿದ್ದು
ಜಜ್ಜಿದ ಲವಂಗ 2
ಜಜ್ಜಿದ ಏಲಕ್ಕಿ 2
ಅತಿಮಧುರ / ಜ್ಯೇಷ್ಠಮಧು ಇದ್ದರೆ 1 ಇಂಚು (ಜಜ್ಜಿದ್ದು)
ಕಲ್ಲು ಸಕ್ಕರೆ ಅಥವಾ ಬೆಲ್ಲ ರುಚಿಗೆ ತಕ್ಕಷ್ಟು
ನೀರು 6 ಲೋಟ
ಹಾಲು 2 ಲೋಟ

ಒಂದು ಪಾತ್ರೆಗೆ ನೀರನ್ನು ಹಾಕಿ ಒಲೆಯ ಮೇಲಿತ್ತು ಕುದಿಸಿ. ಅದಕ್ಕೆ ಹಸಿಶುಂಠಿ, ಕಾಳುಮೆಣಸು, ಕೊತ್ತಂಬರಿ ಬೀಜ, ಲವಂಗ, ಏಲಕ್ಕಿ, ಅತಿಮಧುರ, ಕಲ್ಲುಸಕ್ಕರೆ ಅಥವಾ ಬೆಲ್ಲ ಹಾಕಿ 10 ನಿಮಿಷ ಕುದಿಸಿ. ಅದಕ್ಕೆ ಹಾಲನ್ನು ಸೇರಿಸಿ 2 ನಿಮಿಷ ಕುದಿಸಿ. ನಂತರ ಅದನ್ನು ಬೇರೊಂದು ಪಾತ್ರೆಗೆ ಸೋಸಿ. ಬಿಸಿಬಿಸಿಯಾಗಿ ಒಂದು ಲೋಟ ಕುಡಿಯಿರಿ. ದೇಹಕ್ಕೆ ಮತ್ತು ಮನಸ್ಸಿಗೆ ಹಿತವಾಗಿರುತ್ತದೆ. ಆಹಾರ ಸೇವನೆ ನಂತರ ಹೊಟ್ಟೆ ಭಾರವೆನಿಸಿದಾಗ, ಈ ಕಷಾಯ ಹೆಚ್ಚು ಉಪಯುಕ್ತ.

### ಪುದೀನಾ ಕಷಾಯ

**ಸಾಮಗ್ರಿಗಳು**

ಪುದೀನಾ ಎಲೆ ಅರ್ಧ ಕಪ್ ಸಣ್ಣಗೆ ಹೆಚ್ಚಿದ್ದು
ಜೀರಿಗೆ 1 ಚಮಚ
ಕಲ್ಲುಸಕ್ಕರೆ ರುಚಿಗೆ

ಒಂದು ಪಾತ್ರೆಯನ್ನು ಒಲೆಯ ಮೇಲಿಟ್ಟು ಅದಕ್ಕೆ 4 ಲೋಟ ನೀರು ಹಾಕಿ ಕುದಿಸಿ ಅದಕ್ಕೆ ಮೇಲಿನ ಎಲ್ಲ ಸಾಮಾಗ್ರಿಗಳನ್ನು ಹಾಕಿ ಚೆನ್ನಾಗಿ ಕುದಿಸಿ.ಸೋಸಿದರೆ ಪುದೀನಾ ಕಷಾಯ ಸಿದ್ಧ. ಗ್ಯಾಸ್ಟ್ರಿಕ್ ತೊಂದರೆಗೆ ಬಹಳ ಒಳ್ಳೆಯದು.

### ಚಂದನ ಕಷಾಯ

**ಸಾಮಗ್ರಿಗಳು**

ತೇದುಕೊಂಡ ಕೆಂಪು ಚಂದನ 4 ಚಮಚ
ಹಾಲು 1 ಕಪ್
ಕಲ್ಲುಸಕ್ಕರೆ ರುಚಿಗೆ

ಒಲೆಯ ಮೇಲೆ ಪಾತ್ರೆ ಇಟ್ಟು ಅದಕ್ಕೆ ಹಾಲು ಕಲ್ಲುಸಕ್ಕರೆ ಹಾಕಿ ಚೆನ್ನಾಗಿ ಕುದಿಸಿ. ಅದಕ್ಕೆ ತೇದ ಚಂದನ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಬಿಸಿ ಇರುವಾಗಲೆ ಕುಡಿಯಿರಿ. ಕೆಮ್ಮು, ಗಂಟಲ ಕೆರೆತ ಒಂದು ವಾರದಲ್ಲಿ ಕಡಿಮೆಯಾಗುತ್ತದೆ.

### ಅರಿಶಿನ ಕಷಾಯ

**ಸಾಮಗ್ರಿಗಳು**

ಅರಿಶಿನ ಪುಡಿ ಅರ್ಧ ಚಮಚ
ಹಾಲು 1 ಲೋಟ
ತುಪ್ಪ ಅಥವಾ ಬೆಣ್ಣೆ ಅರ್ಧ ಚಮಚ
ಕಲ್ಲುಸಕ್ಕರೆ ರುಚಿಗೆ

ಒಂದು ಪಾತ್ರೆಯನ್ನು ಒಲೆಯ ಮೇಲಿಟ್ಟು ಅದಕ್ಕೆ ಹಾಲು, ಕಲ್ಲುಸಕ್ಕರೆ ಹಾಕಿ ಕುದಿಸಿ. ನಂತರ ಅದಕ್ಕೆ ಅರಿಶಿನ ಮತ್ತು ತುಪ್ಪ ಅಥವಾ ಬೆಣ್ಣೆಯನ್ನು ಹಾಕಿ. ಬಿಸಿ ಬಿಸಿ ಇರುವಾಗಲೆ ಕುಡಿಯಿರಿ. ಬಾಯಿಹುಣ್ಣ, ನೆಗಡಿ, ಕೆಮ್ಮು ಕಡಿಮೆಯಾಗುತ್ತದೆ.

### ಜೀರಿಗೆ ಕಷಾಯ

**ಸಾಮಗ್ರಿಗಳು**

ಜೀರಿಗೆ 2 ಚಮಚ
ತುಪ್ಪ ಅರ್ಧ ಚಮಚ
ನೀರು 3 ರಿಂದ 4 ಲೋಟ
ಕಲ್ಲುಸಕ್ಕರೆ ರುಚಿಗೆ

ಜೀರಿಗೆಯನ್ನು ಹುರಿದು ನುಣ್ಣಗೆ ಪುಡಿಮಾಡಿ. ನೀರನ್ನು ಕುದಿಸಿ ಅದಕ್ಕೆ ಜೀರಿಗೆ ಪುಡಿ ಹಾಕಿ ನೀರು ಎರಡು ಲೋಟಕ್ಕೆ ಬರುವಷ್ಟು ಕುದಿಸಿ. ನಂತರ ಕಲ್ಲುಸಕ್ಕರೆ ಹಾಕಿ, ತುಪ್ಪ ಹಾಕಿ ಮಿಶ್ರಣ ಮಾಡಿ. ದಿನಕ್ಕೆ 3 ಬಾರಿ ಕುಡಿದರೆ ಅಸಿಡಿಟ, ಗ್ಯಾಸ್ಟ್ರಿಕ್ ಸಮಸ್ಯೆ ನಿವಾರಣೆಯಾಗುತ್ತದೆ. ದೇಹವನ್ನು ತಂಪಾಗಿಡುತ್ತದೆ.

### ಜಾಯಿಕಾಯಿ ಕಷಾಯ

**ಸಾಮಗ್ರಿಗಳು**


ಜಾಯಿಕಾಯಿ ಕಾಲು ಚೂರು
ಧನಿಯಾ 1 ಚಮಚ
ಜೀರಿಗೆ 1 ಚಮಚ
ಏಲಕ್ಕಿ 3-4
ಕಲ್ಲುಸಕ್ಕರೆ ಅಥವಾ ಬೆಲ್ಲ ರುಚಿಗೆ

ಜಾಯಿಕಾಯಿ, ಜೀರಿಗೆ, ಧನಿಯಾ, ಏಲಕ್ಕಿ ಹುರಿದು ಪುಡಿಮಾಡಿಕೊಳ್ಳಿ.
ಒಂದು ಲೋಟ ನೀರು ಕುದಿಸಿ ಅದಕ್ಕೆ ಈ ಪುಡಿ ಹಾಕಿ ಕುದಿಸಿ ಅರ್ಧ ಲೋಟಕ್ಕೆ ತನ್ನಿ. ಅದಕ್ಕೆ ಕಲ್ಲುಸಕ್ಕರೆ ಅಥವಾ ಬೆಲ್ಲ ಹಾಕಿ ಕುದಿಸಿ. ನಂತರ ಅದನ್ನು ಸೋಸಿ ಬಿಸಿ ಬಿಸಿಯಾಗಿ ಕುಡಿಯಿರಿ. ಹವಾಮಾನ ವೈಪರೀತ್ಯದಿಂದ ಬರುವ ನೆಗಡಿ, ಕಫಾ, ಶೀತಕ್ಕೆ ಈ ಕಷಾಯ ಬಹಳ ಒಳ್ಳೆಯದು.



# ಪುಟಾಣಿ–ಪ್ರಪಂಚ





# ಮಕ್ಕಳ ಕೈಯಲ್ಲಿ ಅರಳಿದ ಕಲೆ






ದಿಯಾ ರಜನೀಶ



# ಮಕ್ಕಳ ಕೈಯಲ್ಲಿ ಅರಳಿದ ಕಲೆ



ಅದ್ವೈತ್ ಆತ್ರೇಯ



# ಮಕ್ಕಳ ಕೈಯಲ್ಲಿ ಅರಳಿದ ಕಲೆ



ಸಾರ್ಥಕ್ ರಾವ್

## ಗಂಧದ ಗುಡಿಯ ಮಿನುಗುವ ತಾರೆಗಳು



# ಮಕ್ಕಳ ಕೈಯಲ್ಲಿ ಅರಳಿದ ಕಲೆ




ಶ್ಲೋಕ್ ಚಿಂತಕುಂಟ





ಆರುಷಿ ಗೌಡ




Deepavali - Arushi Gowda

ದೀಪಾವಳಿಗ ಒಂದು ದಿನ ಶಾಲೆಗೆ ರಜೆ ಹಾಕಿದ್ದೆ.
ಬೆಳಗ್ಗೆ ಅಮ್ಮ ಮನೆ ಮುಂದೆ ದೊಡ್ಡ
ರಂಗೋಲಿ ಹಾಕಿದರು, ಮತ್ತು ನಾನು ಅದಿಕೆ
ಬಣ್ಣ ತುಂಬಿದೆ. ಮಧ್ಯಾಹ್ನ, ನನ್ನ ಸ್ನೇಹಿತರು
ಬಂದರು, ಮತ್ತು ನಾವು ಪೂಜೆ ಮಾಡಿದೆವು.
ಪೂಜೆ ಮುಗಿಸಿ ರಾತ್ರಿ ಊಟ ಮಾಡಿದೆವು,
ಮತ್ತು ನಾನು ತುಂಬ ಸಿಹಿತಿಂಡಿಗಳನ್ನು
ತಿಂದೆ. ಅದಾದ ನಂತರ ನಾವೆಲ್ಲ ಮಕ್ಕಳು
ಪಟಾಕಿ ಹೊಡೆದೆವು. ಅದು ತುಂಬ ಮಜಾತ್ತು.
ಆದರೆ ಮರುದಿನ ನಾನು ಶಾಲೆಗೆ
ಹೋಗಬೇಕಾಗಿತ್ತು, ಮತ್ತು ಅದು ನನಗೆ
ದುಃಖ ತಂದಿತು. ಆದರೆ ದೀಪಾವಳಿ
ನಿಜಕ್ಕೂ ಖುಷಿಯಾಗಿತ್ತು.





**ಪ್ರಖೇತ್**



## ಹ್ಯಾಪಿ ಹ್ಯಾಲೋವೀನ್!

ಹ್ಯಾಲೋವೀನ್ ಭಯಾನಕ ಮತ್ತು ಭಯದ ಹಬ್ಬವಾಗಿದೆ. ಆದರೆ ಕೆಲವರಿಗೆ ಮಾತ್ರ ಗೊತ್ತು ಇದು ಎಷ್ಟು ಸಂತೋಷದಾಯಕವಾದ ಹಬ್ಬ ಎಂದು. ನನ್ನ ಲೇಖನದಲ್ಲಿ, ನಾನು ಹ್ಯಾಲೋವೀನ್ ದಿನದ ನನ್ನ ಟ್ರಿಕ್-ಆರ್-ಟ್ರೀಟಿಂಗ್ ಸಾಹಸವನ್ನು ಹಂಚಿಕೊಳ್ಳುತ್ತೇನೆ, ಹಾಗೆ ನೀವು ಹ್ಯಾಲೋವೀನ್ ದಿನದಂದು ಹೇಗೆ ಭಯಾನಕವಾಗಿ ಕಾಣಬಹುದು ಎಂದು ಕೆಲವೊಂದು ಟಿಪ್ಸ್ ಕೊಡುತ್ತೇನೆ.


ಅಂದು ನಾನು ಮತ್ತು ನನ್ನ ಸ್ನೇಹಿತರು ಒಟ್ಟಿಗೆ ಸೇರಿದೆವು. ನಾನು ಅಸ್ಥಿಪಂಜರದ ವೇಷವನ್ನು ಧರಿಸಿದ್ದೆ ಮತ್ತು ನನ್ನ ಪುಟಾಣಿ ತಮ್ಮ ಕುಂಬಳಕಾಯಿಯ ವೇಷವನ್ನು ಧರಿಸಿದ್ದ. ಮೊದಲು ನಾವು ಪಾರ್ಟಿಯಲ್ಲಿ ಸ್ವಲ್ಪ ತಿಂಡಿ ತಿಂದೆವು. ಸ್ನಾಕ್ಸ್ ಗಳನ್ನು ತುಂಬಾ ಎಂಜಾಯ್ ಮಾಡಿ ತಿಂದು ಆಮೇಲೆ ನಾವು ಟ್ರಿಕ-ಆರ್-ಟ್ರೀಟಿಂಗ್ ಗೆ ಹೊರಟೆವು. ತುಂಬಾ ಮನೆಗಳನ್ನು ಸುತ್ತಿ ಬಂದು ಕೊನೆಗೆ ನನ್ನ ಚಾಕೊಲೇಟ್ ಎಣಿಸಿ ನೋಡಿದಾಗ ಒಟ್ಟಿನಲ್ಲಿ 17 ಚಾಕೊಲೇಟ್ ಸಿಕ್ಕಿದ್ದುವು.

ನಿಮ್ಮ ವೇಷ ಅಷ್ಟು ಭಯಾನಕವಲ್ಲ ಅನಿಸುತ್ತ ಇದೆಯಾ? ಸರಿ, ಚಿಂತಿಸಬೇಡಿ, ನನ್ನ ಕೆಲವು ಸಲಹೆಗಳನ್ನು ಪಾಲಿಸಿದರೆ ನೀವೂ ಸಹ ಹ್ಯಾಲೋವೀನ್ ದಿನದಂದು ಭಯಾನಕವಾಗಿ ಕಾಣಬಹುದು. ಕೆಲವೊಂದು ಸಲಹೆಗಳು...

1. ವೇಷಭೂಷಣ- ಮೊದಲು ಒಂದು ಭಯನಕವಾದ ಪಾತ್ರವನ್ನು ಆರಿಸಿಕೊಳ್ಳಿ
2. ಪರಿಕರಗಳು- ಕೃತಕ ಕೋರೆಹಲ್ಲುಗಳ ಒಂದು ಸೆಟ್ ಚೆನ್ನಾಗಿರುತ್ತದೆ!
3. ನಕಲಿ ರಕ್ತ- ನಿಮ್ಮನ್ನು ಹೆಚ್ಚು ಸ್ಕೇರಿ ಆಗಿ ಕಾಣುವಂತೆ ಮಾಡುತ್ತದೆ!


ನನ್ನ ಅಭಿಪ್ರಾಯದಲ್ಲಿ, ಹ್ಯಾಲೋವೀನ್ ಬಹಳ ಮೋಜಿನ ಹಬ್ಬ. ಟ್ರಿಕ್-ಆರ್-ಟ್ರೀಟಿಂಗ್ ಮಕ್ಕಳ ಮುಖದಲ್ಲಿ ಮಂದಹಾಸ ಮೂಡಿಸುತ್ತದೆ. ನಿಜ ಹೇಳಬೇಕೆಂದರೆ, ಹ್ಯಾಲೋವೀನ್ ಒಂದು ಭಯಾನಕ ಅನುಭವವಾಗಿದೆ, ಆದರೂ ಮನಸ್ಸನ್ನು ತುಂಬಾ ಸಂತೋಷಪಡಿಸುತ್ತದೆ. ಎಲ್ಲರಿಗೂ ಧನ್ಯವಾದಗಳು.







**ಸಾರ್ಥಕ್ ರಾವ್**



ನನ್ನ ಇಷ್ಟವಾದ ಹಬ್ಬ ದೀಪಾವಳಿ. ಲೇ: ಸಾರ್ಥಕ್ ರಾವ್

ನನಗೆ ಇಷ್ಟವಾದ ಹಬ್ಬ ದೀಪಾವಳಿ. ಏಕೆಂದರೆ ಆ ದಿನಗಳಲ್ಲಿ
ನಾವು ಸ್ನೇಹಿತರೊಂದಿಗೆ ಸೇರಿಕೊಳ್ಳುತ್ತೇವೆ, ಪಟಾಕಿಗಳನ್ನು
ಹೊಡೆಯುತ್ತೇವೆ, ಸಿಹಿತಿಂಡಿಗಳನ್ನು ತಿನ್ನುತ್ತೇವೆ, ಹಲವಾರು
ದೀಪಗಳನ್ನು ಬೆಳಗಿಸಿ ಲಕ್ಷ್ಮಿ ಪೂಜೆ ಮಾಡಿ ಸಂಭ್ರಮದಿಂದ
ಬಂಧು ಬಾಂಧವರೊಂದಿಗೆ ಕೂಡಿ ಆಚರಿಸುತ್ತೇವೆ.
ನನಗೆ ಇಷ್ಟವಾದ ದೀಪಾವಳಿಯ ಸಿಹಿತಿಂಡಿ ಎಂದರೆ ಗುಲಾಬ್
ಜಾಮೂನ್. ಏಕೆಂದರೆ ಅದನ್ನು ತಿನ್ನುವಾಗ ಇನ್ನೂ ಹೆಚ್ಚು ಹೆಚ್ಚು
ತಿನ್ನಲು ಬಯಕೆಯಾಗುತ್ತದೆ. ನನ್ನ ಇಷ್ಟವಾದ ಪಟಾಕಿ ಮಾಲೆ
ಪಟಾಕಿ. ಏಕೆಂದರೆ ಅದು ಎಲ್ಲಡೆ ಕಾಣಿಸಿಕೊಳ್ಳುತ್ತದೆ. ದೀಪಾವಳಿಯಲ್ಲಿ
ನನಗೆ ಇಷ್ಟವಾದ ದಿನವೆಂದರೆ ಗೋವರ್ಧನ ಪೂಜೆ. ಏಕೆಂದರೆ ಆ
ದಿನ ನಾವು ಕೃಷ್ಣನನ್ನು ಪ್ರಾರ್ಥಿಸುತ್ತೇವೆ. ಕೃಷ್ಣ ನನಗೆ ಇಷ್ಟವಾದ ದೇವರು
ಕೂಡ. ಈ ಹಬ್ಬ ಸಂಬಂಧಗಳನ್ನು ಬೆಸೆದು ಪ್ರೀತಿಯನ್ನು ತುಂಬಿ
ಸೌಹಾರ್ದತೆಯಿಂದ ಬೆರೆಯಲು ಅನುವು ಮಾಡಿ ಕೊಡುತ್ತದೆ.





ವಿ. ಪ್ರಸನ್ನ ಕುಮಾರ್, ನ್ಯೂ ಜರ್ಸಿ







# ಕ್ಯಾಮೆರಾ ಕಣ್ಣು



ವಿ. ಪ್ರಸನ್ನ ಕುಮಾರ್, ನ್ಯೂ ಜರ್ಸಿ





ವಿ. ಪ್ರಸನ್ನ ಕುಮಾರ್, ನ್ಯೂ ಜರ್ಸಿ









ವಿ. ಪ್ರಸನ್ನ ಕುಮಾರ್, ನ್ಯೂ ಜರ್ಸಿ




ಜರ್ಮನಿಯಲ್ಲಿ ಕ್ರಿಸ್ಮಸ್ ಮಾರುಕಟ್ಟೆಯಲಿ ಆನಂದ
ಮುಸುಕಿಲ್ಲದೇ ಇದ್ದರೆ ಜನರಿಗೆ ಪ್ರವೇಶ ನಿರ್ಬಂಧ

